ಅಧ್ಯಾಯ - ೧೨

## ಸ್ಥಳೀಯ ಸ್ವಯಂ ಆಡಳಿತ ಸಂಸ್ಥೆಗಳು

ಪ್ರಜಾಪ್ರಭುತ್ವ ಮಾದರಿಯ ಆಡಳಿತ ವ್ಯವಸ್ಥೆಯಲ್ಲಿ ಅಧಿಕಾರ, ಕಾರ್ಯ ನಿರ್ವಹಣೆ ಮತ್ತು ಹೊಣೆಗಾರಿಕೆಗಳಲ್ಲಿ ವಿಕೇಂದ್ರೀಕರಣದ ಅನಿವಾರ್ಯತೆ ಹಿಂದೆಂದಿಗಿಂತಲೂ ಇಂದು ಹೆಚ್ಚು ಅವಶ್ಯಕವಾಗಿದೆ. ಭೌಗೋಳಿಕವಾಗಿ ಸೀಮಿತವಾದ ಒಂದು ಹಳ್ಳಿ, ಊರು, ಪಟ್ಟಣ, ನಗರ, ಸಮುದಾಯ ಇವುಗಳ ನಾಗರಿಕ ಆಡಳಿತವನ್ನು ಸ್ಥಳೀಯ ನಿವಾಸಿಗಳು, ಶಾಸನ ಬದ್ಧ ಸ್ವಯಂ ಅಧಿಕಾರ ಹೊಂದಿದ ಪ್ರಾತಿನಿಧಿಕ ಸಂಸ್ಥೆಯ ಮೂಲಕ ನಿರ್ವಹಿಸುವುದಕ್ಕೆ ಸ್ಥಳೀಯ ಸರ್ಕಾರ ಅಥವಾ ಸ್ಥಾನಿಕ ಸ್ವರಾಜ್ಯ ಸಂಸ್ಥೆ ಎಂದು ಪರಿಗಣಿಸಲಾಗುವುದು. ಈ ಸಂಸ್ಥೆಗಳ ಹತ್ತು ಹಲವಾರು ಮೂಲ ಉದ್ದೇಶಗಳಲ್ಲಿ ಆಯಾ ಪ್ರದೇಶದ ನಾಗರಿಕರಿಗೆ ಅತ್ಯಾವಶ್ಯಕವಾದ ನಾಗರಿಕ ಸೌಲಭ್ಯಗಳನ್ನು ಒದಗಿಸಿಕೊಡುವುದು ಮತ್ತು ಆಯಾ ಪ್ರದೇಶಗಳ ಸರ್ವಾಂಗೀಣ ಅಭಿವೃದ್ಧಿಯನ್ನು ಸಾಧಿಸುವುದು ಬಹು ಮುಖ್ಯವಾದವುಗಳು. ಕರ್ನಾಟಕವೂ ಒಳಗೊಂಡಂತೆ ಪ್ರಾಚೀನ ಮತ್ತು ಮಧ್ಯಕಾಲೀನ ಭಾರತದಲ್ಲಿ ನಿರಂಕುಶ ಪ್ರಭುತ್ವದಿಂದ ಕೂಡಿದ್ದ ಕೇಂದ್ರೀಕೃತ ಸಾರ್ವಭೌಮ ಆಡಳಿತ ವ್ಯವಸ್ಥೆ ರೂಢಿಯಲ್ಲಿ ಇದ್ದ ಕಾಲದಲ್ಲಿಯೂ, ಸ್ಥಳೀಯ ಸಂಸ್ಥೆಗಳ ಆಡಳಿತ ವ್ಯವಸ್ಥೆಗೆ ಸಾಕಷ್ಟು ಅವಕಾಶ ಮತ್ತು ಮಾನ್ಯತೆ ಇತ್ತು. ಗ್ರಾಮಗಳು ಒಂದು ಸೀಮಿತ ಪ್ರದೇಶದಲ್ಲಿ ಮತ್ತು ಸ್ವರೂಪದಲ್ಲಿ ಪುಟ್ಟ ಪುಟ್ಟ ಗಣರಾಜ್ಯ (ರಿಪಬ್ಲಿಕ್ಸ್)ಗಳಂತೆ ಕಾರ್ಯ ನಿರ್ವಹಿಸುತ್ತಿದ್ದವು. ಈ ಸಭೆಗಳು ಗ್ರಾಮ ಸಮುದಾಯದ, ಜನಪದದ, ಸಮಷ್ಟಿಯ ಸಹ ಬಾಳುವೆಯ ಪ್ರತೀಕವಾಗಿದ್ದವು. ಈ ಸಂಸ್ಥೆಗಳು ಹಿರಿಯರ ಮಂಡಳಿಗಳಾಗಿದ್ದವು. ಇಂತಹ ಪಾರಂಪರಿಕ ರೂಢಿಗತ ಸಭೆಗಳ ಹಕ್ಕು ಬಾಧ್ಯತೆಗಳನ್ನು ಸರ್ಕಾರ ಗೌರವಿಸುತ್ತಿತ್ತು. ಈ ಸಂಸ್ಥೆಗಳು ಸ್ವಯಂ ಪ್ರೇರಣೆಯಿಂದ ಮೂಡಿ ಬಂದ, ಬದ್ಧತೆಯಿಂದ ಕೂಡಿದ್ದ ಸ್ಥಳೀಯ ಸಮುದಾಯದ ಸಾಮಾಜಿಕ ಹೊಣೆಗಾರಿಕೆಯಿಂದ ಕೂಡಿದ್ದ ಸಂಸ್ಥೆಗಳಾಗಿದ್ದವು. ಪ್ರಾಚೀನ ಪಂಚಾಯತ್ ವ್ಯವಸ್ಥೆಯು 'ಪಂಚ ಪರಮೇಶ್ವರ' ಎಂಬ ಅತ್ಯಂತ ಉನ್ನತ ಸ್ಥಾನಮಾನವನ್ನು ಹೊಂದಿತ್ತು. ಹಿಂದೆ ಹಳ್ಳಿಯ/ಗ್ರಾಮದ ಐವರು ಕೂಡಿದ ಸಭೆ ಪಂಚಾಯಿತಿ ಎನಿಸಿಕೊಳ್ಳುತ್ತಿತ್ತು. ಗ್ರಾಮೀಣ ಆಡಳಿತ ವ್ಯವಸ್ಥೆಯ ಈ ಸಂಪ್ರದಾಯ ಪ್ರಾಚೀನ ಮತ್ತು ಮಧ್ಯಕಾಲೀನ ಕರ್ನಾಟಕದಲ್ಲಿ ಗುಲಬರ್ಗಾ ಜಿಲ್ಲೆಯನ್ನು ಒಳಗೊಂಡಂತೆ ತುಂಬಾ ವ್ಯಾಪಕ ಮತ್ತು ಪರಿಣಾಮಕಾರಿಯಾಗಿತ್ತೆಂದು ಸಮಕಾಲೀನ ಶಾಸನಗಳಿಂದ ಇತರೇ ದಾಖಲೆಗಳಿಂದ ತಿಳಿದು ಬರುವುದು.

ಪಂಚಾಯಿತಿ ರಾಜ್ಯ ವ್ಯವಸ್ಥೆ ಇಂದು ನಿನ್ನೆಯದಲ್ಲ. ಇದಕ್ಕೆ ಸುಮಾರು ೪೦೦೦ ವರ್ಷಗಳ ಸುದೀರ್ಘ ಪರಂಪರೆ ಉಂಟು. ವೇದಗಳ ಕಾಲದಿಂದಲೂ ಗ್ರಾಮಗಳ ಸಾಮಾಜಿಕ, ಆರ್ಥಿಕ ಚಟುವಟಿಕೆಗಳನ್ನು ಕುರಿತಂತೆ ಮಾಹಿತಿಯು

ದೊರೆಯುವುದು. ಇತಿಹಾಸದುದ್ದಕ್ಕೂ ಈ ಸಂಸ್ಥೆಗಳ ರಚನೆ, ಕಾರ್ಯ ವಿಧಾನಗಳಲ್ಲಿ ಕೆಲವೊಂದು ಬದಲಾವಣೆಗಳಾಗಿದ್ದರೂ ಈ ಸಂಸ್ಥೆಗಳು ಪ್ರಾಚೀನ ಕಾಲದಿಂದಲೂ ಬ್ರಿಟಿಷರ ಆಡಳಿತದ ಪ್ರಾರಂಭ ಕಾಲದವರೆಗೂ ಅವ್ಯಾಹತವಾಗಿ ನಡೆದುಕೊಂಡು ಬಂದಿರುವವು. ಗ್ರಾಮ ಸಭೆಗಳು ವಿಜಯನಗರ ಕಾಲದವರೆಗೂ ತುಂಬಾ ಉನ್ನತಾವಸ್ಥೆಯಲ್ಲಿದ್ದುವಲ್ಲದೆ, ಮುಸ್ಲೀಮರ ಆಡಳಿತ ಕಾಲದಲ್ಲಿಯೂ (೧೩ರಿಂದ ೧೮ನೇ ಶತಮಾನ) ಮುಂದುವರೆದವು. ವಿಶೇಷವಾಗಿ ಮೊಗಲರ ಕಾಲದಲ್ಲಿ ಜಹಗೀರು ನೀಡುವ ಪದ್ಧತಿ ರೂಢಿಯಲ್ಲಿ ಬಂದುದರಿಂದ ಜಹಗೀರುದಾರರು ಮತ್ತು ಇತರೆ ವತನದಾರರು ಗ್ರಾಮ ಪಂಚಾಯತಿಯ ಮತ್ತು ಸಮುದಾಯದ ಪ್ರಮುಖ ವಿಷಯಗಳನ್ನು ತಮ್ಮ ಹಿಡಿತದಲ್ಲಿ ಇಟ್ಟುಕೊಂಡಿದ್ದರಿಂದ ಪಂಚಾಯಿತಿಗಳು ತಮ್ಮ ಹಿಂದಿನ ಸ್ವಾತಂತ್ರ್ಯ ಮತ್ತು ಸ್ವಾಯತ್ತತೆಯನ್ನು ಕ್ರಮೇಣ ಕಳೆದುಕೊಂಡವು. ಬ್ರಿಟೀಷರ ಆಡಳಿತದ ಅವಧಿಯಲ್ಲಿ ೧೮೭೦ರಲ್ಲಿ ಲಾರ್ಡ್ ಮೇಯೋ ಅವರ ಕಾಲದಲ್ಲಿ ಇಂದು ರೂಢಿಯಲ್ಲಿ ಇರುವ ಪಂಚಾಯತಿರಾಜ್ ಪರಿಕಲ್ಪನೆಯ ಬೀಜಾಂಕುರವಾಯಿತು. ಆದರೆ ಬ್ರಿಟೀಷರ ಆಡಳಿತ ವ್ಯವಸ್ಥೆಯಲ್ಲಿ ಗ್ರಾಮಗಳಿಗಿಂತ ಪಟ್ಟಣ, ನಗರಗಳ ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳ ಅಭಿವೃದ್ಧಿಗೆ ಹೆಚ್ಚು ಒತ್ತು ನೀಡಲಾಯಿತು. ಸ್ವಾತಂತ್ರ್ಯಾ ನಂತರದ ದಶಕಗಳಲ್ಲಿ ಪಂಚಾಯ್ತಿ ಆಡಳಿತವು ಹೊಸ ರೂಪರೇಷೆಯನ್ನು ಪಡೆಯಿತು. ಸಮಾಜವಾದ, ವಿಕೇಂದ್ರೀಕರಣ, ಗ್ರಾಮ ಸ್ವರಾಜ್ಯ, ಸುರಾಜ್ಯ ಮುಂತಾದ ಪರಿಕಲ್ಪನೆಗಳಿಗೆ ಚಾಲನೆ ದೊರೆಯಿತು. ರಾಜ್ಯಾಂಗದಲ್ಲೂ ಸೂಕ್ತ ತಿದ್ದುಪಡಿಗಳನ್ನು ತರುವ ಮೂಲಕ ಪಂಚಾಯಿತಿ ರಾಜ್ ಸಂಸ್ಥೆಗಳನ್ನು ಇನ್ನೂ ಹೆಚ್ಚು ಬಲಪಡಿಸಲಾಗುತ್ತಿದೆ.

## ಪ್ರಾಚೀನ / ಮಧ್ಯಕಾಲೀನ ಸ್ಥಳೀಯ ಸಂಸ್ಥೆಗಳು

ಶಾಸನಗಳಲ್ಲಿ ಗ್ರಾಮೀಣ ಹಂತದ ಸ್ಥಳೀಯ ಸಂಸ್ಥೆಗಳನ್ನು ಊರು, ಒಕ್ಕಲು (ನಿವಾಸಿಗಳು), ಪ್ರಜೆ (ನಾಗರೀಕರು), ಪ್ರಜಾ ಸಮುದಾಯ, ಸಮಸ್ತರು, ಊರ ಹದಿನೆಂಟು ಜಾತಿ ಎಂದು ಮುಂತಾಗಿ ವಿವರಿಸಲಾಗಿದೆ. ಅದರಂತೆ ಪಟ್ಟಣಗಳ ಸ್ಥಳೀಯ ಸಂಸ್ಥೆಗಳನ್ನು ನಗರ, ಹಲರು (ವ್ಯಾಪಾರ ಪ್ರಧಾನವಾಗಿದ್ದ ಊರು) ಎಂದು ಉಲ್ಲೇಖಿಸಲಾಗಿದೆ. ಅಗ್ರಹಾರಗಳಲ್ಲಿ ಮಹಾಜನರ ಸಭೆ ಇರುತ್ತಿತ್ತು. ಕೆಲವೊಮ್ಮೆ ಗ್ರಾಮಸಭೆಯನ್ನು ಐವತ್ತೊಕ್ಕಲು, ಮೂವತ್ತೊಕ್ಕಲು ಎಂಬ ಸಂಖ್ಯಾ ವಾಚಕದಿಂದ ಕರೆಯಲಾಗುತ್ತಿತ್ತು. ಈ ಸಂಖ್ಯೆಯು ಸ್ಥಳದ ಮೂಲ ನಿವಾಸಿಗಳ ಕುಟುಂಬದ ಸಂಖ್ಯೆಯನ್ನು ಸೂಚಿಸುವುದು.

ಹಲವಾರು ಹಳ್ಳಿಗಳ ಸಮುದಾಯ ಅಥವಾ ಗುಂಪಿಗೆ ಕಂಪಣ, ನಾಡು, ವಿಷಯ, ಸ್ಥಳ, ಸ್ಥಾನ, ಪೇಂಟೆ ಮುಂತಾಗಿ ಹೆಸರಿಸಲಾಗಿದೆ. ಹತ್ತನೇ ಶತಮಾನದ ಮಧ್ಯಾವಧಿಯಿಂದ 'ನಾಡು' ಒಂದು ಸ್ಥಳೀಯ ಸಂಸ್ಥೆಯಾಗಿ ಕಾರ್ಯನಿರ್ವಹಿಸುತ್ತಿದ್ದ ಉಲ್ಲೇಖ ದೊರೆಯುವುದು. ನಾಡಿನ ಪ್ರಮುಖನನ್ನು ಪ್ರಭು, ನಾಡಗೌಡ, ಪೆರ್ಗಡೆ ಮುಂತಾದ ಹೆಸರಿನಿಂದ ಕರೆಯುತ್ತಿದ್ದರು. ಈ ಹೊಸ ಆಡಳಿತ ವ್ಯವಸ್ಥೆ ಅನೇಕ ಹಳ್ಳಿಗಳ ಒಕ್ಕೂಟವಾಗಿತ್ತು. ಅದರ ಸಭೆಯನ್ನು 'ನಾಡಸಭೆ' ಎಂದು ಕರೆಯಲಾಗುತ್ತಿತ್ತು. (ಈ ಜಿಲ್ಲೆಯ ಶಾಸನವೊಂದರಿಂದ ೩೦೦ ಹಳ್ಳಿಗಳ ಗುಂಪನ್ನು ನಾಳ್ಗಾವುಂಡರ (ನಾಡಗೌಡರು) ಆಳಿದರೆ, ೭೦ರ ಗುಂಪನ್ನು ಧರ್ಮ ಮಹಾರಾಜರು ಆಳುತ್ತಿದ್ದರೆಂದು ತಿಳಿದುಬರುವುದು.) ಅನೇಕ ಹಳ್ಳಿಗಳ ಸಮುದಾಯವಾಗಿದ್ದ ನಾಡು ಆಗಾಗ ಸಭೆ ಸೇರುತ್ತಿತ್ತು. ಇದು ವ್ಯಾಪಕ ಬಗೆಯ ಸದಸ್ಯರನ್ನು ಒಳಗೊಂಡ ಸಭೆಯಾಗಿರುತ್ತಿತ್ತು. ಇದರ ಪ್ರಮುಖ ಕರ್ತವ್ಯಗಳಲ್ಲಿ ನೀರಾವರಿ ಸೌಲಭ್ಯವನ್ನು ಒದಗಿಸುವುದು, ನ್ಯಾಯ ನಿರ್ಣಯ ನೀಡುವುದು, ಇತರೇ ಸಾಮೂಹಿಕ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳುವುದು ಪ್ರಮುಖವಾಗಿದ್ದವು. ನಾಡಗೌಡ ಹುದ್ದೆಯು ಅನುವಂಶಿಕ ಮತ್ತು ಕೆಲವು ಸಂದರ್ಭಗಳಲ್ಲಿ ಆಯ್ಕೆ ನಡೆಯುತ್ತಿತ್ತು. ಗ್ರಾಮ ಸಭೆಯ ಇತರೇ ಕರ್ತವ್ಯಗಳಲ್ಲಿ ದೇವಾಲಯಗಳ ನಿರ್ಮಾಣ ಮತ್ತು ನಿರ್ವಹಣೆ, ಹಬ್ಬ ಹರಿದಿನಗಳ ಆಚರಣೆ, ಛತ್ರ, ಅರವಟ್ಟಿಗೆಗಳನ್ನು ನಡೆಸುವುದು, ಸುಂಕದ ಕಟ್ಟೆಗಳನ್ನು ನಿರ್ವಹಿಸುವುದು, ಪ್ರಶಂಸನೀಯ ಸೇವೆಗೆ ಸನ್ಮಾನ, ವೀರಗಲ್ಲು, ಮಹಾಸತಿ ಕಲ್ಲುಗಳನ್ನು ನಿಲ್ಲಿಸುವುದು, ದೇವಾಲಯ ಮತ್ತು ಸಮಾಜದ ಭೂಮಿಯ ರಕ್ಷಣೆ, ಕೆರೆಗಳ ನಿರ್ಮಾಣ ಮತ್ತು ನಿರ್ವಹಣೆ, ಭೂ ಬಿಕ್ಕಟ್ಟುಗಳನ್ನು ಪರಿಹರಿಸುವುದು, ಸಂತ್ರಸ್ತರಿಗೆ ಪರಿಹಾರ, ಸಾರ್ವಜನಿಕರಿಂದ ಠೇವಣಿಯಾಗಿ ಹಣ ಮತ್ತು ಭೂಮಿಯನ್ನು ಸ್ವೀಕರಿಸಿ, ಅದರ ಬಡ್ಡಿಯಿಂದ ಬರುವ ಹಣದಲ್ಲಿ ನಂದಾದೀಪ ಮತ್ತು ದೇವಾಲಯಗಳಲ್ಲಿ ಇತರ ಸೇವೆಗಳನ್ನು ಏರ್ಪಡಿಸುವುದು ಮುಖ್ಯವಾಗಿದ್ದವು.

## ಮಹಾನಾಡು

ಹಲವಾರು ನಾಡುಗಳು ಮತ್ತು ನಗರ ಪ್ರದೇಶಗಳನ್ನು ಒಳಗೊಂಡ ವಿಸ್ತೃತವಾದ ಸ್ಥಳೀಯ ಸಂಸ್ಥೆಯನ್ನು 'ಮಹಾನಾಡು' ಎಂದು ಕರೆಯಲಾಗುತ್ತಿತ್ತು. ಅನೇಕ ನಾಡುಗಳು ಸೇರಿ 'ಮಹಾನಾಡು' ಎಂಬ ಒಕ್ಕೂಟ ಸಂಸ್ಥೆಗಳು ರೂಢಿಯಲ್ಲಿ

ಇದ್ದುದಾಗಿ ಶಾಸನಗಳಿಂದ ತಿಳಿದು ಬರುವುದು. ಈ ಮಹಾನಾಡುಗಳು ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ನಡುವೆ ಸಮನ್ವಯಾಧಿಕಾರಿಯಂತೆ ಕಾರ್ಯ ನಿರ್ವಹಿಸುತ್ತಿದ್ದವು. ಇವು ತುಂಬಾ ಪ್ರಭಾವಶಾಲಿ ಸಂಸ್ಥೆಗಳಾಗಿದ್ದವು. ಮಹಾನಾಡುಗಳು ತಮ್ಮ ಕಾರ್ಯಕ್ಷೇತ್ರದಲ್ಲಿ ನೀರಾವರಿ ಸೌಲಭ್ಯ, ನ್ಯಾಯ ವ್ಯವಸ್ಥೆ, ತೆರಿಗೆ ವಿಧಿಸುವುದು ಮುಂತಾದ ವಿಶೇಷ ಅಧಿಕಾರಗಳನ್ನು ಪಡೆದಿದ್ದವು. ಹಣಕಾಸಿನ ವಿಷಯದಲ್ಲಿ ಇವು ಸ್ವಯಂಧಿಕಾರ ಮತ್ತು ಸ್ವಾವಲಂಬನೆಯನ್ನು ಹೊಂದಿದ್ದವು. ಈ ಸಭೆಯು ವಿಶೇಷವಾಗಿ ವರ್ತಕ ಸಮುದಾಯ, ವೃತ್ತಿಪರ ಸಂಘಟನೆಗಳು, ಪ್ರತಿನಿಧಿಗಳು, ಸರ್ಕಾರಿ ಅಧಿಕಾರಿಗಳು ಮುಂತಾದವರಿಂದ ಕೂಡಿರುತ್ತಿತ್ತು. ಸಂಚಾರ ಸೌಲಭ್ಯದ ಕೊರತೆಯಿಂದ ಮಹಾನಾಡಿನ ಸಭೆಗಳು ಸಾಮಾನ್ಯವಾಗಿ ಜಾತ್ರೆಯ ಸಮಯದಲ್ಲಿ ವಿಶೇಷ ಸಂದರ್ಭಗಳಲ್ಲಿ ಸೇರುತ್ತಿದ್ದವು. ಇವುಗಳ ಕರ್ತವ್ಯಗಳು ಸೀಮಿತವಾಗಿದ್ದು ವ್ಯಾಪಾರಿ ಸಂಸ್ಥೆಗಳ ಹಿತಾಸಕ್ತಿಗೆ ಪೂರಕವಾಗಿ ಕಾರ್ಯನಿರ್ವಹಿಸುತ್ತಿದ್ದವು.

ಸುರಪುರ ತಾಲೂಕಿನ ಏವೂರಿನ ಕ್ರಿ.ಶ. ೧೧೧೧ರ ಶಾಸನವು ಬೇರೆ ಬೇರೆ ಊರುಗಳ ಸೆಟ್ಟಿಯರು ಗವರೇಶ್ವರ ದೇವರಿಗೆ ಬಿಟ್ಟ ಸುಂಕಗಳನ್ನು ದಾಖಲಿಸುತ್ತದೆ. ಅಲ್ಲಿಯ ಇನ್ನೊಂದು ಶಾಸನವು (೧೧೧೧) ಏವೂರಿನ ಕಮ್ಮಟೇಶ್ವರ ದೇವರಿಗೆ ಗ್ರಾಮದ ಆಯಗಾರರಾದ ಬಡಗಿ, ಕಮ್ಮಾರ, ಅಕ್ಕಸಾಲಿಗ, ಕಲ್ಲು ಕುಟಿಗರ ಮತ್ತು ಕಂಚುಗಾರರ ಗೊತ್ತಳಿಗಳು ಸೇರಿದಂತೆ ೧೨೦ 'ಅಡ್ಡವನ್ನು' ದಾನ ಬಿಟ್ಟ ಅಂಶ ತಿಳಿಸುತ್ತದೆ.

**ಅಗ್ರಹಾರಗಳು**

ಅಗ್ರಹಾರಗಳ ಆಡಳಿತವನ್ನು ಸ್ಥಳೀಯ ಬ್ರಾಹ್ಮಣ ಮುಖಂಡರು (ಮಹಾಜನರು) ನೋಡಿಕೊಳ್ಳುತ್ತಿದ್ದರು. 'ಉರೊಡೆಯ' ಪ್ರಮುಖ ಅಧಿಕಾರಿಯಾಗಿದ್ದನು. ನಮ್ಮ ನಾಡಿನ ಶಾಸನಗಳಲ್ಲಿ ಆರನೇ ಶತಮಾನದಿಂದ ಅಗ್ರಹಾರಗಳ ಉಲ್ಲೇಖವನ್ನು ಕಾಣಬಹುದು. ಈ ಜಿಲ್ಲೆಯ ಪ್ರಮುಖ ಅಗ್ರಹಾರಗಳಲ್ಲಿ ತಿಂಥಿಣಿ, ಮುದನೂರು, ಯಾಳಗಿ, ನಾಗಾವಿ, ಮಳಖೇಡ, ಹಗರಟಗಿ, ಹುನಗುಂಟ, ಗೊಬ್ಬೂರು, ಹಿಂಗಳಿಗೆ, ಸುಲೇಪೇಟೆ, ದಿಗ್ಗಾವಿಗೆ, ಸೇಡಂ, ಸಿರಿವಾಳ, ಹರಸೂರು ಮುಂತಾದವು ಅಗ್ರಹಾರದ ಕೆಲಸ ಕಾರ್ಯಗಳನ್ನು ಗ್ರಾಮಕಾರ್ಯ ಎಂದು ಅವುಗಳ ನೀತಿ ಸಂಹಿತೆಯನ್ನು, ಕಟ್ಟಳೆಗಳನ್ನು 'ಸಮಯ', 'ಮರ್ಯಾದೆ' ಎಂದು ಶಾಸನಗಳಲ್ಲಿ ಉಲ್ಲೇಖಿಸಲಾಗಿದೆ. ಮಹಾಜನರಿಗೆ ಸರ್ಕಾರದ ಪುರಸ್ಕಾರ ದೊರೆಯುತ್ತಿತ್ತು.

**ನಗರಾಡಳಿತ**

ಮಧ್ಯಕಾಲೀನ ಸಮಯದಲ್ಲಿ (೧೨ನೇ ಶತಮಾನದ ನಂತರ) ಪ್ರಾರಂಭಗೊಂಡ ನಗರ / ಪುರದ ಸ್ಥಳೀಯ ಆಡಳಿತವು ಗ್ರಾಮದ ಆಡಳಿತಕ್ಕಿಂತಲೂ ಭಿನ್ನವಾಗಿದ್ದು ವೈವಿಧ್ಯಮಯವಾಗಿತ್ತು. ಹಲವಾರು ಕಾರಣಗಳಿಂದ ಹಳ್ಳಿಗಳು ಬೆಳೆದು ನಗರಗಳಾದವು. ವೈಯಕ್ತಿಕವಾಗಿ ಮತ್ತು ಸಾಮೂಹಿಕವಾಗಿ ನಗರ ನಿರ್ಮಾಣದಲ್ಲಿ ತೊಡಗುವವರಿಗೆ ವಿಶೇಷವಾಗಿ ವರ್ತಕ ಸಮುದಾಯದವರಿಗೆ ಬಹು ಹೆಚ್ಚಿನ ಪ್ರೋತ್ಸಾಹವನ್ನು ಕೊಡಲಾಗುತ್ತಿತ್ತು.

ವಾರಕ್ಕೊಮ್ಮೆ ಸೇರುವ ಸಂತೆಯ ಮುಖ್ಯ ಕಾರ್ಯನಿರ್ವಾಹಕರನ್ನು 'ಪಟ್ಟಣಶೆಟ್ಟಿ', 'ಪಟ್ಟಣ ಸ್ವಾಮಿ' ಎಂದು ಕರೆಯಲಾಗುತ್ತಿತ್ತು. ಒಂದು ಹಳ್ಳಿ ವ್ಯಾಪಾರ ಕೇಂದ್ರವಾಗಿ ಬೆಳೆದು, ಸಂತೆ ಆರಂಭಗೊಂಡು ಅದು ಪಟ್ಟಣವಾಗುತ್ತಿತ್ತು. ಸಂತೆಯ ಸಕಲ ವ್ಯವಸ್ಥೆಯನ್ನು ನೋಡಿಕೊಳ್ಳಲು ಪಟ್ಟಣ ಶೆಟ್ಟಿಯನ್ನು ಸರ್ಕಾರವೇ ನೇಮಿಸುತ್ತಿತ್ತು. ಪಟ್ಟಣದ ವಿಸ್ತೀರ್ಣ ಮಾನದಿಂದ ಪಟ್ಟಣದ ಸ್ವಾಮಿಯವರ ಸಂಖ್ಯೆ ಹೆಚ್ಚುತ್ತಿತ್ತು. ಮಳಖೇಡದ ಶಾಸನ ಒಂದು ಅಲ್ಲಿಯ ಈಶ್ವರ ಸೆಟ್ಟಿಗೆ 'ಮಲಯಾದ್ರಿ ಪುರವರಾಧೀಶ್ವರ' ಎಂಬ ಬಿರುದನ್ನು ಕುರಿತು ಉಲ್ಲೇಖಿಸುವುದು, ಮಲಯಾದ್ರಿಪುರವೇ ಇಂದಿನ ಮಳಖೇಡವಾಗಿರಬಹುದು. ಕೆಲವು ಪುರ ಸಭೆಗಳಲ್ಲಿ ವರ್ತಕರ ಸಂಘಗಳು (ನಖರ) ಪುರಾಡಳಿತದಲ್ಲಿ ಪ್ರಮುಖ ಪಾತ್ರ ವಹಿಸುತ್ತಿದ್ದವು. ಅವುಗಳನ್ನು ಬಣಂಜು ಪಟ್ಟಣ (ವ್ಯಾಪಾರಿನಗರ) ಎಂದು ಕರೆಯಲಾಗುತ್ತಿತ್ತು. ದೊಡ್ಡ ದೊಡ್ಡ ನಗರಗಳು ಅನೇಕ ಕೇರಿ (ಬೀದಿ), ಬಲಗಳಾಗಿ ವಿಂಗಡಿಸಲ್ಪಟ್ಟಿದ್ದವು.

**ಆಧುನಿಕ ಕಾಲದ ಬೆಳವಣಿಗೆ**

ಸ್ವಾತಂತ್ರ್ಯ ಪೂರ್ವದಲ್ಲಿ ಹಿಂದಿನ ಹೈದರಾಬಾದ್ ಸಂಸ್ಥಾನದ ಭಾಗವಾಗಿದ್ದ ಗುಲಬರ್ಗಾ ಜಿಲ್ಲೆಯಲ್ಲಿ ಸ್ವಯಂ ಆಡಳಿತ ಸಂಸ್ಥೆಗಳು ಪ್ರಾರಂಭವಾದದ್ದು ೧೮೬೯ರಲ್ಲಿ ಮುನಸಿಪಾಲಿಟಿಗಳನ್ನು ರಚಿಸುವ ಮೂಲಕ. ಈ ಸ್ಥಾನಿಕ ಆಡಳಿತ ವ್ಯವಸ್ಥೆಯು ಅಂದಿನ ಹೈದರಾಬಾದ್ ಸರ್ಕಾರದ ಪ್ರಧಾನಮಂತ್ರಿ ಆಗಿದ್ದ ಸರ್. ಸಾಲಾರ್‌ಜಂಗ-I ಅವರ ಅಧಿಕಾರದ

ಅವಧಿಯಲ್ಲಿ. ಹೈದರಾಬಾದ್ ಸಂಸ್ಥಾನದಲ್ಲಿ ಸ್ವಯಂ ಆಡಳಿತ ಸಂಸ್ಥೆಗಳ ಆಡಳಿತನ್ನು ನೋಡಿಕೊಳ್ಳಲು ಆರು ಜನ ಸದಸ್ಯರ ಒಂದು ಸಮಿತಿಯು ಇತ್ತು. ಅದರಲ್ಲಿ ಇಬ್ಬರು ಪ್ರಜೆಗಳ ಪ್ರತಿನಿಧಿಗಳು, ಇನ್ನುಳಿದ ನಾಲ್ವರು ಪೈಗಾ ತಾಲೂಕುಗಳಿಂದ ಮತ್ತು ಇತರೇ ಆಡಳಿತ ವಿಭಾಗಗಳನ್ನು ಪ್ರತಿನಿಧಿಸುತ್ತಿದ್ದರು. ಅಂದಿನ ವ್ಯವಸ್ಥೆಯಲ್ಲಿ ಪುರಸಭೆಗಳ ಮುಖ್ಯಸ್ಥರನ್ನು ರಸ್ತೆಗಳ ಸುಪರಿಂಟೆಂಡಂಟ್ ಎಂದು ಕರೆಯಲಾಗುತ್ತಿತ್ತು. ಅವರೇ ಸ್ಥಳೀಯ ಪುರಸಭೆಗಳ ಅಧ್ಯಕ್ಷರೂ ಆಗಿರುತ್ತಿದ್ದರು. ಪುರಸಭೆ ಮತ್ತು ಸಾರ್ವಜನಿಕರ ಮಧ್ಯೆ ಸಂಭವಿಸಬಹುದಾಗಿದ್ದ ಭಿನ್ನಾಭಿಪ್ರಾಯಗಳನ್ನು ತೀರ್ಮಾನಿಸಲು ಕೆಲವು ಆಯ್ದ ಗೌರವಾನ್ವಿತ ವ್ಯಕ್ತಿಗಳನ್ನು ಒಳಗೊಂಡ ಸ್ಥಳೀಯ ಸಮಿತಿಯು ಇರುತ್ತಿತ್ತು. ಈ ಸಮಿತಿಯ ಸದಸ್ಯರನ್ನು ಸರ್ಕಾರ ನೇಮಕ ಮಾಡುತ್ತಿತ್ತು. ಈ ಸಮಿತಿಗೆ ಲಘು ವ್ಯಾಜ್ಯ (ಸ್ಮಾಲ್‌ಕಾಜ್) (ಹಣದ ವ್ಯವಹಾರಗಳಲ್ಲಿ ರೂ. ೨೦೦ರವರೆಗೆ) ಗಳನ್ನು ನಿರ್ಣಯಿಸುವ ಅಧಿಕಾರವನ್ನು ನೀಡಲಾಗಿತ್ತು. ಈ ರೀತಿ ಪ್ರಾರಂಭಗೊಂಡ ಪುರಸಭೆಗಳ ಆಡಳಿತ ವ್ಯವಸ್ಥೆ ಸ್ಥಳೀಯ ನಾಗರಿಕ ಸಮಸ್ಯೆಗಳಿಗೆ ಸ್ಪಂದಿಸುತ್ತ ಪ್ರಾಯೋಗಿಕವಾಗಿ ಮುಂದುವರೆಯಿತು. ಮುಂದಿನ ಕೆಲವು ದಶಕಗಳಲ್ಲಿ ತನ್ನದೇ ಆದ ಒಂದು ಶಾಶ್ವತ ವ್ಯವಸ್ಥೆಯಾಗಿ ಮುಂದುವರೆಯಿತು. ೧೮೯೪ರ ಸುಮಾರಿಗೆ ರಚನೆಗೊಂಡ ಪುರಸಭೆಗಳು ಸಾಮಾನ್ಯವಾಗಿ ೧೪ ಜನ ಸದಸ್ಯರನ್ನು ಒಳಗೊಂಡಿದ್ದವು. ಅದರಲ್ಲಿ ೯ ಜನ ಅಧಿಕಾರಿಗಳು ಉಳಿದಂತೆ ಐವರು ಅಧಿಕಾರೇತರರು ಆಗಿರುತ್ತಿದ್ದರು. ಇವರೆಲ್ಲರನ್ನು ಸರ್ಕಾರವೇ ನಾಮಕರಣ ಮಾಡುತ್ತಿತ್ತು.

**ಲೋಕಲ್ ಬೋರ್ಡ್‌ಗಳು**

ಗ್ರಾಮೀಣ ಪ್ರದೇಶಗಳಲ್ಲಿ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲು ಸಹಾಯಕವಾಗುವಂತೆ ೧೮೭೭ರಲ್ಲಿ ಪ್ರಪ್ರಥಮವಾಗಿ ಲೋಕಲ್ ಬೋರ್ಡ್ ಅಧಿನಿಯಮವನ್ನು ಜಾರಿಗೊಳಿಸುವ ಮೂಲಕ ಭೂ ಕಂದಾಯದ ಮೇಲೆ ರೂಪಾಯಿಗೆ ಒಂದು ಆಣೆಯಂತೆ ಸ್ಥಳೀಯ ಉಪತೆರಿಗೆ (ಲೋಕಲ್ ಸೆಸ್)ಯನ್ನು ವಿಧಿಸಲಾಯಿತು. ಇದರಿಂದ ಜಿಲ್ಲೆಗಳಲ್ಲಿ ಸ್ಥಳೀಯ ಬೋರ್ಡುಗಳು (ಸಮಿತಿಗಳು) ನಿಶ್ಚಿತ ಗುರಿಗಳೊಂದಿಗೆ, ಅಧಿಕಾರ ವ್ಯಾಪ್ತಿಯೊಂದಿಗೆ, ಸ್ಥಳೀಯವಾಗಿ ಸಂಗ್ರಹಿಸಿದ ತೆರಿಗೆಯನ್ನು ಅಭಿವೃದ್ಧಿ ಕಾರ್ಯಗಳಿಗೆ ವಿನಿಯೋಗಿಸಲು ಸಹಾಯಕವಾಯಿತು. ಈ ಸಂಸ್ಥೆಗಳು ಇನ್ನೂ ಹೆಚ್ಚು ಸಕ್ರೀಯವಾಗಿ ಕಾರ್ಯ ನಿರ್ವಹಿಸಲು ಸಾಧ್ಯವಾಗುವಂತೆ ಇವುಗಳು ತಮ್ಮದ್ದೇ ಆದ ಆಯ-ವ್ಯಯ ಮಂಡನೆ, ಹಣದ ಉಪಯೋಗ, ಅಭಿವೃದ್ಧಿ ಕಾರ್ಯಗಳ ನಿರ್ವಹಣೆ ಉಸ್ತುವಾರಿ ಕುರಿತಂತೆ ಅನೇಕ ತಿದ್ದುಪಡಿಗಳನ್ನು ಕಾನೂನಿಗೆ ಅಳವಡಿಸಲಾಯಿತು. ರಾಜ್ಯ ಮಟ್ಟದಲ್ಲಿ ಈ ವ್ಯವಸ್ಥೆಯನ್ನು ನಿಯಂತ್ರಿಸಲು ಕೇಂದ್ರ ಮಂಡಳಿಯ (ಸೆಂಟ್ರಲ್ ಬೋರ್ಡ್) ವ್ಯವಸ್ಥೆಯೂ ೧೮೯೯ರ ಸುಮಾರಿಗೆ ಜಾರಿಯಲ್ಲಿ ಬಂದಿತು. ಕೆಲವು ವರ್ಷಗಳ ನಂತರ ಕೇಂದ್ರ ಮಂಡಳಿಯನ್ನು ರದ್ದುಪಡಿಸಿ ಅದರ ಕಾರ್ಯ ನಿರ್ವಹಣೆಯನ್ನು ಕಂದಾಯ, ಶಿಕ್ಷಣ ಮತ್ತು ವೈದ್ಯಕೀಯ ಇಲಾಖೆಗಳಿಗೆ ನಿಧಿಗಳೊಂದಿಗೆ ವರ್ಗಾಯಿಸಲಾಯಿತು.

೧೮೭೭ರ ಕಾನೂನಿ ಅನ್ವಯ ರಚನೆಗೊಂಡ ಜಿಲ್ಲಾ ಬೋರ್ಡುಗಳು ಏಳು ಜನ ಅಧಿಕಾರಿ ಸದಸ್ಯರನ್ನು ಮತ್ತು ಏಳು ಜನ ಅಧಿಕಾರೇತರ ಸದಸ್ಯರನ್ನು ಒಳಗೊಂಡಿದ್ದವು. ಅವುಗಳ ಅಧ್ಯಕ್ಷರು ತಾಲೂಕುದಾರರು (ಪದನಿಮಿತ್ತ) ಆಗಿರುತ್ತಿದ್ದರು. ಅಧಿಕಾರೇತರ ಸದಸ್ಯರು ಸರ್ಕಾರದಿಂದ ನಾಮಕರಣ ಗೊಂಡವರಾಗಿರುತ್ತಿದ್ದರು. ಜಿಲ್ಲಾ ಬೊರ್ಡ್‌ಗಳ ಅಧೀನದಲ್ಲಿ ತಾಲೂಕು ಬೊರ್ಡ್‌ಗಳು ಕಾರ್ಯ ನಿರ್ವಹಿಸುತ್ತಿದ್ದವು. ಈ ಸಮಿತಿಗಳು ಎಂಟು ಜನ ಸದಸ್ಯರನ್ನು ಒಳಗೊಂಡಿರುತ್ತಿದ್ದವು. ಆ ಪೈಕಿ ನಾಲ್ವರು ಅಧಿಕಾರಿಗಳು, ಇನ್ನುಳಿದವರು ಜಿಲ್ಲಾ ಬೋರ್ಡಿನಿಂದ ಶಿಫಾರಸ್ಸು ಹೊಂದಿದ್ದ ಸರ್ಕಾರದಿಂದ ನಾಮಕರಣಗೊಂಡ ಸದಸ್ಯರಾಗಿರುತ್ತಿದ್ದರು. ಕಂದಾಯ ವಿಭಾಗದ ಸುಬೆದಾರವರು ತಾಲೂಕು ಬೊರ್ಡ್‌ಗಳಿಗೆ ನಾಮ ನಿರ್ದೇಶನ ಮಾಡುವ ಅಧಿಕಾರ ಹೊಂದಿದ್ದರು.

**ಪ್ರಾರಂಭದ ಅಧಿನಿಯಮಗಳು**

ಸ್ಥಳೀಯ ಉಪ ತೆರಿಗೆ ಕಾನೂನನ್ನು ೧೯೦೦ ರಲ್ಲಿ ಜಾರಿಯಲ್ಲಿ ತರಲಾಯಿತು. ಅವಶ್ಯಕತೆಗನುಸಾರವಾಗಿ ೧೯೦೮, ೧೯೧೦ ಮತ್ತು ೧೯೪೦ರಲ್ಲಿ ಮೂಲ ಕಾನೂನಿಗೆ ಅನೇಕ ತಿದ್ದು ಪಡಿಗಳನ್ನು ಅಳವಡಿಸಲಾಯಿತು. ಮೂಲ (೧೯೦೦ರ ಕಾನೂನು ಮತ್ತು ನಂತರದ ತಿದ್ದುಪಡಿಗಳ ಮೂಲ ಉದ್ದೇಶ ರಾಜ್ಯದಲ್ಲಿ ನಗರ/ಪಟ್ಟಣ ಪ್ರದೇಶಗಳಲ್ಲಿ ಪುರಸಭೆಗಳ ಆಡಳಿತ ವ್ಯವಸ್ಥೆಗೆ ಭದ್ರ ಬುನಾದಿಯನ್ನು ಒದಗಿಸುವುದಾಗಿತ್ತು. ೧೮೯೦ರಲ್ಲಿ ಒಂದು ರೂಪಾಯಿ ಭೂ ಕಂದಾಯದ

ಮೇಲೆ ಒಂದು ಆಣೆಯಂತೆ ಸ್ಥಳೀಯ ಉಪ ತೆರಿಗೆಯನ್ನು ವಿಧಿಸಲಾಗಿತ್ತು. ಅದರಲ್ಲಿ ೫/೧೨ ಭಾಗವನ್ನು ರಸ್ತೆಗಳಿಗೆ ಮತ್ತು ಸಾರ್ವಜನಿಕ ಕೆಲಸಗಳಿಗೆ ಉಪಯೋಗಿಸಲಾಗುತ್ತಿತ್ತು. ಈ ಒಳಗಾಗಿ ಜಿಲ್ಲೆಯಲ್ಲಿ ಜಿಲ್ಲಾ ಬೋರ್ಡು ಮತ್ತು ತಾಲೂಕು ಬೋರ್ಡುಗಳು ರಚನೆಗೊಂಡಿದ್ದವು. ತಾಲೂಕು ಬೋರ್ಡು ಮತ್ತು ತಾಲೂಕು ಕೇಂದ್ರಗಳ ಮುನಸಿಪಾಲಿಟಿಗಳ ಕಾರ್ಯವನ್ನು ಗುಲಬರ್ಗಾ ಜಿಲ್ಲಾ ಬೋರ್ಡು ಪರಿಶೀಲಿಸುತ್ತಿತ್ತು. ೧೯೦೧ರಲ್ಲಿ ಗುಲಬರ್ಗಾ ಜಿಲ್ಲಾ ಬೋರ್ಡಿನ ಆದಾಯ ವೆಚ್ಚಗಳು ಕ್ರಮವಾಗಿ ರೂ. ೬೬,೩೦೦ಮತ್ತು ರೂ. ೪೮,೬೦೦ ಆಗಿದ್ದವು. ೧೯೦೦ ರ ಸುಮಾರಿಗೆ ಆಗಿನ ಈ ಜಿಲ್ಲೆಯಲ್ಲಿ ಇದ್ದ ಟೌನುಗಳು (ಪಟ್ಟಣಗಳು) ಎಂದರೆ ಗುಲಬರ್ಗಾ, ಆಳಂದ, ಸುರಪುರ, ಕೊಸಗಿ, ಯಾದಗಿರಿ, ಸೇಡಂ, ಶಹಬಾದ್ ಮತ್ತು ಕೊಡಂಗಲ್. ಮೂಲ ಕಾನೂನಿನಲ್ಲಿ ದೊಡ್ಡ ನಗರಗಳಲ್ಲಿ ಮುನಿಸಿಪಲ್ ಕಮೀಟಿಗಳನ್ನು ಮತ್ತು ಚಿಕ್ಕ ಪಟ್ಟಣಗಳಲ್ಲಿ ಟೌನ್ ಕಮಿಟಗಳನ್ನು ರಚಿಸಲು ಒತ್ತಾಸೆ ಇದ್ದರೂ ಇವುಗಳು ೧೯೩೪ರವರೆಗೆ ರಚನೆಯಾಗಲಿಲ್ಲ ಎಂಬುದು ಗಮನಾರ್ಹವಾಗಿತ್ತು. ಮುನಿಸಿಪಲ್ ಕಮಿಟಿಗಳ ಬದಲಿಗೆ ತಾಲೂಕುಬೋರ್ಡ್ ಮತ್ತು ಜಿಲ್ಲಾ ಬೋರ್ಡುಗಳು ಮನಸಿಪಲ್ ಕಮಿಟಿಗಳಂತೆ ಕಾರ್ಯ ನಿರ್ವಹಿಸುತ್ತಿದ್ದವು.

೧೯೩೪ರಲ್ಲಿ ರಾಜ್ಯ ಸರ್ಕಾರವು ನಗರ ಪ್ರದೇಶಗಳಲ್ಲಿ ಅದರಲ್ಲೂ ವಿಶೇಷವಾಗಿ ಜಿಲ್ಲಾ ಕೇಂದ್ರ ಸ್ಥಾನಗಳಲ್ಲಿ ಮತ್ತು ಇತರೇ ದೊಡ್ಡ ನಗರಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಅಧಿಕಾರೇತರ ಸದಸ್ಯರನ್ನು ಒಳಗೊಂಡಂತೆ ಮುನಸಿಪಲ್ ಮತ್ತು ಟೌನ್ ಕಮಿಟಿಗಳನ್ನು ರಚಿಸಲು ಸಹಾಯಕವಾಗುವಂತೆ ಕ್ರಮ ಕೈಗೊಂಡಿತು. ಸದರಿ ಮುನಿಸಿಪಲ್ ಕಮಿಟಿಗಳು ಹಿರಿಯ ಕಂದಾಯ ಅಧಿಕಾರಿಯನ್ನು ಅಧ್ಯಕ್ಷರನ್ನಾಗಿಯೂ ೧೨ ಜನ ಅಧಿಕಾರೇತರ ಸದಸ್ಯರು ಹಾಗೂ ಮೂವರು ಅಧಿಕಾರಿ ಸದಸ್ಯರನ್ನು ಒಳಗೊಂಡು ರಚನೆಗೊಂಡವು.

ಹೈದರಾಬಾದ್ ಸರ್ಕಾರದಲ್ಲಿ ಲೋಕಲ್ ಫಂಡ (ನಿಧಿ) ನಿರ್ವಹಣೆಯಲ್ಲಿ (ನಗರ ಪ್ರದೇಶ) ಮುನಸಿಪಾಲಿಟಿಗಳು ಮತ್ತು ಗ್ರಾಮೀಣ ಪ್ರದೇಶಗಳು ಎಂಬ ಪ್ರತ್ಯೇಕತೆ ಇಲ್ಲದೇ, ಅನೇಕ ಸಂದರ್ಭಗಳಲ್ಲಿ ಭೂ ಕಂದಾಯದ ಮೇಲಿನ ಸ್ಥಳೀಯ ಉಪ ತೆರಿಗೆಯನ್ನು ವಿಶೇಷವಾಗಿ ನಗರ ಪ್ರದೇಶಗಳ (ಮುನಸಿಪಾಲಿಟಿಗಳ) ಅಭಿವೃದ್ಧಿಗೆ ವಿನಿಯೋಗಿಸಲಾಗುತ್ತಿತ್ತು. ಇದರಿಂದ ಗ್ರಾಮೀಣ ಅಭಿವೃದ್ಧಿಗೆ ಅನಾನುಕೂಲವಾಯಿತು. ಹಳ್ಳಿಯ ಭೂ ಕಂದಾಯದಿಂದ ನಗರಗಳು ಅಭಿವೃದ್ಧಿಗೊಂಡವು. ಸ್ಥಳೀಯ ತೆರಿಗೆಯಿಂದ ವಸೂಲಾದ ಹಣದಲ್ಲಿ ಅಲ್ಪ ಭಾಗವನ್ನು ಗ್ರಾಮೀಣ ಅಭಿವೃದ್ಧಿಗೆ ವಿನಿಯೋಗಿಸಲಾಗುತ್ತಿತ್ತು. ಈ ಅಸಮರ್ಪಕ ಪರಿಸ್ಥಿತಿಯು ೧೯೨೮ರ ವರೆಗೂ ಮುಂದುವರೆಯಿತು. ೧೯೨೯-೩೦ರಲ್ಲಿ ಈ ವ್ಯವಸ್ಥೆಯನ್ನು ಸರಿಪಡಿಸಿ ಲೋಕಲ್‌ಫಂಡ್ ಹಣದಲ್ಲಿ ನಗರಾಭಿವೃದ್ಧಿ ಮತ್ತು ಗ್ರಾಮೀಣ ಅಭಿವೃದ್ಧಿಗೆ ಪ್ರತ್ಯೇಕವಾದ ಆಯ-ವ್ಯಯದ ವ್ಯವಸ್ಥೆಯನ್ನು ಜಾರಿಯಲ್ಲಿ ತರಲಾಯಿತು. ಈ ಬದಲಾವಣೆಯಿಂದ ೧೯೩೦ರ ನಂತರ ಗ್ರಾಮಗಳ ಅಭಿವೃದ್ಧಿಗೆ ಹೆಚ್ಚು ಹಣ ಖರ್ಚು ಮಾಡಲು ಅವಕಾಶ ದೊರೆಯುವಂತಾಯಿತು.

**ಹೊಸ ಅಧಿನಿಯಮಗಳು**

ಸ್ಥಳೀಯ ಸಂಸ್ಥೆಗಳ ಆಡಳಿತವನ್ನು ಸುಧಾರಿಸಲು ೧೯೪೧-೪೨ರಲ್ಲಿ ಈ ಮುಂದಿನ ಹೊಸ ಅಧಿನಿಯಮಗಳನ್ನು ಅಳವಡಿಸಿ ಕೊಳ್ಳಲಾಯಿತು. ೧) ಹೈದರಾಬಾದ್ ಜಿಲ್ಲಾ ಬೋರ್ಡುಗಳ ಅಧಿನಿಯಮ ೨) ಹೈದರಾಬಾದ್ ಮುನಸಿಪಲ್ ಮತ್ತು ಟೌನ್ ಕಮಿಟಿಗಳ ಅಧಿನಿಯಮ ೩) ಸ್ಯಾನಿಟರಿ ಪಾವರ್ಸ್ ಅಧಿನಿಯಮ, ೪) ಹೈದರಾಬಾದ್ ಗ್ರಾಮ ಪಂಚಾಯಿತಿಗಳ ಕಾನೂನು ಮತ್ತು ೫) ಸ್ಥಳೀಯ ಸಂಸ್ಥೆಗಳ ಸಾಲ ಅಧಿನಿಯಮ ಇವೇ ಮುಂತಾದವುಗಳು. ಸದರಿ ಕಾನೂನುಗಳ ಅಳವಡಿಕೆಯಿಂದ ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳ ಇಲಾಖೆಯು ಆಡಳಿತದಲ್ಲಿ ಒಂದು ಹೊಸ ಹಂತವನ್ನು ಪ್ರವೇಶಿಸಿದಂತಾಯಿತು. ಈ ಅಧಿನಿಯಮಗಳ ಜಾರಿಯಿಂದ (ಎ) ಜಿಲ್ಲಾ ಬೋಡುಗಳಲ್ಲಿ ಪ್ರತಿ ಐವರು ಚುನಾಯಿತ ಸದಸ್ಯರಿಗೆ ಮೂವರಂತೆ ನಾಮಕರಣ ಮಾಡುವುದು (ಬಿ) ಮುನಸಿಪಾಲಿಟಿಗಳಲ್ಲಿ ಇಬ್ಬರು ಚುನಾಯಿತ ಪ್ರತಿನಿಧಿಗಳಿಗೆ ಒಬ್ಬರಂತೆ ನಾಮಕರಣ ಮಾಡುವ ವ್ಯವಸ್ಥೆ ಜಾರಿಗೊಳಿಸಲಾಯಿತಲ್ಲದೇ, ಮಧ್ಯಂತರ ಜಿಲ್ಲಾ ಬೋರ್ಡು ಮತ್ತು ಮುನಸಿಪಾಲಟಿಗಳನ್ನು ರಚಿಸಿ ಅವುಗಳಿಗೆ ಚುನಾಯಿತ ಮಂಡಳಿಗಳು ರಚನೆಯಾಗುವವರೆಗೆ ಸಂಪೂರ್ಣವಾಗಿ ಸದಸ್ಯರನ್ನು ನಾಮಕರಣ ಮಾಡುವ ಅಧಿಕಾರವು ಸರ್ಕಾರಕ್ಕೆ ದತ್ತವಾದವು.

೧೯೪೧-೪೨ರ ಕಾನೂನುಗಳು ಸ್ಥಳೀಯ ಸಂಸ್ಥೆಗಳು ವ್ಯಾಪಕವಾಗಿ ಸ್ಥಳೀಯ ತೆರಿಗೆಗಳನ್ನು ವಿಧಿಸುವ ಮೂಲಕ ಆರ್ಥಿಕವಾಗಿ ಸ್ವಾವಲಂಬಿಯಾಗುವಲ್ಲಿ ಸಹಾಯಕವಾದವು. ಇದುವರೆಗೆ ಸ್ಥಳೀಯ ಸಂಸ್ಥೆಗಳಲ್ಲಿ ಕೇವಲ ನಾಮಕರಣಗೊಂಡ ಸದಸ್ಯರೇ ತುಂಬಿದ್ದರೂ, ಆಡಳಿತದಲ್ಲಿ ಸಾಕಷ್ಟು ಸುಧಾರಣೆ ತರುವ ಮೂಲಕ ಸಾರ್ವಜನಿಕರಿಗೆ ನಾಗರಿಕ ಸೌಲಭ್ಯಗಳನ್ನು ಒದಗಿಸಲಾಗುತ್ತಿತ್ತು.

**ನಂತರದ ಬದಲಾವಣೆಗಳು**

೧೯೪೬ರ ವರೆಗೂ ಸ್ಥಾನಿಕ ಸಂಸ್ಥೆಗಳ ಇಲಾಖೆ ಸಚಿವಾಲಯದಲ್ಲಿ ಕಂದಾಯ ಇಲಾಖೆಯ ಒಂದು ಭಾಗವಾಗಿತ್ತು. ಇಲಾಖೆಯಲ್ಲಿ ಹೆಚ್ಚುತ್ತಿರುವ ಚಟುವಟಿಕೆಗಳನ್ನು ಗಮನಿಸಿ ೧೯೪೬ರಲ್ಲಿ ಪ್ರತ್ಯೇಕವಾದ ಇಲಾಖೆಯನ್ನು ರೂಪಿಸಲಾಯಿತು. ಮುಂದುವರೆದು ೧೯೪೮ರ ಪೋಲಿಸ ಕಾರ್ಯಚರಣೆಯ ನಂತರ ಉಂಟಾದ ರಾಜಕೀಯ ಬದಲಾವಣೆಗಳಿಂದ, ಬೆಳೆಯುತ್ತಿರುವ ನಾಗರಿಕ ಪ್ರಜ್ಞೆಯಿಂದ, ಈ ಹಿಂದಿನ ಹಳೆಯ ಕಾನೂನುಗಳನ್ನು ಬದಲಾಯಿಸಿ ಸ್ಥಳೀಯ ಸಂಸ್ಥೆಗಳನ್ನು ಚುನಾಯಿತ ಪ್ರತಿನಿಧಿಗಳನ್ನು ಒಳಗೊಂಡ ಸಂಸ್ಥೆಗಳನ್ನಾಗಿ ಮಾರ್ಪಡಿಸಲು ಮತ್ತು ಅವುಗಳಿಗೆ ವ್ಯಾಪಕ ಅಧಿಕಾರ ನೀಡುವಂತೆ ಒತ್ತಾಯಿಸಿ ಸಾರ್ವಜನಿಕ ಅಭಿಪ್ರಾಯ ಮತ್ತು ಬೇಡಿಕೆ ಬಲವಾಗುತ್ತ ನಡೆಯಿತು. ಇದನ್ನು ಪೂರೈಸಲು ಎರಡು ಹೊಸ ಕಾನೂನುಗಳನ್ನು ಜಾರಿಯಲ್ಲಿ ತರಲಾಯಿತು. ಅವುಗಳೆಂದರೆ ೧) ಹೈದರಾಬಾದ್ ಮುನಸಿಪಾಲ್ ಕಾರ್ಪೋರೇಷನ್ ಅಧಿನಿಯಮ ೧೯೫೦, ೨) ಹೈದರಾಬಾದ್ ಮುನಸಿಪಾಲ್ ಮತ್ತು ಟೌನ್ ಕಮಿಟಿಗಳ ಅಧಿನಿಯಮ ೧೯೫೧. ಈ ಎರಡು ಹೊಸ ಅಧಿನಿಯಮಗಳ ಅಳವಡಿಕೆಯಿಂದ ಈ ಸಂಸ್ಥೆಗಳು ಚುನಾಯಿತ ಪ್ರತಿನಿಧಿಗಳಿಂದ ಪುನರ್ ರಚನೆಗೊಂಡವು. ಹೈದರಾಬಾದ್ ರಾಜ್ಯದಲ್ಲಿ ಸ್ಥಳೀಯ ಸಂಸ್ಥೆಗಳಿಗೆ ಸಂಬಂಧಪಟ್ಟಂತೆ ಪ್ರಪ್ರಥಮವಾಗಿ ೧೯೫೨-೫೩ರಲ್ಲಿ ಪ್ರೌಢ ಮತದಾನ ಪದ್ಧತಿಯಂತೆ ಚುಣಾವಣೆಗಳು ನಡೆದವು. ಆದರೆ ಜಿಲ್ಲಾ ಬೋರ್ಡುಗಳಲ್ಲಿ ಮಾತ್ರ ನಾಮಕರಣ ವ್ಯವಸ್ಥೆಯು ಕೆಲವು ಕಾಲದವರೆಗೆ ಮುಂದುವರೆಯಿತು.

ಕೋಷ್ಟಕ ೧೨.೧ರಲ್ಲಿ ೧೯೫೦-೫೧, ೧೯೫೫-೫೬, ೧೯೬೯-೭೦ರಲ್ಲಿ ಇದ್ದಂತೆ ಪುರಸಭೆ/ನಗರಸಭೆಗಳ ಆದಾಯ ಮತ್ತು ವೆಚ್ಚಗಳನ್ನು ನೀಡಲಾಗಿದೆ.

ಕೋಷ್ಟಕ ೧೨.೨ರಲ್ಲಿ ೧೯೬೯-೭೦ರಲ್ಲಿ ಇದ್ದಂತೆ ಪುರಸಭೆಗಳ ವಿಸ್ತೀರ್ಣ, ಜನಸಂಖ್ಯೆ, ಸದಸ್ಯರ ಸಂಖ್ಯೆ ಮುಂತಾದ ವಿವರಗಳನ್ನು ನೀಡಲಾಗಿದೆ.

ಕೋಷ್ಟಕ ೧೨.೩ ರಲ್ಲಿ ೧೯೫೦-೫೧ ರಿಂದ ೧೯೬೯-೭೦ರ ವರೆಗಿನ ಜಿಲ್ಲಾ ಅಭಿವೃದ್ಧಿ ಸಮಿತಿ ಮತ್ತು ತಾಲೂಕು ಅಭಿವೃದ್ಧಿ ಮಂಡಳಿಗಳ ಆದಾಯ ವೆಚ್ಚ ನೀಡಲಾಗಿದೆ.

**ಕೋಷ್ಟಕ ೧೨.೧**

| ಪುರಸಭೆ/ನಗರ ಸಭೆಗಳು | ೧೯೫೦-೫೧ | | ೧೯೫೫-೫೬ | | ೧೯೫೯-೬೦ | |
|---|---|---|---|---|---|---|
| | ಆದಾಯ ರೂ. | ವೆಚ್ಚ ರೂ. | ಆದಾಯ ರೂ. | ವೆಚ್ಚ ರೂ. | ಆದಾಯ ರೂ. | ವೆಚ್ಚ ರೂ. |
| ಗುಲಬರ್ಗಾ | ೩,೫೪,೯೫೨ | ೨,೦೧,೫೯೨ | ೩,೯೦,೭೪೪ | ೩,೯೬,೨೭೦ | ೫,೧೧,೧೬೮ | ೪,೮೬,೫೧೪ |
| ಯಾದಗಿರಿ | ೩,೮೭,೧೨೬ | ೩,೭೨,೯೦೭ | ೧,೫೨,೦೭೭ | ೨,೧೬,೭೯೮ | ೧,೫೪,೧೧೫ | ೧,೫೩,೭೩೮ |
| ಆಳಂದ | — | — | ೪೭,೬೨೩ | ೨೬,೭೨೮ | ೫೧,೮೫೫ | ೭೧,೫೩೪ |
| ಸುರಪುರ | — | — | ೫೩,೨೮೭ | ೩೯,೧೭೫ | ೬೮,೩೧೧ | ೭೨,೨೮೫ |
| ಚಿತ್ತಾಪುರ | ೨೮,೮೭೧ | ೧೯,೪೨೫ | ೨೧,೬೮೭ | ೨೦,೭೧೨ | ೨೫,೬೮೭ | ೨೮,೭೧೬ |
| ಶಹಾಪುರ | ೨೫,೦೭೬ | ೨೦,೩೭೦ | ೨೭,೪೪೮ | ೨೦,೯೧೭ | ೩೧,೧೩೯ | ೩೫,೧೯೦ |
| ಶಹಾಬಾದ್ | — | — | ೨೧,೪೭೫ | ೨೦,೨೨೪ | ೪೭,೭೨೧ | ೧೬,೩೪೫ |
| ಸೇಡಂ | ೩೯,೫೯೭ | ೨೪,೬೯೪ | ೪೦,೯೬೭ | ೪೬,೯೬೭ | ೪೧,೮೦೧ | ೫೩,೩೩೦ |
| ಗುರುಮಠಕಲ್ | ೧೩,೭೨೭ | ೧೦,೯೧೮ | ೧೬,೧೩೬ | ೧೬,೬೩೫ | ೨೫,೫೪೩ | ೨೧,೦೪೪ |
| ಚಿಂಚೋಳಿ | ೨೦,೪೬೭ | ೧೭,೧೨೧ | ೧೭,೪೧೩ | ೧೯,೫೩೪ | ೨೨,೯೨೦ | ೨೯,೪೧೩ |

**ಕೋಷ್ಟಕ ೧೨.೨**

| ತಾಲೂಕು | ಪುರಸಭೆ/ನಗರಸಭೆ | ವ್ಯಾಪ್ತಿ ಚ. ಮೈಲಿ | ಜನಸಂಖ್ಯೆ | ಸದಸ್ಯರು | | | |
|---|---|---|---|---|---|---|---|
| | | | | ಒಟ್ಟು | ಮಹಿಳಾ | ಪ. ಜಾ. | ಪ. ಪಂ. |
| ಗುಲಬರ್ಗಾ | ನಗರ ಸಭೆ | ೯.೦೦ | ೯೭,೦೬೯ | ೩೪ | | ೩ | |
| ಯಾದಗಿರಿ | ನಗರ ಸಭೆ | ೨.೦೦ | ೨೫,೭೬೪ | ೧೭ | | ೨ | |
| ಆಳಂದ | ನಗರ ಸಭೆ | ೨.೫೦ | ೧೮,೦೦೦ | ೧೭ | | ೧ | |
| ಸುರಪುರ | ನಗರ ಸಭೆ | ೩.೦೦ | ೧೭,೬೮೯ | ೧೭ | | ೧ | |
| ಚಿತ್ತಾಪುರ | ಪುರಸಭೆ | ೧.೩೦ | ೧೧,೩೭೪ | ೧೫ | | ೧ | |
| ಶಹಾಪುರ | ಪುರಸಭೆ | ೦.೩೦ | ೧೧,೭೭೬ | ೧೫ | | ೨ | |
| ಶಹಾಬಾದ್ | ಪುರಸಭೆ | ೨.೯೦ | ೨೦,೪೫೪ | ೧೫ | | ೩ | |
| ಸೇಡಂ | ಪುರಸಭೆ | ೧.೭೦ | ೮,೫೨೭ | ೧೫ | ೧ | ೨ | |
| ಗುರಮಠಕಲ್ | ಪುರಸಭೆ | ೦.೨೦ | ೯,೭೧೨ | ೧೫ | | ೧ | |
| ಚಿಂಚೋಳಿ | ಪುರಸಭೆ | ೦.೧೦ | ೬,೦೪೭ | ೧೩ | | ೧ | |

**ಕೋಷ್ಟಕ ೧೨.೩**

**ಜಿಲ್ಲಾ ಅಭಿವೃದ್ಧಿ ಸಮಿತಿ ಹಾಗೂ ತಾಲೂಕು ಅಭಿವೃದ್ಧಿ ಮಂಡಳಿಗಳ ಆದಾಯ ಮತ್ತು ವೆಚ್ಚ**

| ವಿವರಗಳು | ೧೯೫೦-೫೧ | ೧೯೫೫೦೫೬ | ೧೯೫೯-೬೦ | ವಿವರಗಳು | ೧೯೫೦-೫೧ | ೧೯೫೫-೫೬ | ೧೯೫೯-೬೦ |
|---|---|---|---|---|---|---|---|
| ಆದಾಯ (ರೂ.ಗಳಲ್ಲಿ) | | | | ವೆಚ್ಚ (ರೂ.ಗಳಲ್ಲಿ) | | | |
| ೧. ಭೂ ಕಂದಾಯ | -- | -- | -- | ೧. ಮರು ಪಾವತಿ ಹಾಗೂ ಹಿಂಪಡೆತಗಳು | | | |
| ೨. ಸ್ಥಳೀಯ ತೆರಿಗೆಗಳು | ೨,೭೮,೮೨೭ | ೨,೬೬,೦೪೯ | ೩,೪೫,೯೫೧ | ೨. ಆಡಳಿತ | ೧,೧೪,೬೭೩ | ೧,೧೩,೪೫೩ | ೯೧,೮೮೪ |
| ೩. ಬಡ್ಡಿ | -- | -- | -- | ೩. ವಿಧಿ ಮತ್ತು ನ್ಯಾಯ | | | |
| ೪. ವಿಧಿ ಮತ್ತು ನ್ಯಾಯ | -- | -- | -- | ೪. ಪೋಲೀಸ್ | | | |
| ೫. ಪೋಲೀಸ್ | | | | ೫. ಬಂದರು ಹಾಗೂ ವೈಮಾನಿಕ | | | |
| ೬. ಶಿಕ್ಷಣ | | | | ೬. ಶಿಕ್ಷಣ | ೨೦,೩೩೫ | ೧೮,೦೯೮ | ೨೬,೮೦೧ |
| ೭. ವೈದ್ಯಕೀಯ | | | | ೭. ವೈದ್ಯಕೀಯ | ೬೧,೧೧೧ | ೫೩,೪೦೯ | ೭೬,೦೮೩ |
| ೮. ವೈಜ್ಞಾನಿಕ ಹಾಗೂ ಇತರ ಇಲಾಖೆಗಳು | | | | ೮. ವೈಜ್ಞಾನಿಕ ಹಾಗೂ ಇತರ ಇಲಾಖೆಗಳು | | | |
| ೯. ಪಿಂಚಣಿ ಕೊಡುಗೆ | | | | ೯. ಪಿಂಚಣಿ ಕೊಡುಗೆ | | | |
| ೧೦. ಲೇಖನ ಸಾಮಗ್ರಿ ಮತ್ತು ಮುದ್ರಣ | | | | ೧೦. ಲೇಖನಿ ಸಾಮಗ್ರಿ ಮತ್ತು ಮುದ್ರಣ | | | |
| | | | | ೧೧. ಇತರೆ | ೧೭,೮೫೫ | ೧೫,೩೫೦ | ೭೪,೬೯೪ |
| ೧೧. ಇತರೆ | ೫೦,೨೫೧ | ೨೨,೭೮೭ | ೨೨,೫೧೮ | ೧೨. ಕ್ಷಾಮ ಪರಿಹಾರ | | | |
| ೧೨. ರೈಲ್ವೆ | | | | ೧೩. ರೈಲ್ವೆ | | | |
| ೧೩. ನೀರಾವರಿ ಮತ್ತು ಚಿಕ್ಕ ಪುಟ್ಟ ಕಾಮಗಾರಿಗಳು | | | | ೧೪. ಚಿಕ್ಕಪುಟ್ಟ ಕಾಮಗಾರಿಗಳು ಮತ್ತು ನೌಕಾಸಂಚಾರ | | | |
| ೧೪. ಸಿವಿಲ್ ಕಾಮಗಾರಿಗಳು | | | | ೧೫. ಸಿವಿಲ್ ಲೋಕೋಪಯೋಗಿ ಕಾಮಗಾರಿಗಳು | | | |
| ಒಟ್ಟು | ೩,೨೯,೦೭೮ | ೨,೮೮,೮೩೬ | ೩,೬೮,೪೬೯ | ಒಟ್ಟು | ೨,೧೩,೩೯೪ | ೨,೦೦,೩೦೫ | ೨,೭೯,೪೬೨ |

ಹೈದರಾಬಾದ್ ರಾಜ್ಯದಲ್ಲಿ ಚುನಾಯಿತ ಸರ್ಕಾರ (ಮಂತ್ರಿಮಂಡಳ) ರಚನೆಗೊಂಡ ನಂತರ ಹೆಚ್ಚು ಪ್ರಗತಿಪರವಾದ ಹೈದರಾಬಾದ್ ಜಿಲ್ಲಾ ಮುನಸಿಪಾಲಟಿಗಳ ಅಧಿನಿಯಮ ೧೯೫೬ ಜಾರಿಯಲ್ಲಿ ಬಂದಿತು. ಈ ಕಾನೂನಿನ ಅನ್ವಯ ಗುಲಬರ್ಗಾ ಜಿಲ್ಲೆಯಲ್ಲಿ ನಾಲ್ಕು ನಗರಸಭೆಗಳು (ಸಿಟಿ ಮುನಸಿಪಾಲಿಟಿ), ಆರು ಪುರಸಭೆಗಳು ಇದ್ದವು. ಇವುಗಳಿಗೆ ಹೊಸ ಕಾನೂನಿನ ಅನ್ವಯ ೧೯೬೦ರಲ್ಲಿ ಚುಣಾವಣೆಗಳು ನಡೆದವು.

ನಗರ ಸಭೆಗಳು : ಗುಲಬರ್ಗಾ, ಶೋರಾಪುರ (ಸುರಪುರ), ಆಳಂದ, ಮತ್ತು ಯಾದಗಿರಿ,

ಪುರಸಭೆಗಳು : ಶಹಾಪುರ, ಚಿತ್ತಾಪುರ, ಸೇಡಂ, ಶಹಾಬಾದ್, ಚಿಂಚೋಳಿ ಮತ್ತು ಗುರುಮಠಕಲ್. ೧೯೬೧ರಲ್ಲಿ ಈ ಎಲ್ಲಾ ನಗರ/ಪುರ ಪಾಲಿಕೆಗಳ ಸದಸ್ಯರ ಸಂಖ್ಯೆ ೧೬೧ ಆಗಿತ್ತು.

ಕರ್ನಾಟಕ ಮುನಸಿಪಾಲಿಟಿಗಳ ಅಧಿನಿಯಮ ೧೯೬೪ ಜಾರಿಯಲ್ಲಿ ಬಂದನಂತರ ಹೊಸ ಕಾಯ್ದೆಯನ್ವಯ ೫೦,೦೦೦ಕ್ಕಿಂತ ಹೆಚ್ಚು ಜನಸಂಖ್ಯೆಯ ನಗರಗಳು ಮಾತ್ರ ಸಿಟಿ ಮುನಸಿಪಾಲಿಟಿಗಳು ಉಳಿದವುಗಳು ಟೌನ್ ಮುನಸಿಪಾಲಿಟಿಗಳು. ಅದರ ಅನ್ವಯ ೧೯೬೫ರಲ್ಲಿ ಕೇವಲ ಗುಲಬರ್ಗಾ ಮಾತ್ರ ನಗರ ಸಭೆಯಾಗಿ ಉಳಿದ ೯ (ಟೌನ್) ಪುರಸಭೆಗಳಾಗಿ ಮುಂದುವರೆದವು. ಈ ವ್ಯವಸ್ಥೆ ೧೯೮೭ರಲ್ಲಿ ಜಿಲ್ಲಾ ಪರಿಷತ್, ಮಂಡಳ ಪಂಚಾಯತ್ ವ್ಯವಸ್ಥೆ ಬರುವವರೆಗೆ ಮುಂದುವರೆಯಿತು. ೧೯೮೭ರಲ್ಲಿ ಕೆಲವು ಸಣ್ಣ ಪುರಸಭೆಗಳು ಮಧ್ಯಂತರ ಮಂಡಳ ಪಂಚಾಯತಿಗಳಾಗಿ ಮುಂದುವರೆದವು. ಅವುಗಳೆಂದರೆ ಅಫಜಲಪುರ, ಚಿಂಚೋಳಿ ಮತ್ತು ಜೇವರ್ಗಿ. ೧೯೯೩ರ ಇತ್ತೀಚಿನ ಪಂಚಾಯಿತಿ ರಾಜ್ ಕಾನೂನಿನ ಅಳವಡಿಕೆಯಿಂದ ಪುನಃ ಮಂಡಳ ಪಂಚಾಯತಿಗಳು ಟೌನ್ಪಂಚಾಯತಿಗಳಾಗಿ ಪುನರ್ ನಾಮಕರಣಗೊಂಡಿವೆ. ಈ ಮೇಲೆ ವಿವರಿಸಿದ ನಗರಸಭೆ/ಪುರಸಭೆಗಳು ಅಲ್ಲದೆ ಅಧಿಸೂಚಿತ ಪ್ರದೇಶಾಭಿವೃದ್ಧಿ ಸಮಿತಿಗಳು (ಎನ್.ಎ.ಸಿ), ಕೈಗಾರಿಕಾ ನಗರ ಪ್ರದೇಶಗಳಾದ ವಾಡಿ (ಎ.ಸಿ.ಸಿ), ಶಹಬಾದ್ (ಎ.ಸಿ.ಸಿ) ಮತ್ತು ಭೀಮರಾಯನ ಗುಡಿಗಳಿಗೆ ನಾಗರಿಕ ಸೇವಾ ಸೌಲಭ್ಯಗಳನ್ನು ಒದಗಿಸಲು ರಚಿತವಾಗಿವೆ. ಈ ಸಮಿತಿಗಳು ಚುನಾಯಿತ ಪ್ರತಿನಿಧಿಗಳನ್ನು ಒಳಗೊಂಡಿರುವುದಿಲ್ಲ. ಸದಸ್ಯರು ಸರ್ಕಾರದಿಂದ ನಾಮಕರಣ ಗೊಂಡವರು ಇರುವರು. ಈ ಸಮಿತಿಗಳಿಗೆ ಜಿಲ್ಲಾಧಿಕಾರಿಗಳು ಅಧ್ಯಕ್ಷರಾಗಿರುವರು. ೧೯೮೦ರಲ್ಲಿ ಜಿಲ್ಲೆಯಲ್ಲಿ ೧೪ ನಗರಸಭೆ/ಪುರಸಭೆಗಳು, ೫ ಟೌನ್ ಪಂಚಾಯತಿಗಳು ಮತ್ತು ೫೨೪ ಗ್ರಾಮ ಪಂಚಾಯತಿಗಳು ಇದ್ದವು. ೧೯೯೭ರಲ್ಲಿ ಜಿಲ್ಲೆಯಲ್ಲಿ ಒಂದು ಮಹಾನಗರ ಪಾಲಿಕೆ, ಗುಲಬರ್ಗಾ, ಏಳು  ಪುರಸಭೆಗಳಾದ ಯಾದಗಿರಿ, ಸೇಡಂ, ಸುರಪುರ, ಶಹಾಪುರ, ಶಹಾಬಾದ್, ಆಳಂದ ಹಾಗೂ ಚಿತ್ತಾಪುರ, ನಾಲ್ಕು ಟೌನ್ ಪಂಚಾಯ್ತಿಗಳಾದ ಗುರುಮಠಕಲ್, ಅಫಜಲಪುರ, ಚಿಂಚೋಳಿ ಮತ್ತು ಜೇವರ್ಗಿ. ಮೂರು ಅಧಿಸೂಚಿತ ಪ್ರದೇಶಗಳಾದ ಶಹಾಬಾದ್-ಎ.ಸಿ.ಸಿ, ವಾಡಿ-ಎ.ಸಿ.ಸಿ, ಮತ್ತು ಭೀಮರಾಯನಗುಡಿ ಕಾರ್ಯ ನಿರ್ವಹಿಸುತ್ತಿದ್ದವು

ಜಿಲ್ಲೆಯ ಪುರಸಭೆಗಳಿಗೆ ಇತ್ತೀಚಿನ ಚುನಾವಣೆಗಳು ೧೯೯೭ರ ಪ್ರಾರಂಭದಲ್ಲಿ ನಡೆದು ಎಲ್ಲ ಪುರಸಭೆಗಳು ಪುನರ್ರಚನೆಗೊಂಡವು. ಜಿಲ್ಲೆಯ ಏಳು ಪುರಸಭೆಗಳ ಮತ್ತು ನಾಲ್ಕು ಪಟ್ಟಣ ಪಂಚಾಯಿತಿಗಳ ಒಟ್ಟು ಚುನಾಯಿತ ಸದಸ್ಯರ ಸಂಖ್ಯೆ ೨೨೩. ಈ ಪೈಕಿ ಸಾಮಾನ್ಯ ಸದಸ್ಯರ ಸಂಖ್ಯೆ ೧೦೫, ಹಿಂದುಳಿದ ವರ್ಗ ಎ ಮತ್ತು ಬಿ ಸದಸ್ಯರ ಸಂಖ್ಯೆ ಕ್ರಮವಾಗಿ ೫೮ ಮತ್ತು ೧೮ ಆಗಿದ್ದರೆ. ಪರಿಶಿಷ್ಟ ಜಾತಿ ಮತ್ತು ಪಂಗಡದ ಸದಸ್ಯರ ಸಂಖ್ಯೆ ಕ್ರಮವಾಗಿ ೩೯ ಮತ್ತು ೩ ಎಂದು ತಿಳಿದು ಬರುವುದು. ಒಟ್ಟು ಸದಸ್ಯರ ಪೈಕಿ ಎಲ್ಲ ವರ್ಗ ಸೇರಿ ಮಹಿಳಾ ಸದಸ್ಯರ ಸಂಖ್ಯೆ ೮೫ ಆಗಿತ್ತು.

**ಕರ್ನಾಟಕ ಪುರುಸಭೆಗಳ ಕಾನೂನು ೧೯೬೪**

ಪ್ರಚಲಿತ ಕಾನೂನು ರಾಜ್ಯ ಪುನರ್ ರಚನೆಯ ನಂತರ ೧೯೬೫ ಏಪ್ರಿಲ್ ನಿಂದ ಜಾರಿಯಲ್ಲಿ ಬಂದಿರುವುದು. ಇದು ರಾಜ್ಯದ ಪ್ರಥಮ, ಸಮಗ್ರ, ಏಕೀಕೃತ ನಗರ ಪ್ರದೇಶಗಳ ಸ್ಥಾನಿಕ ಸಂಸ್ಥೆಗಳ ಕಾನೂನಾಗಿರುವುದು. ಇದರ ಅನ್ವಯ ಪ್ರಥಮ ೨೦,೦೦೦ ಜನಸಂಖ್ಯೆಯವರೆಗೆ ೧೫ ಪ್ರತಿನಿಧಿಗಳಂತೆ, ನಂತರದ ಪ್ರತಿ ೧೦,೦೦೦ ಜನಸಂಖ್ಯೆಗೆ ನಾಲ್ವರಂತೆ ಹೆಚ್ಚಿನ ಸಂಖ್ಯೆಯ ಪ್ರತಿನಿಧಿಗಳನ್ನು ಆಯ್ಕೆ ಮಾಡಬಹುದು. ಸದರಿ ಕಾನೂನಿ ಅನ್ವಯ ೧೦,೦೦೦ ಕ್ಕಿಂತ ಹೆಚ್ಚು ೫೦,೦೦೦ ಕ್ಕಿಂತ ಕಡಿಮೆ ಜನಸಂಖ್ಯೆ ಇರುವ ನಗರ ಪ್ರದೇಶಗಳಿಗೆ ಪುರಸಭೆ (ಟೌನ್ ಮುನಸಿಪಲ್ ಕೌನ್ಸಿಲ್) ಮತ್ತು ೫೦,೦೦೦ಕ್ಕೂ ಹೆಚ್ಚು ಮೂರು ಲಕ್ಷಕ್ಕಿಂತ ಕಡಿಮೆ ಜನಸಂಖ್ಯೆ ಇರುವ ನಗರ ಪ್ರದೇಶಗಳಿಗೆ ನಗರ ಸಭೆ (ಸಿಟಿ ಮುನಸಿಪಾಲಿಟಿ)ಗಳನ್ನು

ರಚಿಸಬಹುದಾಗಿದೆ. ಪುರಸಭೆಯ ಸದಸ್ಯರ ಅಧಿಕಾರ ಅವಧಿಯು ಐದು ವರ್ಷ, ಇತ್ತೀಚಿನ (೧೯೯೭) ತಿದ್ದುಪಡಿ ಪ್ರಕಾರ ಅಧ್ಯಕ್ಷರ, ಉಪಾಧ್ಯಕ್ಷರ ಹಾಗೂ ಸ್ಥಾಯಿಸಮಿತಿಯ ಅಧ್ಯಕ್ಷರ ಅಧಿಕಾರ ಅವಧಿ ೨೦ ತಿಂಗಳು. ನಗರ ಸಭೆ/ಪುರಸಭೆಗಳ ಅಧ್ಯಕ್ಷ ಉಪಾಧ್ಯಕ್ಷ ಹಾಗೂ ಸದಸ್ಯರಿಗೆ ಸರ್ಕಾರ ಆಯಾ ಸ್ಥಳೀಯ ಸಂಸ್ಥೆಗಳ ದರ್ಜೆಗನುಸಾರ ಮಾಸಿಕಗೌರವ ಧನ ಮತ್ತು ದಿನಭತ್ಯವನ್ನು ಗೊತ್ತು ಪಡಿಸಿದೆ. ನಗರ ಸಭೆಯ ಒಟ್ಟು ಸದಸ್ಯರ ಸಂಖ್ಯೆಯಲ್ಲಿ ಶೇ. ೧೮ ಪ.ಜಾ./ಪ.ಪಂ. ದವರಿಗೆ ಮತ್ತು ಶೇ. ೨೦ರಷ್ಟು ಸ್ಥಾನಗಳನ್ನು ಮಹಿಳೆಯರಿಗೆ ಮೀಸಲಾಗಿಡಲು ಸೂಚಿಸಲಾಗಿದೆ. ಪುರಸಭೆಯು ತನ್ನ ವಾರ್ಷಿಕ ಆಯವ್ಯಯದಲ್ಲಿ ಶೇ. ೧೮ರಷ್ಟು ಹಣವನ್ನು ಪ.ಜಾ./ಪ. ಪಂ.ಗಳ ವಿವಿಧ ಅಭಿವೃದ್ಧಿ ಕಾರ್ಯಗಳಿಗೆ ಖರ್ಚುಮಾಡಬೇಕು. ಎಲ್ಲಾ ಬಗೆಯ ಪೌರ ವಿಷಯಗಳನ್ನು ಪರಿಶೀಲಿಸಲು ಪ್ರತಿ ಒಂದು ಪುರಸಭೆಯು ೧೨ ಜನ ಸದಸ್ಯರನ್ನು ಒಳಗೊಂಡ ಸ್ಥಾಯಿ ಸಮಿತಿಯನ್ನು ಹೊಂದಿರುವುದು. ನಗರ ಸಭೆಗಳಿಗೆ ಆಯುಕ್ತರು (ಕಮಿಶನರ್), ಪುರಸಭೆಗಳಿಗೆ ಮುಖ್ಯಧಿಕಾರಿ (ಚೀಪ್ ಆಫೀಸರ್) ಮುಖ್ಯಕಾರ್ಯನಿರ್ವಾಹಕರಾಗಿರುವರು. ರಾಜ್ಯ ಸರ್ಕಾರವು ೧೯೮೩ರಲ್ಲಿ ಪುರಸಭಾ ಕಾನೂನು ೧೯೬೪ ಮತ್ತು ಗ್ರಾಮ ಪಂಚಾಯಿತಿ ಜಿಲ್ಲಾ ಬೋರ್ಡುಗಳ ಕಾನೂನು (೧೯೫೯) ಇವುಗಳಿಗೆ ವ್ಯಾಪಕ ತಿದ್ದುಪಡಿಗಳನ್ನು ತರುವ ಮೂಲಕ ಪ್ರೌಢ ಮತದಾರರ ವಯಸ್ಸನ್ನು ೨೧ ರಿಂದ ೧೮ ಕ್ಕೆ ಇಳಿಸಿದೆ. ಪುರಸಭೆ/ನಗರಪಾಲಿಕೆಗಳಿಗೆ ವಹಿಸಿದ ಕಾರ್ಯವನ್ನು ಕಡ್ಡಾಯ ಮತ್ತು ವಿವೇಚನಾಧೀನ ಎಂದು ಎರಡು ಬಗೆಯಲ್ಲಿ ವಿಂಗಡಿಸಲಾಗಿದೆ. ಪುರಸಭೆಯು ತನ್ನ ಆರ್ಥಿಕ ಸ್ಥಿತಿ-ಗತಿಗಳನ್ನು ಗಮನಿಸಿ ವಿವೇಚನಾಧೀನ ಕಾರ್ಯಕ್ರಮಗಳನ್ನು ಕೈಗೊಳ್ಳಬಹುದು. ಈ ಸಂಸ್ಥೆಗಳ ಆದಾಯ ಮೂಲಗಳೆಂದರೆ ಆಸ್ತಿ ತೆರಿಗೆ, ವಾಹನ ಮತ್ತು ಪ್ರಾಣಿಗಳ ಮೇಲಿನ ಸುಂಕ, ನೈರ್ಮಲ್ಯ ಉಪಕರ, ನೀರಿನದರ, ದೀಪದ ತೆರಿಗೆ, ವೃತ್ತಿ, ಕಸಬು, ಉದ್ಯೋಗ ಮುಂತಾದವುಗಳ ಮೇಲಿನ ತೆರಿಗೆ, ದಂಡದ ಹಣ, ಮಾರುಕಟ್ಟೆ ಶುಲ್ಕ, ಪುರಸಭೆಯ ಆಸ್ತಿಗಳಿಂದ ಬರುವ ಆದಾಯ ಮುಂತಾದವುಗಳು. ಇದೂ ಅಲ್ಲದೇ ಸರ್ಕಾರದಿಂದ ಬರುವ ಸಹಾಯಧನ, ಅಭಿವೃದ್ಧಿ ಹಣ, ಪ್ರವೇಶ ತೆರಿಗೆ ಮುಂತಾದವುಗಳು ಸೇರಿವೆ.

### ಪುರಸಭೆಗಳಿಗೆ ಬಹುಮಾನ

ರಾಜ್ಯದ ಪುರಸಭೆಗಳು/ನಗರಸಭೆಗಳು ಆರೋಗ್ಯಕರ ಸ್ಪರ್ಧಾತ್ಮಕ ಮನೋಭಾವನೆಗಳನ್ನು ಬೆಳೆಸಿಕೊಂಡು ನಾಗರಿಕ ಸೌಲಭ್ಯಗಳನ್ನು ಒದಗಿಸುವಲ್ಲಿ ಹೆಚ್ಚು ಕ್ರಿಯಾತ್ಮಕವಾಗಿ ತೊಡಗುವಂತೆ ಪ್ರೋತ್ಸಾಹಿಸಲು ರಾಜ್ಯ ಸರ್ಕಾರವು ೧೯೮೪ರಿಂದ ಬಹುಮಾನ ಯೋಜನೆಯನ್ನು ಪ್ರಾರಂಭಿಸಿದೆ. ಈ ಯೋಜನೆಯ ಅನ್ವಯ ಮಹಾನಗರ ಪಾಲಿಕೆಗಳಿಗೆ ರಾಜ್ಯ ಮಟ್ಟದಲ್ಲಿ, ವಿಭಾಗ ಮಟ್ಟದಲ್ಲಿ ನಗರಸಭೆ/ಪುರಸಭೆಗಳಿಗೆ ನಗದು ಬಹುಮಾನ ನೀಡಲಾಗುವುದು. ಆಯ್ಕೆಯಾದ ಮಹಾನಗರ ಪಾಲಿಕೆಗೆ ರೂ. ೨೫ ಲಕ್ಷ, ನಗರ ಸಭೆಗೆ ೧೫ಲಕ್ಷ ಮತ್ತು ಪ್ರತಿ ಒಂದು ಕಂದಾಯ ವಿಭಾಗದ ಪುರಸಭೆಗೆ ರೂ. ೫ ಲಕ್ಷದ ಬಹುಮಾನ ನೀಡಲಾಗುವುದು.

**ಪಟ್ಟಣಗಳ ಸಮಗ್ರ ಅಭಿವೃದ್ಧಿ ಯೋಜನೆ** : ಕೇಂದ್ರ ಸರ್ಕಾರದಿಂದ ಐದನೆಯ ಪಂಚಾವಾರ್ಷಿಕ ಯೋಜನೆಯ ಅವಧಿಯಲ್ಲಿ ಪ್ರಾರಂಭಿಸಲ್ಪಟ್ಟ ಈ ಯೋಜನೆಯ ಮುಖ್ಯ ಉದ್ದೇಶ ಒಂದು ಲಕ್ಷ ಜನಸಂಖ್ಯೆಗಿಂತ ಕಡಿಮೆ ಇರುವ ಜಿಲ್ಲಾ ಕೇಂದ್ರ ಸ್ಥಳಗಳು, ಮಧ್ಯಮ ಮತ್ತು ಸಣ್ಣ ಪ್ರಮಾಣದ ಅಭಿವೃದ್ಧಿ ಹೊಂದುತ್ತಿರುವ ಪಟ್ಟಣ ಪ್ರದೇಶಗಳು ಮುಂತಾದವುಗಳ ಸಮಗ್ರ ಅಭಿವೃದ್ಧಿಯನ್ನು ಸಾಧಿಸುವುದು. ಸದರಿ ಯೋಜನೆಗಳ ವೆಚ್ಚದಲ್ಲಿ ಕೇಂದ್ರ ಸರ್ಕಾರವು ಅರ್ಧದಷ್ಟು ವೆಚ್ಚವನ್ನು ಭರಿಸುವುದು. ಈ ಯೋಜನೆಯು ಜಿಲ್ಲೆಯಲ್ಲಿ ಶಹಾಪುರ, ಸುರಪುರ, ಆಳಂದ ಪುರಸಭೆಗಳು ಮತ್ತು ಗುರುಮಠಕಲ್, ಚಿಂಚೋಳಿ ಟೌನ್ಪಂಚಾಯತಿಗಳನ್ನು ಒಳಗೊಂಡಿರುವುದು.

### ನಗರ ಪ್ರವೇಶ ತೆರಿಗೆ

ಭಾರತದಲ್ಲಿ ವ್ಯಾಪಾರಿ ಸರಕುಗಳ ಮೇಲೆ ನಗರ ಪ್ರವೇಶ ತೆರಿಗೆ (ಆಕ್ಟ್ರಾಯ/ಜಕಾತಿ)ರದ್ದು ಪಡಿಸಿದ ೧೮ ರಾಜ್ಯಗಳ ಪೈಕಿ ಕರ್ನಾಟಕವೂ ಒಂದು. ಪ್ರಾಚೀನ ಕಾಲದಿಂದಲೂ ಈ ವ್ಯವಸ್ಥೆಯು ನಡೆದುಕೊಂಡು ಬಂದಿರುವ ಬಗ್ಗೆ ಶಾಸನಗಳಿಂದ ತಿಳಿದು ಬರುವುದು. ರಾಜಾದಾಯದಲ್ಲಿ ಇದು ಒಂದು ಪ್ರಮುಖ ಆದಾಯದ ಮೂಲವಾಗಿತ್ತು. ೧೯೭೯ ಏಪ್ರಿಲ್ ಒಂದರಿಂದ ಜಕಾತಿಯನ್ನು ತೆಗೆದು ಹಾಕಲಾಯಿತು. ಇದರಿಂದ ಪುರಸಭೆ/ ನಗರಸಭೆಗಳ ಆದಾಯದ ಪ್ರಮುಖ ಮೂಲ ಸೆಲೆ ಬತ್ತಿದಂತಾಯಿತು. ಇದರಿಂದ ಅನೇಕ ಪುರಸಭೆಗಳು ಅಭಿವೃದ್ಧಿ ಕಾರ್ಯಗಳಿಗೆ ಅಲ್ಲದೇ, ಸಿಬ್ಬಂದಿ ವೆಚ್ಚಕ್ಕೂ

ಸಹ ಸರ್ಕಾರದ ಅನುದಾನವನ್ನೇ ಅವಲಂಬಿಸುವಂತಾಗಿದೆ. ಈ ಕೊರತೆಯನ್ನು ತುಂಬಿ ಕೊಡಲು ರಾಜ್ಯ ಸರ್ಕಾರವು ೧೯೭೯ರ ಸ್ಥಳೀಯ ಪ್ರದೇಶಗಳ ಅನುಭೋಗ, ಉಪಯೋಗ, ಅಥವಾ ಮಾರಾಟ ವಸ್ತುಗಳ ಮೇಲೆ ಪ್ರವೇಶ ತೆರಿಗೆ ಅಧನಿಯಮದ ಅನ್ವಯ ತೆರಿಗೆಯನ್ನು ಸಂಗ್ರಹಿಸಿ ಆಕ್ಟ್ರಾಯ ಅನುದಾನ ಮೂಲಕ ಸ್ಥಳೀಯ ಸಂಸ್ಥೆಗಳಿಗೆ ಒದಗಿಸುವುದು. ೧೯೯೨ರಿಂದ ಸರ್ಕಾರವು ಪ್ರವೇಶ ತೆರಿಗೆಯನ್ನು ೮೦ ವಿವಿಧ ಬಗೆಯ ವಸ್ತುಗಳ ಮೇಲೆ ಶೇ. ೧ ರಿಂದ ೫ರ ಪ್ರಮಾಣದಲ್ಲಿ ವಿಧಿಸುತ್ತಿದೆ. ಈ ಕಾನೂನಿನ ಅನ್ವಯ ವಾರ್ಷಿಕ ರೂ. ೭೫,೦೦೦ ಕ್ಕಿಂತ ಹೆಚ್ಚು ವಹಿವಾಟು ನಡೆಸುವ ವರ್ತಕರು ನೊಂದಾಯಿಸಿಕೊಳ್ಳಬೇಕು. ಜನ ಸಾಮಾನ್ಯರು ದಿನನಿತ್ಯ ಬಳಸುವ ಕೆಲವು ವಸ್ತುಗಳಿಗೆ ಪ್ರವೇಶ ತೆರಿಗೆಯಿಂದ ವಿನಾಯಿತಿ ನೀಡಲಾಗಿದೆ. ಗುಲಬರ್ಗಾ ಜಿಲ್ಲೆಯಲ್ಲಿ ಪ್ರವೇಶ ತೆರಿಗೆಯನ್ನು ಕುರಿತಂತೆ ನೊಂದಾಯಿಸಲ್ಪಟ್ಟ ವರ್ತಕರ ಸಂಖ್ಯೆ ೧೯೮೯-೯೦ರಲ್ಲಿ ೧,೧೭೪ ಆಗಿದ್ದರೆ ೧೯೯೧-೯೨ರಲ್ಲಿ ೯೭೫ ಆಗಿತ್ತು. ೧೯೯೫-೯೬ರಲ್ಲಿ ಈ ಸಂಖ್ಯೆಯು ೧,೦೦೯ ಆಗಿತ್ತು. ಈ ಜಿಲ್ಲೆಗೆ ಸೀಮಿತವಾದಂತೆ ವಸೂಲಾದ ಪ್ರವೇಶ ತೆರಿಗೆ ಈ ಮುಂದಿನಂತೆ ಇರುವುದು. ಮೊತ್ತ ಲಕ್ಷ ರೂ.ಗಳಲ್ಲಿ ೧೯೯೦-೯೧ (೮೪.೩೭), ೯೧-೯೨ (೧೦೭.೯೭), ೯೨-೯೩(೨೫೩.೫೧), ೯೩-೯೪ (೨೯೧.೦೯), ೯೪-೯೫ (೩೬೬.೦೩). ಮುಂದಿನ ಪುಟಗಳಲ್ಲಿ ಜಿಲ್ಲೆಯಲ್ಲಿನ ಕೆಲವು ಪ್ರಮುಖ ನಗರ ಪ್ರದೇಶದ ಸ್ಥಳೀಯ ಸಂಸ್ಥೆಗಳನ್ನು ಮತ್ತು ನಗರಾಭಿವೃದ್ಧಿಗೆ ಸಂಬಂಧಪಟ್ಟ ಇತರೇ ಸಂಸ್ಥೆಗಳನ್ನು ಕುರಿತಂತೆ ಲಭ್ಯ ಮಾಹಿತಿ ಆಧಾರದ ಮೇಲೆ ಅವುಗಳ ಕಾರ್ಯಚಟುವಟಿಗೆಗಳನ್ನು ಕುರಿತಂತೆ ಸಂಕ್ಷಿಪ್ತವಾಗಿ ಪರಿಚಯಿಸಲಾಗಿದೆ.

## ಗುಲಬರ್ಗಾ ಮಹಾನಗರ ಪಾಲಿಕೆ

ಜಿಲ್ಲೆಯ ಮತ್ತು ವಿಭಾಗೀಯ ಕೇಂದ್ರವಾದ ಗುಲಬರ್ಗಾ ನಗರಕ್ಕೆ ಪ್ರಪ್ರಥಮವಾಗಿ ಮುನಸಿಪಾಲಿಟಿಯು (ನಗರಸಭೆ) ೧೯೪೫ರಲ್ಲಿ ರಚನೆಯಾಯಿತು. ಇದಕ್ಕೂ ಪೂರ್ವದಲ್ಲಿ ನಗರಾಭಿವೃದ್ಧಿ ಕೆಲಸ ಕಾರ್ಯಗಳನ್ನು ಜಿಲ್ಲಾ ಬೋರ್ಡು ನಿರ್ವಹಿಸುತ್ತಿತ್ತು. ೧೯೫೨ರಲ್ಲಿ ಪ್ರಥಮ ಚುನಾಯಿತ ಮಂಡಳಿಯ ರಚನೆಯಾಯಿತು. ೧೯೬೧ರಲ್ಲಿ ನಗರದ ಜನಸಂಖ್ಯೆ ೯೭,೧೫೯ ಆಗಿದ್ದು, ವಿಸ್ತೀರ್ಣ ೨೫ ಚ. ಕಿಮೀ ಆಗಿತ್ತು. ನಗರವನ್ನು ಅಂದು (೧೯೬೧) ೩೧ ವಾರ್ಡುಗಳಾಗಿ ವಿಂಗಡಿಸಲಾಗಿತ್ತು. ನಗರ ಸಭೆಯ ಸದಸ್ಯರ ಸಂಖ್ಯೆ ೩೪ ಆಗಿದ್ದು ಆ ಪೈಕಿ ಮೂರು ಸ್ಥಾನಗಳನ್ನು ಪರಿಶಿಷ್ಟ ಜಾತಿಯವರಿಗೆ ಮೀಸಲಾಗಿ ಇಡಲಾಗಿತ್ತು.

೨-೧೦-೧೯೮೧ರಲ್ಲಿ ನಗರ ಸಭೆಯನ್ನು ಮಹಾನಗರ ಪಾಲಿಕೆಯನ್ನಾಗಿ ಉನ್ನತಿಕರಿಸಲಾಯಿತು. ಮಹಾನಗರ ಪಾಲಿಕೆಯ ರಚನೆಯಿಂದ ಸ್ಥಳೀಯ ಸಂಸ್ಥೆಯ ಆಡಳಿತ ವ್ಯಾಪ್ತಿಯು ವಿಸ್ತಾರಗೊಂಡು ಅನೇಕ ನೆರೆಯ ಗ್ರಾಮೀಣ ಪ್ರದೇಶಗಳು ನಗರ ಕಕ್ಷೆಯಲ್ಲಿ ಸೇರಿಸಲ್ಪಟ್ಟವು. ೧೯೯೫-೯೬ರಲ್ಲಿದ್ದಂತೆ ಈ ಮಹಾನಗರ ಸಭೆಯ ವಿಸ್ತೀರ್ಣ ೫೫.೧೫ ಚ. ಕಿ. ಮೀ ಇದ್ದು ಮಹಾನಗರಪಾಲಿಕೆಯ ಪರಿಮಿತಿಯಲ್ಲಿ ೧೯೮೧ರಲ್ಲಿ ೨೪,೮೨೦ ಮನೆಗಳಿದ್ದರೆ, ೧೯೯೧ ರಲ್ಲಿ ೨೯,೩೫೦ ಮನೆಗಳು, ೧೯೯೫ರಲ್ಲಿ ೩೨,೯೮೦ ಮನೆಗಳು ಇದ್ದವು. ನಗರ ಹೊರವಲಯದ ಸಮುಚ್ಚಯಗಳು ಒಳಗೊಂಡಂತೆ ನಗರದ ಜನಸಂಖ್ಯೆ ೧೯೯೧ರಲ್ಲಿ ೩,೧೦,೯೨೦ ಆಗಿದ್ದರೆ ಕೇವಲ ಮಹಾನಗರ ಪಾಲಿಕೆಯ ಪರಿವ್ಯಾಪ್ತಿಯಲ್ಲಿ ಬರುವ ಜನಸಂಖ್ಯೆ ೩,೦೪,೦೯ ಆಗಿತ್ತು. ೧೯೯೫ರಲ್ಲಿ ಕರದಾತರ ಸಂಖ್ಯೆ ೩೨,೯೮೦ ಇದ್ದು ಸರಾಸರಿ ಕರಭಾರ ತಲಾ ರೂ. ೪೧.೫೫ ಆಗಿದ್ದರೆ ೧೯೯೧ರಲ್ಲಿ ರೂ. ೨೨.೧೮, ೧೯೮೧ ರಲ್ಲಿ ರೂ. ೨೦.೦೦ ಆಗಿತ್ತು. ಇತ್ತೀಚೆಗೆ ಮಹಾನಗರಪಾಲಿಕೆಗೆ ಚುನಾವಣೆಗಳು ಜನವರಿ ೧೯೯೬ರಲ್ಲಿ ನಡೆದು ಪುನರ್‌ರಚಿತ ಮಹಾನಗರ ಪಾಲಿಕೆಯು ೫೫ ಸದಸ್ಯರನ್ನು ಒಳಗೊಂಡಿರುವುದು. ಆ ಪೈಕಿ ೨೭ ಸಾಮಾನ್ಯ ವರ್ಗದವರು, ಹಿಂದುಳಿದ ವರ್ಗ ಎ ೧೪, ಹಿಂದುಳಿದ ವರ್ಗ ಬಿ ನಾಲ್ಕು, ಪರಿಶಿಷ್ಟ ಜಾತಿ ೯ ಮತ್ತು ಪರಿಶಿಷ್ಟ ಪಂಗಡ ಒಂದು ಈ ರೀತಿ ಹಂಚಿಕೆ ಇರುವುದು. ಎಲ್ಲಾ ವರ್ಗಗಳಿಂದ ಸೇರಿ ಒಟ್ಟು ಮಹಿಳಾ ಸದಸ್ಯರ ಸಂಖ್ಯೆ ೧೯.

## ನೀರು ಪೂರೈಕೆ

೧೯೮೦ರ ಪೂರ್ವದಲ್ಲಿ ಗುಲಬರ್ಗಾಕ್ಕೆ ನೀರು ಪೂರೈಸಲು ಭೋಸಗಾ ಕೆರೆಯೊಂದೇ ಮೂಲವಾಗಿತ್ತು. ಈ ಕೆರೆಯು ನಗರದಿಂದ ಸುಮಾರು ೯.೬ ಕಿ. ಮೀ. ದೂರದಲ್ಲಿ ಇರುವುದು. ಕೆರೆಯ ಜಲಾನಯನ ಪ್ರದೇಶದ ವಿಸ್ತೀರ್ಣ ೯೦.೧೩ ಚ. ಕಿ. ಮೀ. ಬೆಳೆಯುತ್ತಿರುವ ನಗರದ ಅವಶ್ಯಕತೆಯನ್ನು ಪೂರೈಸಲು ಸಹಾಯಕವಾಗುವಂತೆ ೧೯೬೫ರಲ್ಲಿ ಸಮಗ್ರ ಕುಡಿಯುವ ನೀರಿನ ಸರಬರಾಜು ಯೋಜನೆಯನ್ನು ಪ್ರಾರಂಭಿಸಲಾಯಿತು. ಈ ಯೋಜನೆಯ ಅಂದಾಜು ವೆಚ್ಚ

ರೂ. ೯೦ ಲಕ್ಷ ಆಗಿತ್ತು. ಸಮಾರು ಎರಡು ಲಕ್ಷ ನಗರದ ಜನಸಂಖ್ಯೆಗೆ ತಲಾ ೩೦ ಗ್ಯಾಲನ್ನು ನೀರನ್ನು ಒದಗಿಸುವ ಉದ್ದೇಶದಿಂದ ಯೋಜನೆಯನ್ನು ರೂಪಿಸಲಾಗಿತ್ತು. ಸದರಿ ಯೋಜನೆಯನ್ನು ವಿಸ್ತರಿಸಲಾಯಿತು ಮತ್ತು ಸುಧಾರಿಸಲಾಯಿತು. ವರ್ಷ ಕಳೆದಂತೆ ಹೆಚ್ಚುತ್ತಿರುವ ನೀರಿನ ಅವಶ್ಯಕತೆಯನ್ನು ಪೂರೈಸಲು ಹೆಚ್ಚುವರಿಯಾಗಿ ಬೆಣ್ಣೆ ತೊರಾ ನದಿಯ ಯೋಜನೆಯನ್ನು ೧೯೭೧-೭೨ರಲ್ಲಿ ಪ್ರಾರಂಭಿಸಿ ೧೯೭೮ರಲ್ಲಿ ರೂ. ೧೫೩ ಲಕ್ಷ ವೆಚ್ಚದೊಂದಿಗೆ ಪೂರೈಸಲಾಯಿತು. ಮುಂದಿನ ವರ್ಷಗಳಲ್ಲಿ ಈ ಎರಡೂ ಮೂಲಗಳಿಂದ ಸಂಗ್ರಹಿಸಿದ ನೀರು ಸಾಕಾಗದೇ ೧೯೮೭ರಲ್ಲಿ ಶಾಶ್ವತ ಪರಿಹಾರವಾಗಿ ಭೀಮಾ ಯೋಜನೆಯನ್ನು ರೂ. ೧೨.೮೬ ಕೋಟಿ ವೆಚ್ಚದ ಅಂದಾಜಿನೊಂದಿಗೆ ಕೈಗೆತ್ತಿಕೊಳ್ಳಲಾಯಿತು. ಈ ಯೋಜನೆಯನ್ನು ೧೯೯೩ರಲ್ಲಿ ಸಂಪೂರ್ಣಗೊಳಿಸಲಾಯಿತು. ಗುಲಬರ್ಗಾ ನಗರವು ೧೯೮೦, ೮೫, ೮೮, ೯೦ ಮತ್ತು ೧೯೯೨ರಲ್ಲಿ ತೀವ್ರ ತರವಾದ ನೀರಿನ ಬರವನ್ನು ಅನುಭವಿಸಿತು. ೧೯೯೨ರ ಬೇಸಿಗೆಯಲ್ಲಿ ನೀರಿನ ತೀವ್ರ ಕೊರತೆಯನ್ನು ನೀಗಿಸಲು ಮಂತ್ರಾಲಯದಿಂದ ರೈಲ್ವೆ ಟ್ಯಾಂಕರುಗಳ ಮೂಲಕ ನೀರನ್ನು ಪೂರೈಸಲಾಯಿತು. ಈ ಮೂರು ಯೋಜನೆಗಳಲ್ಲದೇ ಸುಮಾರು ೧೧೦೦ ಕೊಳವೆ ಬಾವಿಗಳನ್ನು ಕೊರೆಯಲಾಗಿದೆ. ಆ ಪೈಕಿ ೧೪೫ ಕೊಳವೆ ಬಾವಿಗಳಿಗೆ ವಿದ್ಯುತ್ ಪಂಪುಗಳನ್ನು ಅಳವಡಿಸಲಾಗಿದೆ.

ಭೀಮಾ ಯೋಜನೆಗಾಗಿ ಸರ್ಕಾರ ರೂ. ೨೪ ಕೋಟಿ ವಿನಿಯೋಗಿಸಿದೆ. ನಗರದಿಂದ ಸುಮಾರು ೨೫ ಕಿ. ಮೀ. ದೂರ ಇರುವ ಸರಡಗಿ ಗ್ರಾಮದ ಬಳಿ ಭೀಮಾನದಿಗೆ ಬ್ಯಾರೇಜ್ ನಿರ್ಮಿಸಿ ನಗರದಲ್ಲಿ ಒಂದು ನೂತನ ಜಲಶುದ್ಧೀಕರಣ ಕೇಂದ್ರ ಸ್ಥಾಪಿಸಲಾಗಿದೆ. ಸರಡಗಿಯಿಂದ ಜಲಶುದ್ಧೀಕರಣ ಕೇಂದ್ರದವರೆಗೆ ಪೈಪುಗಳ ಮೂಲಕ ನಗರಕ್ಕೆ ನೀರು ತಲುಪಿಸಲಾಗುವುದು. ಮೇಲಿನ ಮೂರು ಯೋಜನೆಗಳು ಮತ್ತು ಕೊಳವೆ ಭಾವಿಗಳು ಸೇರಿ ಒಟ್ಟು ೭.೦೫ ದಶಲಕ್ಷ ಗ್ಯಾಲನ್ ನೀರಿನ ಪೂರೈಕೆಯಾಗುವದು, ಆ ಪೈಕಿ ಭೀಮಾ ಯೋಜನೆಯಿಂದ ೫.೫೦ ದಶಲಕ್ಷ ಗ್ಯಾಲನ್, ಬೆಣ್ಣೆ ತೊರಾ ಯೋಜನೆಯಿಂದ ೦.೭೫ ದಶಲಕ್ಷ ಗ್ಯಾಲನ್, ಕೊಳವೆ ಬಾವಿಗಳಿಂದ ೦.೮೦ ದಶಲಕ್ಷ ಗ್ಯಾಲನ್ ನೀರು ಪೂರೈಕೆಯಾಗುವುದು. ಈ ಲೆಕ್ಕಾಚಾರದಲ್ಲಿ ಪ್ರತಿದಿನ ಸರಾಸರಿ ತಲಾ ೨೦ ಗ್ಯಾಲನ್, ನೀರನ್ನು ಒದಗಿಸಲಾಗುವುದು.

ಈ ಮೂರೂ ಯೋಜನೆಗಳು ಚಾಲನೆಯಲ್ಲಿ ಇದ್ದರೂ ೧೯೯೧ರಿಂದ ನೀರಿನ ಸಮಸ್ಯೆಯು ಗಂಭೀರವಾಗುತ್ತಿದೆ. ನಗರದ ಹಳೇ ಬಡಾವಣೆಗಳಲ್ಲಿ ಕಳೆದ ಸುಮಾರು ೩೦ ವರ್ಷಗಳ ಹಿಂದಿನ ಪೈಪ್‌ಲೈನ್ ವ್ಯವಸ್ಥೆ ಇಂದಿಗೂ ಮುಂದುವರೆದಿರುವುದರಿಂದ, ಹೆಚ್ಚುತ್ತಿರುವ ಹೊಸ ಬಡಾವಣೆಗಳಿಂದ ಮತ್ತು ಹೊಸ ಬಡಾವಣೆಗಳಲ್ಲಿ ಸರಬರಾಜು ಲೈನುಗಳ ವಿಸ್ತರಣೆ ಇಲ್ಲದೇ ಇರುವುದರಿಂದ, ನೀರಿನ ಸಮಸ್ಯೆ ಪ್ರತಿ ಬೇಸಿಗೆಯಲ್ಲಿ ಉಲ್ಬಣಗೊಳ್ಳುವುದು.

ಪರಿಸ್ಥಿತಿಯನ್ನು ಸುಧಾರಿಸಲು ೧೯೯೨ರಲ್ಲಿ ಸರಬರಾಜು ವ್ಯವಸ್ಥೆಗೆ ೨೧ ಕೋಟಿ ರೂ.ಗಳ ಯೋಜನೆ ಒಂದನ್ನು ರೂಪಿಸಲಾಗಿತ್ತು. ಈ ಯೋಜನೆಯು ಇನ್ನೂ ಸಂಪೂರ್ಣ ಗೊಂಡಿರುವುದಿಲ್ಲ. ಮಹಾನಗರ ಪಾಲಿಕೆಯ ಸರಹದ್ದಿನಲ್ಲಿ ೧೯೯೦ರವರೆಗೆ ಇದ್ದ ಗ್ರಹಬಳಕೆ ನಳಗಳ ಸಂಖ್ಯೆ ೧೫,೧೫೮ ಆಗಿದ್ದರೆ, ಗ್ರಹೇತರ ಮತ್ತು ಸಾರ್ವಜನಿಕ ನಳಗಳ ಸಂಖ್ಯೆ ಕ್ರಮವಾಗಿ ೪೮೪ ಮತ್ತು ೫೯೨ ಎಂದು ತಿಳಿದು ಬರುವುದು. ನಗರದಲ್ಲಿರುವ ಖಾಸಗಿ ಕೊಳವೆ ಬಾವಿಗಳ ಸಂಖ್ಯೆ ಸುಮಾರು ೧೫೦೦ರಿಂದ ೨೦೦೦ ಎಂದು ತಿಳಿದು ಬರುವುದು.

### ನಗರ ನೈರ್ಮಲ್ಯ / ಒಳಚರಂಡಿ ಯೋಜನೆ

ಗುಲಬರ್ಗಾ ನಗರವನ್ನು ಹೊರತು ಪಡಿಸಿ ಜಿಲ್ಲೆಯ ಉಳಿದ ಯಾವುದೇ ನಗರಕ್ಕೆ ಒಳಚರಂಡಿ ವ್ಯವಸ್ಥೆಯನ್ನು ಒದಗಿಸಲಾಗಿಲ್ಲ. ಗುಲಬರ್ಗಾ ನಗರಕ್ಕೆ ಸೀಮಿತವಾದಂತೆ ಮೊದನೇ ಹಂತದ ಯೋಜನೆಯನ್ನು ೧೯೭೫-೭೬ರಲ್ಲಿ ಒಂದು ಕೋಟಿ ರೂ. ಯೋಜನೆಯೊಂದಿಗೆ ಜೀವ ವಿಮಾ ನಿಗಮದ ಸಹಾಯದೊಂದಿಗೆ ಪ್ರಾರಂಭಿಸಲಾಯಿತು. ಈ ಯೋಜನೆ ಅಡಿಯಲ್ಲಿ ನಗರದ ಗಾಜೀಪುರ, ಮುತ್ತಂಪುರ, ರೋಜಾ, ಮೋಮಿನ್‌ಪುರ, ಜಗತ್, ಅಸ್‌ಫ್‌ಗಂಜ್, ಸೂಪರ್ ಮಾರ್ಕೇಟ, ಬ್ರಹ್ಮಪುರ, ರೇಲ್ವೆ ನಿಲ್ದಾಣ, ಮುಂತಾದ ಪ್ರದೇಶಗಳಿಗೆ ಒಳಚರಂಡಿ ವ್ಯವಸ್ಥೆಯನ್ನು ಅಳವಡಿಸಲಾಯಿತು. ಎರಡನೇ ಹಂತದ ಯೋಜನೆಗೆ ೧೯೯೨ರಲ್ಲಿ ಸರ್ಕಾರದ ತಾಂತ್ರಿಕ ಒಪ್ಪಿಗೆ ದೊರೆತಿದ್ದು, ೨೦೧೧ಕ್ಕೆ ಬೆಳೆಯ ಬಹುದಾದ ಗುಲಬರ್ಗಾ ನಗರದ ಜನಸಂಖ್ಯೆ ಸುಮಾರು ೩.೫೦ ಲಕ್ಷವೆಂದು ಅಂದಾಜು ಮಾಡಿ ಯೋಜನೆಯನ್ನು ರೂಪಿಸಲಾಗಿದೆ. ೧೯೯೬-೯೭ರಲ್ಲಿ ಈ ಯೋಜನೆಯ ಪುನರ್ ನಿಗಧಿತ ಅಂದಾಜು ರೂ. ೧೩.೭೯ ಲಕ್ಷ. ಸದರಿ ಯೋಜನೆಗೆ ಜೀವ ವಿಮಾ ನಿಗಮ ಶೇ೫೦. ಮಹಾನಗರ ಪಾಲಿಕೆ ಶೇ. ೩೦ ಹಾಗೂ ಶೇ. ೨೦ ಸರ್ಕಾರದ ಸಾಲದ ರೂಪದಲ್ಲಿ ಹಣಕಾಸನ್ನು ಒದಗಿಸಲಾಗುವುದು.

ನಗರದ ನೈರ್ಮಲ್ಯ ಕಾಪಾಡಲು ಆರೋಗ್ಯ ಅಧಿಕಾರಿಗಳ ನಿಯಂತ್ರಣದಲ್ಲಿ ೨೦ ನೈರ್ಮಲ್ಯ ನಿರೀಕ್ಷಕರು, ಆರು ಚುಚ್ಚು ಮದ್ದುಗಾರರು, ೩೭೬ ಪೌರ ಕಾರ್ಮಿಕರು ಕಾರ್ಯ ನಿರ್ವಹಿಸುತ್ತಿರುವರು. ಜನನ ಮತ್ತು ಮರಣ ದಾಖಲಾತಿಗಳನ್ನು ಆರೋಗ್ಯ ಅದಿಕಾರಿಗಳು ನಿರ್ವಹಿಸುವರು.

೧೯೬೫ರಲ್ಲಿ ನಗರ ಸಭೆಯು ಒಂದು ಗ್ರಂಥಾಲಯವನ್ನು, ಒಂದು ಶಿಶುಕಲ್ಯಾಣ ಕೇಂದ್ರವನ್ನು, ವಿಶ್ರಾಂತಿ ಗೃಹವನ್ನು, ಮೂರೂ ಉದ್ಯಾನವನಗಳನ್ನು ನಿರ್ವಹಿಸುತ್ತಿತ್ತು. ಇಂದು ಮಹಾನಗರ ಪಾಲಿಕೆಯು ೧೮ ಉದ್ಯಾನವನಗಳನ್ನು ವಾರ್ಷಿಕ ಸುಮಾರು ಎರಡು ಲಕ್ಷ ರೂ. ವೆಚ್ಚದಲ್ಲಿ ನಿರ್ವಹಿಸುತ್ತಿದ್ದು, ಮೆಹಬೂಬ ಗುಲಷನ್ ಗಾರ್ಡನ್,ಅಂಬೇಡಕರ್ ಉದ್ಯಾನವನ, ಬಸವೇಶ್ವರ ಉದ್ಯಾನವನ ಮುಖ್ಯವಾದವುಗಳು. ಪುರಸಭೆಯು ಸುಮಾರು ೩೦ ಧರ್ಮ ಶಾಲೆಗಳನ್ನು ನಿರ್ವಹಿಸುತ್ತಿರುವುದು. ೧೯೬೫ರಲ್ಲಿ ನಗರಸಭೆಯು ಒಟ್ಟು ೫೬ ಕಿ. ಮೀ. ಉದ್ದದ ರಸ್ತೆಗಳನ್ನು ತನ್ನ ಹದ್ದಿನಲ್ಲಿ ನಿರ್ವಹಿಸುತ್ತಿತ್ತು. ಇಂದು ನಿರ್ವಹಿ ಸುತ್ತಿರುವ ಒಟ್ಟು ರಸ್ತೆಗಳ ಉದ್ದ ೪೩೫ ಕಿ. ಮೀ. ಆ ಪೈಕಿ ೧೫೫ ಕಿ. ಮೀ. ಡಾಂಬರ್ ರಸ್ತೆ, ೧೯೪ ಕಿ. ಮೀ. ಉದ್ದದ ಮಣ್ಣಿನ ರಸ್ತೆ ಇರುವುದು.

ಕೊಳಚೆ ಪ್ರದೇಶಗಳ ನಿರ್ಮೂಲನಾ ಅಂಗವಾಗಿ ೧೯೫೯ರಷ್ಟು ಹಿಂದೆಯೇ ಗಾಜೀಪುರ ಪ್ರದೇಶವನ್ನು ರೂ. ೧.೧೫ಲಕ್ಷದಲ್ಲಿ ನಿರ್ಮಲೀಕರಣಗೊಳಿಸಲಾಯಿತು. ಇಂದು ನಗರ ಪರಿಮಿತಿಯಲ್ಲಿ ೧೯ ಕೊಳಚೆ ಪ್ರದೇಶಗಳನ್ನು ಗುರುತಿಸಲಾಗಿದೆ.

ಗುಲಬರ್ಗಾ ನಗರಕ್ಕೆ ಪ್ರಪ್ರಥಮವಾಗಿ ವಿದ್ಯುತ್ತನ್ನು ೧೮೮೪ರಿಂದ ೧೯೪೮ರವರೆಗೆ ಎಂ.ಎಸ್.ಕೆ. ಮಿಲ್ ಅವರಿಂದ, ೧೯೪೮ರಿಂದ ೧೯೫೫ರವರೆಗೆ ನಿಜಾಮ ಎಲೆಕ್ಟ್ರಿಸಿಟಿ ಬೋರ್ಡಿನಿಂದ, ೧೯೫೫ರಿಂದ ೧೯೬೨ರವರೆಗೆ ಎಮ್.ಎಸ್.ಇ.ಬಿ. ಜನರೇಟರ್ (ಡಿಜಲ್) ನಿಂದ ಒದಗಿಸಲಾಗುತ್ತಿತ್ತು. ೧೯೬೨ರಿಂದ ಕೆ.ಇ.ಬಿ. ಒದಗಿಸುತ್ತಿರುವುದು. ೧೯೬೪-೬೫ರಲ್ಲಿ ನಗರದಲ್ಲಿದ್ದ ಬೀದಿ ದೀಪಗಳ ಸಂಖ್ಯೆ ೧೧೧೫ ಆಗಿತ್ತು. ೧೯೫೫ರಲ್ಲಿ ನಗರದಲ್ಲಿ ವಿವಿಧ ದೀಪಗಳ ಅಳವಡಿಕೆ ವಿವರ ಈ ರೀತಿ ಇತ್ತು : ಸಾಮಾನ್ಯಗ್ರಹಬಳಕೆ ೨೬,೨೪೩ (ಎಲ್‌ಟಿ೧), ೧೨,೨೧೩, ಸರ್ವವಿದ್ಯುತ್ ಗೃಹಗಳು (ಎಲ್.ಟಿ.೨), ಬೀದಿ ದೀಪಗಳು ೯,೦೪೨, ವಾಣಿಜ್ಯ ಅಳವಡಿಕೆಗಳು ೯,೧೭೩ ಮತ್ತು ಕೈಗಾರಿಕಾ ಅಳವಡಿಕೆಗಳು ೧,೭೩೮.

## ಅಭಿವೃದ್ಧಿ ಯೋಜನೆಗಳು

ನಗರವನ್ನು ಸುಂದರಗೊಳಿಸುವುದಲ್ಲದೆ ನಾಗರೀಕರಿಗೆ ಆಧುನಿಕ ಜೀವನಕ್ಕೆ ಬೇಕಾಗುವ ಸೌಲಭ್ಯಗಳನ್ನು ಒದಗಿಸುವ ಉದ್ದೇಶದಿಂದ ನಗರ ಸಭೆಯು ೧೯೬೪-೬೫ರಲ್ಲಿ ಒಂದು ಸಮಗ್ರ ಸರ್ವಾಂಗೀಣ ಅಭಿವೃದ್ಧಿ ಯೋಜನೆಯನ್ನು ರೂಪಿಸಿ ಅದನ್ನು ಮೂರು ವರ್ಷಗಳಲ್ಲಿ ಪೂರೈಸಲಾಯಿತು. ಈ ಯೋಜನೆಯು ನಗರಾಭಿವೃದ್ಧಿಯಲ್ಲಿ ಒಂದು ಮೈಲುಗಲ್ಲಾಯಿತು. ಈ ಯೋಜನೆಯ ಅಂದಾಜು ವೆಚ್ಚ ರೂ. ೧೧೦ ಲಕ್ಷ ಆಗಿತ್ತು. ನಗರ ಸೌಂದರ್ಯಕರಣ ಯೋಜನೆಯಲ್ಲಿ ಜಗತ್ ಕೆರೆಯನ್ನು ಬತ್ತಿಸುವುದು, ಹೊಸ ಕೇಂದ್ರ ಬಸ್ ನಿಲ್ದಾಣದ ನಿರ್ಮಾಣ, ಸ್ಟೇಡಿಯಂ ನಿರ್ಮಾಣ ಮುಂತಾದವುಗಳು ಒಳಗೊಂಡಿದ್ದವು. ಬೆಳೆಯುತ್ತಿರುವ ವಸತಿಯ ಸಮಸ್ಯೆಯನ್ನು ನಿವಾರಿಸಲು ಸೇಡಂ ರಸ್ತೆ ಗುಂಟ ಪುರಸಭೆಯು ಸುಮಾರು ೩೦೦ ಎಕರೆ ಪ್ರದೇಶವನ್ನು ಸ್ವಾಧೀನ ಪಡಿಸಿಕೊಂಡು ಸುಮಾರು ೪೦೦ ಮನೆಗಳನ್ನು ೧೯೬೯ರ ಒಳಗಾಗಿ ಕಟ್ಟಿ ಪೂರೈಸುವ ಯೋಜನೆಯನ್ನು ಹಾಕಿಕೊಳ್ಳಲಾಗಿತ್ತು. ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರ ವಿವಿಧ ಅಭಿವೃದ್ಧಿ ಕಾರ್ಯಗಳಿಗೆ ಕಾಯ್ದಿಟ್ಟ ಶೇಕಡ ೧೮ರ ನಿಧಿಯಿಂದ ಮಹಾನಗರ ಪಾಲಿಕೆಯು ೧೯೯೧-೯೨ರಲ್ಲೂ ರೂ. ೨೧.೬೫ಲಕ್ಷದ ಪೈಕಿ ರೂ. ೧೨.೬೮ ಲಕ್ಷ ಖರ್ಚು ಮಾಡಿದ್ದರೆ, ೧೯೯೩-೯೪ರಲ್ಲಿ ರೂ. ೧೬.೭೦ ಲಕ್ಷದ ಪೈಕಿ ರೂ. ೧೭.೩೫ ಖರ್ಚು ಮಾಡಲಾಗಿತ್ತು. ೧೯೯೫-೯೬ರಲ್ಲಿ ರೂ. ೧೭. ಲಕ್ಷದ ಪೈಕಿ ಖರ್ಚು ಮಾಡಿದ ಹಣ ರೂ. ೧೮.೧೮ ಲಕ್ಷ ಎಂದು ವರದಿಯಾಗಿದೆ. ಈ ಹಣವನ್ನು ಪ್ರಮುಖವಾಗಿ ಸಮುದಾಯ ಭವನಗಳ ನಿರ್ಮಾಣ ಮತ್ತು ಭಾಗ್ಯಜ್ಯೋತಿ ಯೋಜನೆಗೆ ಖರ್ಚು ಮಾಡಲಾಗಿತ್ತು.

## ಹಣಕಾಸು ಮತ್ತು ಆಸ್ತಿಗಳು :

ಆಕ್ಟ್ರಾಯ ರದ್ದಾಗುವ ಮೂರು ವರ್ಷ ಪೂರ್ವದಲ್ಲಿ ಪುರಸಭೆಗೆ ಸಂದಾಯವಾದ ಆಕ್ಟ್ರಾಯ ೧೯೭೬-೭೭ರಲ್ಲಿ ರೂ. ೨೧.೨೯ ಲಕ್ಷ ಆಗಿದ್ದರೆ, ಅದರ ಮುಂದಿನ ವರ್ಷ ರೂ. ೨೪.೧೨ ಲಕ್ಷ, ೧೯೭೮-೭೯ರಲ್ಲಿ ರೂ. ೨೬.೨೯ ಲಕ್ಷ ಆಗಿತ್ತು ಆಕ್ಟ್ರಾಯ ಅನುದಾನ ೧೯೯೪-೯೫, ೯೫-೯೬ ಮತ್ತು ೧೯೯೬-೯೭ರಲ್ಲಿ ಕ್ರಮವಾಗಿ ರೂ. ೧೨೮.೪೮ ಲಕ್ಷ, ರೂ. ೧೫೫೧.೦೦

ಲಕ್ಷ ಮತ್ತು ರೂ. ೨೩೧.೪೬ ಲಕ್ಷ ಎಂದು ವರದಿಯಾಗಿದೆ. ವಾಹನ ತೆರಿಗೆ ರೂಪದಲ್ಲೂ ೧೯೯೪-೯೫, ೯೫-೯೬ ಮತ್ತು ೧೯೯೬-೯೭ರಲ್ಲಿ ಸಂದಾಯವಾದ ಅನುದಾನ ಕ್ರಮವಾಗಿ ರೂ. ೧೭.೧೦ ಲಕ್ಷ, ೧೭.೧೦ ಲಕ್ಷ ಮತ್ತು ರೂ. ೨೦.೩೦ ಲಕ್ಷ ಆಗಿದ್ದರೆ, ಮನರಂಜನೆ ತೆರಿಗೆ ರೂಪದಲ್ಲೂ ಮೇಲಿನ ವರ್ಷಗಳಲ್ಲಿ ಕ್ರಮವಾಗಿ ಸಂದಾಯವಾದ ಹಣ ರೂ. ೩೭.೫೮ ಲಕ್ಷ, ೩೧.೪೪ ಲಕ್ಷ ಮತ್ತು ರೂ. ೨೯.೨೧ ಲಕ್ಷ ಆಗಿತ್ತು. ಸ್ಟಾಂಪ್ ಶುಲ್ಕ ರೂಪದಲ್ಲಿ ೧೯೯೬-೯೭ರಲ್ಲಿ ನಗರಪಾಲಿಕೆಗೆ ರೂ. ೨೮.೧೦ ಲಕ್ಷ ಸಂದಾಯವಾಗಿದ್ದರೆ, ೯೫-೯೬ರಲ್ಲಿ ರೂ. ೨೪.೯೫ ಲಕ್ಷ ರೂ. ಮತ್ತು ಅದರ ಹಿಂದಿನ ವರ್ಷ ರೂ. ೧೭.೧೫ ಲಕ್ಷ ಸಂದಾಯವಾಗಿತ್ತು.

ನಗರ ಪಾಲಿಕೆಯು ವಿವಿಧ ಆದಾಯ ಮೂಲದ (ಸ್ಥಿರಾಸ್ತಿ)ಗಳನ್ನು ಹೊಂದಿದೆ. ಆ ಪೈಕಿ ಮಾರುಕಟ್ಟೆ ಸಂಕೀರ್ಣಗಳು ಆರು, ಅಂಗಡಿಗಳು ೩೭೫, ಸಿಬ್ಬಂದಿ ವಾಸದ ಮನೆಗಳು ಆರು ಮತ್ತು ೨೯ ಇತರೇ ಕಟ್ಟಡಗಳನ್ನು ಹೊಂದಿರುವುದು. ಮಾರುಕಟ್ಟೆ ಸಂಕೀರ್ಣ ಮತ್ತು ವ್ಯಾಪರ ಮಳಿಗೆಗಳಿಂದ ವಾರ್ಷಿಕ ಸುಮಾರು ರೂ. ೧೬.೫೦ ಲಕ್ಷ ನಗರ ಸಭೆಗೆ ಆದಾಯ ಬರುವುದು ಎಂದು ವರದಿಯಾಗಿದೆ.

ಇತ್ತೀಚಿನ ವರ್ಷಗಳಲ್ಲಿ ಮಹಾನಗರಪಾಲಿಕೆಯ ಆದಾಯ ಬೆಳೆದಂತ ಖರ್ಚು ಹೆಚ್ಚುತ್ತಿರುವುದು. ಈ ಹಿಂದೆ ನಗರಸಭೆ ಇದ್ದಾಗ ೧೯೬೧-೬೨ರಿಂದ ೧೯೬೪-೬೫ರವರೆಗೆ ನಗರಸಭೆಯ ಕೆಲವು ವರ್ಷಗಳ ಆದಾಯ ವೆಚ್ಚಗಳ ವಿವರ ಮತ್ತು ಮಹಾನಗರ ಪಾಲಿಕೆ ಆದ ನಂತರ ೧೯೮೫-೮೬ ರಿಂದ ೧೯೯೫-೯೬ರವರೆಗಿನ ಕೆಲವು ವರ್ಷಗಳ ವಿವರಗಳು ಈ ಮುಂದಿನಂತೆ ಇರುವುದು (ಮೊತ್ತ ಲಕ್ಷ ರೂ.ಗಳಲ್ಲಿ)

| ವರ್ಷ | ಆದಾಯ | ಖರ್ಚು |
|---|---|---|
| ೧೯೬೧-೬೨ | ೧೦.೧೨ | ೧೧.೨೯ |
| ೧೯೬೨-೬೩ | ೧೨.೧೪ | ೧೧.೮೦ |
| ೧೯೬೩-೬೪ | ೧೩.೮೮ | ೧೨.೪೫ |
| ೧೯೬೪-೬೫ | ೧೬.೨೬ | ೧೩.೨೪ |
| ೧೯೮೫-೮೬ | ೧೪೪.೯೮ | ೧೩೬.೯೯ |
| ೧೯೮೭-೮೮ | ೧೯೧.೫೩ | ೧೮೨.೮೮ |
| ೧೯೮೯-೯೦ | ೨೩೫.೯೪ | ೨೧೭.೭೧ |
| ೧೯೯೧-೯೨ | ೪೦೪.೫೪ | ೪೨೯.೪೭ |
| ೧೯೯೩-೯೪ | ೪೪೮.೫೪ | ೪೬೦.೧೮ |
| ೧೯೯೪-೯೫ | ೪೬೬.೮೯ | ೪೧೮.೬೦ |
| ೧೯೯೫-೯೬ | ೭೬೭.೬೧ | ೭೬೪.೯೪ |

ನಗರಪಾಲಿಕೆಯ ಒಟ್ಟು ಸಿಬ್ಬಂದಿ ಸಂಖ್ಯೆ ಅಧಿಕಾರಿಗಳನ್ನು ಒಳಗೊಂಡಂತೆ ೫೮೯, ೧೯೯೬-೯೭ನೇ ಸಾಲಿನಲ್ಲಿ ಆದ ಸಿಬ್ಬಂದಿ ವೆಚ್ಚ ರೂ. ೨೬೫.೫೭ ಲಕ್ಷ ಆಗಿದ್ದರೆ ಅದರ ಹಿಂದಿನ ವರ್ಷ ರೂ. ೨೩೪.೯೩ ಲಕ್ಷ ಆಗಿತ್ತು. ಮಹಾನಗರ ಪಾಲಿಕೆಯ ಕಟ್ಟಡವನ್ನು ೧೯೬೮ರಲ್ಲಿ ರೂ. ೩.೮೦ ಲಕ್ಷ ವೆಚ್ಚದಿಂದ ಕಟ್ಟಲಾಯಿತು.

## ಪುರಸಭೆ, ಯಾದಗಿರಿ

ಯಾದಗಿರಿ ನಗರವು ೧೯೫೦ರ ಪೂರ್ವದಲ್ಲಿ ಜಹಗೀರ ಆಡಳಿತ ಪಟ್ಟಣವಾಗಿತ್ತು. ದುಅಮ್ ತಾಲೂಕುದಾರರ ನಿಯಂತ್ರಣದಲ್ಲಿ ಟೌನ್ ಕಮಿಟಿ ಎಂಬ ಸ್ಥಳೀಯ ಮಂಡಳಿಯು ನಗರಾಡಳಿತವನ್ನು ನಿರ್ವಹಿಸುತ್ತಿತ್ತು. ಇದು ಕೇವಲ ನಾಮಕರಣಗೊಂಡ ಸಮಿತಿಯಾಗಿತ್ತು. ೧೯೫೦ರಲ್ಲಿ ಜಹಗೀರು ಹೈದರಾಬಾದ್ ರಾಜ್ಯದಲ್ಲಿ ಸೇರ್ಪಡೆಯಾದ ನಂತರ

ತಹಸೀಲದಾರರ ನಿಯಂತ್ರಣದಲ್ಲಿ ಅಂದಿನ ಹೈದಾರಬಾದ್ ಮುನಸಿಪಲ್ ಮತ್ತು ಟೌನ್ ಕಮಿಟಿಯ ಕಾನೂನು ೧೯೫೧ರ ಅನ್ವಯ ಟೌನ್ ಕಮಿಟಿಯನ್ನು ಉನ್ನತಿಕರಿಸಿ ಸಿಟಿ ಮುನಸಿಪಾಲಿಟಿ (ನಗರ ಸಭೆ) ಎಂದು ಕರೆಯಲಾಯಿತು. ಪ್ರಥಮ ಬಾರಿಗೆ ನಗರ ಸಭೆಗೆ ಚುಣಾವಣೆಗಳು ೧೯೫೨ರಲ್ಲಿ ನಡೆದವು.

ರಾಜ್ಯ ಪುನರ್ ರಚನೆಯ ನಂತರ, ೧೯೬೪ರ ಮುನಸಿಪಲ್ ಕಾನೂನಿನ ಪ್ರಕಾರ ಯಾದಗಿರಿ ನಗರ ಸಭೆಯನ್ನು ಪುರಸಭೆ (ಟೌನ್ ಮುನಸಿಪಾಲಿಟಿ) ಎಂದು ಪುನರ್ ರಚಿಸಲಾಯಿತು. ಪುರಸಭೆಯ ಸದಸ್ಯರ ಸಂಖ್ಯೆ ೧೯೬೫ರಲ್ಲಿ ೧೭ ಆಗಿತ್ತು. ಆ ಪೈಕಿ ಒಂದು ಸ್ಥಾನವನ್ನು ಪರಿಶಿಷ್ಟ ಜಾತಿ ಅವರಿಗೆ ಕಾಯ್ದಿರಿಸಲಾಗಿತ್ತು.

ಇತ್ತೀಚೆಗೆ ಪುರಸಭೆಗೆ ಚುಣಾವಣೆಗಳು ೧೯೯೬ರಲ್ಲಿ ನಡೆದು ಸದ್ಯದ ಪುರಸಭೆಯು ನಾಲ್ಕು ಮೀಸಲು ಸ್ಥಾನಗಳು ಸೇರಿದಂತೆ ೨೭ ಜನ ಸದಸ್ಯರನ್ನು ಮತ್ತು ಅಷ್ಟೇ ಸಂಖ್ಯೆಯ ವಾರ್ಡುಗಳನ್ನು ಹೊಂದಿರುವುದು. ೨೭ ಸದಸ್ಯರ ಪೈಕಿ, ೧೩ ಜನ ಸಾಮಾನ್ಯ ಅಭ್ಯರ್ಥಿಗಳು, ೯ ಜನ ಹಿಂದುಳಿದವರು, ಪ. ಜಾ. ೪ ಮತ್ತು ಪ. ಪಂ.ದ ಒಬ್ಬರು ಅಭ್ಯರ್ಥಿಗಳು ಇರುವವರು. ಒಟ್ಟು ಸದಸ್ಯರ ಪೈಕಿ ಮಹಿಳೆಯರ ಸಂಖ್ಯೆ ೧೨. ಪುರಸಭೆಯ ಇಂದಿನ ವಿಸ್ತೀರ್ಣ ೧೭.೫ ಚ. ಕಿ. ಮೀ. ಆಗಿದ್ದು ೧೯೯೧ರಲ್ಲಿ ನಗರದ ಜನಸಂಖ್ಯೆ ೪೩,೬೬೬ ಆಗಿತ್ತು. ಪುರಸಭೆಯ ವ್ಯಾಪ್ತಿಯಲ್ಲಿ ಬರುವ ಮನೆಗಳ ಸಂಖ್ಯೆ ೭೦೩೨. ಇತ್ತೀಚೆಗೆ ನಗರವು ಯೋಜನಾ ಬದ್ಧವಾಗಿ ಬೆಳೆಯುತ್ತಿದ್ದು ನಗರ ಯೋಜನೆಯನ್ನು ೧೯೭೧ರಿಂದ ಜಾರಿಗೊಳಿಸಲಾಗಿದೆ. ನಗರದಲ್ಲಿ ಇತ್ತೀಚೆಗೆ ಆರು ಹೊಸ ಬಡಾವಣೆಗಳು ರಚನೆಗೊಂಡಿದ್ದು ಅಲ್ಲಿ ಒಂದು ಸಾವಿರ ಮನೆಗಳು ಇರುವವೆಂದು (ಜನಸಂಖ್ಯೆ ೧೦,೦೦೦) ಮತ್ತು ಬಡವಾಣೆಗಳ ಅಭಿವೃದ್ಧಿಗಾಗಿ ಪುರಸಭೆಯು ಇದುವರೆಗೆ ಸುಮಾರು ಐದು ಲಕ್ಷ ರೂ. ಖರ್ಚು ಮಾಡಿರುವುದು.

## ನೀರು ಪೂರೈಕೆ ಯೋಜನೆ

ಮೊದಲಿಗೆ ಬಾವಿಗಳು ಕುಡಿಯುವ ನೀರನ್ನು ಒದಗಿಸುವ ಜಲ ಮೂಲವಾಗಿದ್ದವು. ಹತ್ತಿಕುಣಿನಾಲಾ (ನಗರದಿಂದ ಅರ್ಧ ಕಿಮಿ ದೂರ) ಯೋಜನೆಯನ್ನು ಪ್ರಾರಂಭಿಸುವ ಮೂಲಕ ನಳಗಳಿಂದ ಸುರಕ್ಷಿತ ನೀರನ್ನು ಒದಗಿಸಲಾಗುತ್ತಿದೆ. ಇತ್ತೀಚೆಗೆ ಭೀಮಾ ನದಿಯ ಯೋಜನೆಯನ್ನು ರೂಪಿಸಲಾಗಿದೆ. ೧೯೬೫ರಲ್ಲಿ ನಗರ ಮಿತಿಯಲ್ಲಿ ೯೧ ಖಾಸಗಿ ನಳಗಳು, ೮೮ ಸಾರ್ವಜನಿಕ ನಳಗಳು ಇದ್ದವು. ೧೯೯೬ರಲ್ಲಿ ನಗರದಲ್ಲಿರುವ ಖಾಸಗಿ ನಳಗಳ ಸಂಖ್ಯೆ ೩,೫೦೦ ಆಗಿದ್ದರೆ ಪ್ರತಿನಿತ್ಯ ಸರಾಸರಿ ತಲಾ ೨೦ ಗ್ಯಾಲನ ನೀರು ಸರಬರಾಜು ಮಾಡಲಾಗುವುದು. ಪುರಸಭೆಯು ಪ್ರತಿ ವರ್ಷ ರೂ. ೩ ಲಕ್ಷದಷ್ಟು ಹಣವನ್ನು ಕುಡಿಯುವ ನೀರಿನ ಸಲುವಾಗಿ ಖರ್ಚು ಮಾಡುವುದು. ನಗರದ ನಿರ್ಮಲತೆಯನ್ನು ಕಾಯ್ದುಕೊಳ್ಳಲು ಪೌರಕಾರ್ಮಿಕರನ್ನು ಒಳಗೊಂಡಂತೆ ೮೧ ಜನ ಸಿಬ್ಬಂದಿ ಇರುವವರು.

## ಪುರಸಭೆ, ಸೇಡಂ

ಸೇಡಂ ನಗರಕ್ಕೆ ಪ್ರಪ್ರಥಮವಾಗಿ ೧೯೫೩ರಲ್ಲಿ ಪುರಸಭೆಯನ್ನು ರಚಿಸಲಾಯಿತು. ಅದಕ್ಕೂ ಪೂರ್ವದಲ್ಲಿ 'ಟೌನ್ ಕಮೀಟಿ'ಯು ಸ್ಥಳೀಯ ತಹಸೀಲ್ದಾರರ ಆಡಳಿತದಲ್ಲಿ ಕಾರ್ಯ ನಿರ್ವಹಿಸುತ್ತಿತ್ತು. ಪುರಸಭೆಯ ರಚನೆಯಿಂದ ಟೌನಕಮಿಟಿಯನ್ನು ಉನ್ನತಿಕರಿಸಿದಂತಾಯಿತು. ೧೯೬೧ರಲ್ಲಿ ಪುರಸಭಾ ಸಮಿತಿಯನ್ನು ಹೈದರಾಬಾದ್ ಜಿಲ್ಲಾ ಮುನಿಸಿಪಾಲಿಟಿಗಳ ಅಧಿನಿಯಮ ೧೯೫೬ರ ಅನ್ವಯ ಪುನರ್‌ಚಿಸಲಾಯಿತು. ೧೯೬೧ರ ಸಮಿತಿಯು ಹದಿನೈದು ಜನ ಚುನಾಯಿತ ಪ್ರತಿನಿಧಿಗಳನ್ನು ಒಳಗೊಂಡಿತ್ತು. ಚುನಾಯಿತ ಪ್ರತಿಧಿಗಳ ಪೈಕಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರಿಗೆ ಎರಡು ಸ್ಥಾನಗಳು ಮೀಸಲಾಗಿದ್ದವು.

ಕರ್ನಾಟಕ ಮುನಿಸಿಪಾಲಿಟಿಗಳ ಅದಿನಿಯಮ ೧೯೬೪ರ ಅನ್ವಯ ಇತ್ತೀಚೆಗೆ ಚುನಾವಣೆಗಳು ೧೯೯೬ರ ಜನವರಿಯಲ್ಲಿ ನಡೆದು ಪುರಸಭೆಯನ್ನು ೨೩ ಸದಸ್ಯರನ್ನು ಒಳಗೊಂಡಂತೆ ಪುನರ್ ರಚಿಸಲಾಯಿತು. ಆ ಪೈಕಿ ಐದು ಸ್ಥಾನಗಳನ್ನು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದವರಿಗೆ, ಒಂಬತ್ತು ಸ್ಥಾನಗಳನ್ನು ಮಹಿಳೆಯರಿಗೆ ಮೀಸಲಿಡಲಾಗಿತ್ತು. ಪುರಸಭೆಯ ಕಾರ್ಯ ವ್ಯಾಪ್ತಿ ೧೯೯೧ರವರೆಗೆ ೩.೫ ಚ. ಕಿ. ಮೀ. ಇದ್ದು ೧೯೯೫ರಲ್ಲಿ ಇದು ೫.೫ ಚ. ಕಿ.ಮಿ.ಗೆ ವಿಸ್ತರಿಸಲಾಯಿತು. ೧೯೯೧ರಲ್ಲಿ ಸೇಡಂ ನಗರದ ಜನಸಂಖ್ಯೆ ೨೩,೨೭೦ ಆಗಿತ್ತು. ೧೯೮೧ರಲ್ಲಿ ನಗರ ಪರಿಮಿತಿಯಲ್ಲಿ ೪,೨೪೯ ಮನೆಗಳಿದ್ದು ೧೯೯೫ರಲ್ಲಿದ್ದ ಮನೆಗಳ ಸಂಖ್ಯೆ ೪೪೮೧ ಆಗಿತ್ತು. ಉಪ ವಿಭಾಗೀಯ ಕೇಂದ್ರವಾಗಿರುವ (೧೯೬೭) ಸೇಡಂ ನಗರವು

ಇತ್ತೀಚಿನ ದಶಕಗಳಲ್ಲಿ ತೀವ್ರಗತಿಯಿಂದ ಬೆಳೆಯುತ್ತಿದ್ದು ಅನೇಕ ಬಡಾವಣೆಗಳನ್ನು ಹೊಂದಿದ್ದು ಅವುಗಳಲ್ಲಿ ವಿದ್ಯಾನಗರ, ಕೆ.ಇ.ಬಿ ಕಾಲೋನಿ, ಒವರ್ ಬ್ರಿಡ್ಜ್ ಮುಂತಾದವುಗಳು ೧೯೮೪-೮೫ರಿಂದ ರಚನೆಗೊಂಡಿರುವವು.

ನಗರಕ್ಕೆ ೧೯೬೨ರಿಂದಲೂ ಕಮಲಾವತಿ ನದಿಯಿಂದ ಸುರಕ್ಷಿತ ಕುಡಿಯುವ ನೀರನ್ನು ಒದಗಿಸಲಾಗುತ್ತಿದೆ. ಈ ಯೋಜನೆಯನ್ನು ೧೯೫೮ರಲ್ಲಿ ಪ್ರಾರಂಭಿಸಿ ೧೯೬೨ರಲ್ಲಿ ಪೂರ್ಣಗೊಳಿಸಲಾಯಿತು. ಈ ಯೋಜನಾ ವೆಚ್ಚ ರೂ. ೧.೭೪ ಲಕ್ಷ. ಹೆಚ್ಚುತ್ತಿರುವ ನೀರಿನ ಬೇಡಿಕೆಯನ್ನು ಪೂರೈಸಲು ಸಹಾಯಕವಾಗುವಂತೆ ಕರ್ನಾಟಕ ನಗರ ನೀರು ಪೂರೈಕೆ ಮಂಡಳಿಯು ಸುಧಾರಿತ ಕುಡಿಯುವ ನೀರಿನ ಯೋಜನೆಯನ್ನು ೧೯೯೫ರಲ್ಲಿ ಕೈಗೊಂಡಿದ್ದು ಯೋಜನೆ ಪೂರ್ಣಗೊಂಡಿದೆ. ನೀರಿನ ಮೂಲವು ಕಾಗಿನಾ ನದಿಯಾಗಿದ್ದು ಸತ್ತತನ ಹಳ್ಳಿಯಲ್ಲಿ ಹೆಚ್ಚುವರಿಯಾಗಿ ಬಾವಿಗಳನ್ನು ತೋಡಲಾಗಿದೆ. ಈ ಹೊಸ ಯೋಜನೆಯು ಒಟ್ಟು ೩.೫ ಲಕ್ಷ ಗ್ಯಾಲನ್‌ಗಳ ಮೂರು ಜಲಾಗಾರಗಳನ್ನೊಳಗೊಂಡಿರುವುದು. ೧೯೯೭ರ ಮಾರ್ಚ್‌ವರೆಗೆ ಈ ಯೋಜನೆಗೆ ಆದ ವೆಚ್ಚ ೧೭೯.೬೯ ಲಕ್ಷ ರೂ. ಪ್ರಾಯೋಗಿಕವಾಗಿ ೧೯೯೬ರಿಂದ ಸಾರ್ವಜನಿಕರಿಗೆ ನೀರನ್ನು ಒದಗಿಸಲಾಗುತ್ತಿದೆ ಎಂದು ವರದಿಯಾಗಿದೆ. ಪ್ರತಿದಿನ ಸರಾಸರಿ ತಲಾ ೪೫ ಲೀಟರ್ ನೀರನ್ನು ಒದಗಿಸಲಾಗುತ್ತಿದೆ. ೧೯೬೫-೬೬ರಲ್ಲಿ ನಗರಮಿತಿಯಲ್ಲಿ ೨೯೬ ಖಾಸಗಿ ನಳಗಳು ಮತ್ತು ಹತ್ತು ಸಾರ್ವಜನಿಕ ನಳಗಳಿದ್ದವು. ೧೯೯೫ರಲ್ಲಿ ನಗರದಲ್ಲಿದ್ದ ಖಾಸಗಿ ಮತ್ತು ಸಾರ್ವಜನಿಕ ನಳಗಳ ಸಂಖ್ಯೆ ಕ್ರಮವಾಗಿ ೧,೧೦೧ ಮತ್ತು ೬೩ ಆಗಿತ್ತು. ಪ್ರತಿವರ್ಷ ಪುರಸಭೆಗೆ ನೀರಿನ ತೆರಿಗೆ ರೂಪದಲ್ಲಿ ರೂ. ೧.೩೦ ಲಕ್ಷ ಆದಾಯವಿದೆ. ನಗರಕ್ಕೆ ೧೯೬೪ ಆಗಸ್ಟ್‌ನಿಂದ ವಿದ್ಯುತ್ತನ್ನು ಒದಗಿಸಲಾಗಿದೆ. ಈಗಿರುವ ಬೀದಿ ದೀಪಗಳ ಅಳವಡಿಕೆಗಳ ಸಂಖ್ಯೆ ೫೦೫. ಬೆಳೆಯುತ್ತಿರುವ ನಗರದಲ್ಲಿ ಹಲವಾರು ಕೊಳಚೆ ಪ್ರದೇಶಗಳೂ ಉಂಟು. ಅವುಗಳಲ್ಲಿ ಇಂದಿರಾ ನಗರ, ಬಸವ ನಗರ, ಲೋಹಾರಗಲ್ಲಿ, ಚೋಟಿಗಿರಣಿ ಪ್ರದೇಶಗಳು ಮುಖ್ಯವಾಗಿವೆ. ನಗರದಲ್ಲಿರುವ ಒಟ್ಟು ಎಲ್ಲ ಬಗೆಯ ರಸ್ತೆಗಳ ಉದ್ದ ಸುಮಾರು ಆರು. ಕಿ. ಮೀ.ಗಳು. ನಗರದ ನೈರ್ಮಲ್ಯವನ್ನು ಕಾಪಾಡಲು ೨೨ ಪೌರಕಾರ್ಮಿಕರು, ನೈರ್ಮಲ್ಯ ನಿರೀಕ್ಷಕರ ಅಧೀನದಲ್ಲಿ ಕೆಸಲ ಮಾಡುತ್ತಿರುವರು.

**ಹಣಕಾಸು**

೧೯೬೧-೬೨ರಿಂದ ೧೯೬೪-೬೫ರ ಅವಧಿಯಲ್ಲಿ ಸರ್ಕಾರವು ಒಟ್ಟು ೨೦,೦೦೦ ರೂ.ಗಳನ್ನು ಅಭಿವೃದ್ಧಿ ವೆಚ್ಚವಾಗಿ ಪುರಸಭೆಗೆ ನೀಡಿತ್ತು. ಅಷ್ಟೇ ಮೊತ್ತದ ಹಣವನ್ನು ಪುರಸಭೆಯೂ ಖರ್ಚು ಮಾಡಿತ್ತು. ೧೯೬೫ರ ಸುಮಾರಿಗೆ ಪುರಸಭೆಯು ತನ್ನ ಆದಾಯವನ್ನು ಹೆಚ್ಚಿಸಿಕೊಳ್ಳಲು ಸಹಾಯವಾಗುವಂತೆ ಜಕಾತಿಯನ್ನು ಪ್ರಾರಂಭಮಾಡಿದ್ದಾಗಿ ತಿಳಿದುಬರುವುದು. ಆಕ್ಟ್ರಾಯ (ಜಕಾತಿ) ರದ್ದಾಗುವ ಮೂರು ವರ್ಷ ಪೂರ್ವದಲ್ಲಿ ಪುರಸಭೆಗೆ, ಆ ಮೂಲದಿಂದ ಸುಮಾರು ರೂ. ೧.೧೦ ಲಕ್ಷ ಸಂದಾಯವಾಗುತ್ತಿದ್ದರೆ, ಇತ್ತೀಚಿನ ಮೂರು ವರ್ಷಗಳಲ್ಲಿ ೯೩-೯೪, ೯೪-೯೫, ೯೫-೯೬ರಲ್ಲಿ ಪಡೆದ ಆಕ್ಟ್ರಾಯ್ ಅನುದಾನ ಮತ್ತು ಇತರೆ ಅನುದಾನ ಸೇರಿ ಕ್ರಮವಾಗಿ ರೂ. ೨.೩೦ ಲಕ್ಷ, ರೂ. ೩.೩೦ ಲಕ್ಷ ಮತ್ತು ರೂ. ೪.೫೦ ಲಕ್ಷ ಆಗಿತ್ತು. ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರ ವಿವಿಧ ಅಭಿವೃದ್ಧಿ ಯೋಜನೆಗಳಿಗೆ ಪುರಸಭೆಯು ತನ್ನ ಆದಾಯದ ಶೇ. ೧೮ ರ ಮೀಸಲಾತಿಯನ್ವಯ ೧೯೯೨-೯೩, ೯೩-೯೪ ಮತ್ತು ೯೪-೯೫ರಲ್ಲಿ ವೆಚ್ಚ ಮಾಡಿದ ಹಣ ಕ್ರಮವಾಗಿ ರೂ. ೩೦,೦೦೦, ರೂ. ೩೫,೦೦೦ ಹಾಗೂ ರೂ. ೩೫,೦೦೦ ಆಗಿತ್ತು. ಈ ಹಣವನ್ನು ಭಾಗ್ಯಜ್ಯೋತಿ ಯೋಜನೆ, ಬಣ್ಣದ ಟಿ. ವಿ. ಖರೀದಿ ಮತ್ತು ವಿದ್ಯಾರ್ಥಿಗಳಿಗೆ ಶಾಲೆ ಸಮವಸ್ತ್ರ ಒದಗಿಸಲು ಖರ್ಚುಮಾಡಿಲಾಗಿದೆ. ೧೯೮೯-೯೦ರ ಸಾಲಿನಲ್ಲಿ ಪುರಸಭೆಯು ವಿವಿಧ ಅಭಿವೃದ್ಧಿ ಕಾರ್ಯಗಳಿಗೆ ಮಾಡಿದ ವೆಚ್ಚ ಈ ರೀತಿ ಇರುವುದು. (ಮೊತ್ತ ಲಕ್ಷ ರೂ. ಗಳಲ್ಲಿ) ಜನಾರೋಗ್ಯ, ೫.೨೮, ನೀರು ಸರಬರಾಜು ೧.೩೦, ರಸ್ತೆ ಮತ್ತು ದೀಪಗಳ ನಿರ್ವಹಣೆ ೪.೫೫, ಸಿಬ್ಬಂದಿ ಪ್ರಭಾರ ೦.೮೨, ಇತರೆ ೦.೧೮. ೧೯೬೧-೬೨ರಿಂದ ೬೪-೬೫ರ ಅವಧಿಯಲ್ಲಿ ಪುರಸಭೆಯ ಆದಾಯ ವೆಚ್ಚಗಳು ಈ ಮುಂದಿನಂತೆ ಇದ್ದವು. ಆವರಣದಲ್ಲಿನ ಸಂಖ್ಯೆ ವೆಚ್ಚ ಸೂಚಿಸುವುದು ೧೯೬೧-೬೨, ರೂ. ೬೨,೨೯೦ (ರೂ. ೫೮,೨೮೮), ೬೨-೬೩ ರೂ. ೫೪,೪೩೭ (ರೂ. ೬೧,೮೦೫), ೬೩-೬೪ ರೂ. ೭೦,೮೬೮ (ರೂ. ೬೦,೫೮೦), ೬೪-೬೫ ರೂ. ೧,೦೦,೧೫೨ (ರೂ. ೬೦,೪೬೪). ೧೯೮೫-೮೬ರಿಂದ ೧೯೯೫-೯೬ರವರೆಗಿನ ಕೆಲವು ವರ್ಷಗಳಲ್ಲಿನ ಪುರಸಭೆಯ ಆದಾಯ, ವೆಚ್ಚಗಳು (ಲಕ್ಷ ರೂ.ನಲ್ಲಿ) ಈ ರೀತಿ ಇರುವುದು.

೧೯೮೫-೮೬:- ೧೭.೭೨(೧೭.೮೨), ೧೯೮೭-೮೮:- ೧೮.೬೭(೧೮.೭೭), ೧೯೮೯-೯೦:- ೧೯.೮೭(೨೦.೦೭), ೧೯೯೧-೯೨:- ೨೧.೯೭(೨೨.೦೭), ೧೯೯೩-೯೪:- ೨೪.೯೭(೨೫.೦೭), ೧೯೯೪-೯೫:- ೨೬.೪೭(೨೬.೫೭), ೧೯೯೫-೯೬ - ೨೬.೫೪(೨೬.೬೪).

ಇತ್ತೀಚಿನ ಮೂರು ವರ್ಷಗಳಲ್ಲಿ ಪುರಸಭೆಯು, ಕುಡಿಯುವ ನೀರು, ಒಳಚರಂಡಿ ಯೋಜನೆ, ಬೀದಿದೀಪ, ಸಾರ್ವಜನಿಕ ನೈರ್ಮಲ್ಯ ಮುಂತಾದವುಗಳಿಗೆ ಮಾಡಿದ ವೆಚ್ಚದ ವಿವರ ಈ ರೀತಿ ಇತ್ತು. ೧೯೯೩-೯೪ ರೂ. ೪.೯೯ ಲಕ್ಷ ೧೯೯೪-೯೫ ರೂ. ೫.೧೬ ಲಕ್ಷ ಮತ್ತು ೧೯೯೫-೯೬ ರೂ. ೫.೨೬ ಲಕ್ಷ. ಪುರಸಭೆಯು ವಸತಿ ಗೃಹ, ಜಲಾಗಾರಗಳು, ದನಗಳ ಕೊಂಡವಾಡಗಳು ಮುಂತಾದವು ಸೇರಿದಂತೆ ಒಟ್ಟು ೧೭ ಆಸ್ತಿಗಳನ್ನು ಹೊಂದಿರುವುದು. ಪುರಸಭೆಯ ಕಟ್ಟಡವನ್ನು ೧೯೩೯ರಲ್ಲಿ ಕಟ್ಟಲಾಯಿತು.

**ಪುರಸಭೆ, ಆಳಂದ**

ಹೈದರಾಬಾದ್ ಸಂಸ್ಥಾನದಲ್ಲಿ ವಿಲೀನಗೊಳ್ಳುವ ಮೊದಲು ಆಳಂದವು ೧೯೫೦ರಲ್ಲಿ ಜಹಗೀರ್ ತಾಲ್ಲೂಕಿನ ಕೇಂದ್ರವಾಗಿತ್ತು. ಪಟ್ಟಣದ ನಾಗರಿಕ ಆಡಳಿತನ್ನು ನೋಡಿಕೊಳ್ಳಲು ಸರ್ಕಾರದಿಂದ ನೇಮಿಸಲ್ಪಟ್ಟ 'ಟೌನ್ ಕಮಿಟಿ' ಇತ್ತು. ಸದರಿ ಸಮಿತಿಯು "ದುಅಮ್ ತಾಲೂಕುದಾರ" ಎಂಬ ಕಂದಾಯ ಅಧಿಕಾರಿಯ ನಿಯಂತ್ರಣದಲ್ಲಿ ಕಾರ್ಯನಿರ್ವಹಿಸುತ್ತಿತ್ತು. ಜಹಗೀರ್ ಆಡಳಿತ ಕೊನೆಗೊಂಡ ನಂತರ (೧೯೫೦) ಸದರಿ ಟೌನ್ ಕಮಿಟಿಯನ್ನು ತಹಶೀಲ್ದಾರ ಅವರ ನಿಯಂತ್ರಣಕ್ಕೆ ಒಳಪಡಿಸಲಾಯಿತು. ಟೌನ್ ಕಮಿಟಿಯ ಎಲ್ಲಾ ಸದಸ್ಯರು ನಾಮಕರಣಗೊಂಡವರಾಗಿದ್ದರು. ಪ್ರಥಮ ಬಾರಿಗೆ ೧೯೫೩ರಲ್ಲಿ ಚುನಾಯಿತ ಮಂಡಳಿಯು ರಚನೆಗೊಂಡಿತತು. ಸದರಿ ಸಮಿತಿಯು ಹೈದರಾಬಾದ್ ಮುನಿಸಿಪಲ್ ಮತ್ತು ಟೌನ್ ಕಮಿಟಿ ಕಾನೂನು ೧೯೫೧ರ ಅನ್ವಯ ಪುನರ್ ರಚನೆಗೊಂಡಿತ್ತು. ೧೯೫೩ರಲ್ಲಿ ಟೌನ್ ಕಮಿಟಿಯ ಸ್ಥಾನವನ್ನು ಸಿಟಿ ಮುನಿಸಿಪಾಲಿಟಿ (ಸಿ.ಎಂ.ಸಿ) ದರ್ಜೆಗೆ ಉನ್ನತೀಕರಿಸಲಾಯಿತು. ಸದಸ್ಯರ ಸಂಖ್ಯೆ ೨೪ ಆಗಿದ್ದು, ಅದರಲ್ಲಿ ೧೭ ಜನ ಚುನಾಯಿತ ಸದಸ್ಯರು, ಉಳಿದವರು ನಾಮಕರಣ ಗೊಂಡವರಾಗಿದ್ದರು. ನಾಮಕರಣ ಗೊಂಡವರಲ್ಲಿ ಮೂವರು ಅಧಿಕಾರಿಗಳೂ ಇದ್ದರು. ಚುನಾಯಿತ ಸದಸ್ಯರಲ್ಲಿ ಇಬ್ಬರು ಪರಿಶಿಷ್ಟ ಜಾತಿಗೆ ಸೇರಿದವರಾಗಿದ್ದರು. ರಾಜ್ಯ ಪುನರ್ ರಚನೆಯ ನಂತರ ೧೯೬೪ರ ಕರ್ನಾಟಕ ಮುನಿಸಿಪಾಲಿಟಿ ಅಧಿನಿಯಮದ ಅನ್ವಯ ಸಿಟಿ ಮುನಿಸಿಪಾಲಿಟಿಯನ್ನು ಪುನಃ ಟೌನ್ ಮುನಿಸಿಪಾಲಿಟಿ (ಪುರಸಭೆ) ಎಂದು ಈ ಹಿಂದಿದ್ದ ಸ್ಥಾನಮಾನವನ್ನು ನೀಡಲಾಯಿತು. ೧೯೬೫ರಲ್ಲಿ ಸದಸ್ಯರ ಸಂಖ್ಯೆ ೧೭ ಆಗಿದ್ದು ನಗರವನ್ನು ಏಳು ವಾರ್ಡುಗಳಾಗಿ ವಿಗಂಡಿಸಲಾಗಿತ್ತು. ತ್ಯಾಗರಾಜ ಬಡಾವಣೆಯು ನಗರದ ಅತ್ಯಂತ ಹಳೆಯ ಬಡಾವಣೆ. ಪ್ರಚಲಿತ ಪುರಸಭೆಗಳ ಕಾನುನು ೧೯೬೪ರ ಅನ್ವಯ ಇತ್ತೀಚೆಗೆ ೧೯೯೬ ಜನವರಿಯಲ್ಲಿ ಚುನಾವಣೆಗಳು ನಡೆದು ಪುರಸಭೆಯು ೨೩ ಸದಸ್ಯರಿಂದ ಪುನರ್ ರಚನೆಗೊಂಡಿರುವುದು. ಆಪೈಕಿ ೮ ಸದಸ್ಯರು ಹಿಂದುಳಿದ ಎ ಮತ್ತು ಬಿ. ವರ್ಗಕ್ಕೆ ಸೇರಿದ್ದರೆ, ಮೂವರು ಪ. ಜಾ / ಪ. ಪಂ.ಕ್ಕೆ ಸೇರಿದವರು ಮತ್ತು ಉಳಿದ ೧೨ ಸಾಮಾನ್ಯ ಅಭ್ಯರ್ಥಿಗಳು ಆಗಿರುವರು. ಒಟ್ಟು ಮಹಿಳಾ ಸದಸ್ಯರ ಸಂಖ್ಯೆ ಏಳು ಇರುವುದು.

೧೯೫೫ರಲ್ಲಿ ಪುರಸಭೆಯ ಕಾರ್ಯವ್ಯಾಪ್ತಿ ೮.೩೩ ಚ.ಕಿ.ಮೀ. ಆಗಿದ್ದರೆ, ೧೯೮೧ರಲ್ಲಿ ಅದರ ವ್ಯಾಪ್ತಿ ೬.೪ ಚ.ಕಿ.ಮೀ. ಆಗಿತ್ತು. ೧೯೬೬ರಲ್ಲಿ ಮನೆಗಳ ಸಂಖ್ಯೆ ೫,೩೩೬, ವಾರ್ಡುಗಳ ಸಂಖ್ಯೆ ೨೩ ಆಗಿದ್ದರೆ ೧೯೬೫ರಲ್ಲಿ ನಗರ ಮಿತಿಯಲ್ಲಿ ಇದ್ದ ಕಟ್ಟಡಗಳ ಸಂಖ್ಯೆ ೩,೨೬೦ ಆಗಿತ್ತು. ನಗರದ ಜನಸಂಖ್ಯೆ ೧೯೯೧ರಲ್ಲಿ ೨೬,೫೬೪ ಇತ್ತು. ಕರದಾತರ ಸಂಖ್ಯೆ ೧೯೯೧ರಲ್ಲಿ ೫,೩೩೬ ಆಗಿದ್ದರೆ ೧೯೬೬ರಲ್ಲಿ ೭೩೪೭ ಆಗಿತ್ತು, ಸರಾಸರಿ ಕರಭಾರ ರೂ. ೩೬ ಆಗಿತ್ತು.

**ನೀರು ಪೂರೈಕೆ**

ಪ್ರಾರಂಭದಿಂದಲೂ ಈ ನಗರಕ್ಕೆ ಬಾವಿಗಳು ಕುಡಿಯುವ ನೀರನ್ನು ಒದಗಿಸುವ ಜಲಮೂಲಗಳಾಗಿರುವವು. ೧೯೬೩ರಿಂದ ಸುರಕ್ಷಿತ ನೀರನ್ನು ಪೈಪುಗಳ ಮೂಲಕ ಒದಗಿಸುವ ಯೋಜನೆಯನ್ನು ರೂ. ೬.೩೨ ಲಕ್ಷ ವೆಚ್ಚದಲ್ಲಿ ಪ್ರಾರಂಭಿಸಲಾಯಿತು. ೧೯೬೫ರಲ್ಲಿ ನಗರ ಮಿತಿಯಲ್ಲಿ ೧೭ ಸಾರ್ವಜನಿಕ ನಳಗಳು, ೩೭೧ ಖಾಸಗಿ ನಳಗಳು ಇದ್ದವು. ನೀರು ಸರಬರಾಜಿಗೆ ಪುರಸಭೆಯು ೧೯೮೯-೯೦ರಲ್ಲಿ ರೂ. ೨.೪೪ ಲಕ್ಷ ವೆಚ್ಚ ಮಾಡಿದ್ದರೆ, ೧೯೯೪-೯೫ರಲ್ಲಿ ಈ ಬಾಬಿಗೆ ಖರ್ಚಾದ ಹಣ ರೂ. ೩.೮೪ ಲಕ್ಷ ಆಗಿತ್ತು. ಬೆಳೆಯುತ್ತಿರುವ ನಗರದ ಹೆಚ್ಚುತ್ತಿರುವ ನೀರಿನ ಬೇಡಿಕೆಯನ್ನು ಪೂರೈಸಲು ಸಹಾಯಕವಾಗುವಂತೆ ಅಮರ್ಜಾ ನದಿಗೆ ನಗರದಿಂದ ೧೩ ಕಿ. ಮಿ.ದೂರದ ಸಂಗೊಳಿಗಿ ಗ್ರಾಮದ ಹತ್ತಿರ ಕಟ್ಟಿದ ಆಣೆಕಟ್ಟಿನಿಂದ ತ್ವರಿತ ಗತಿಯಲ್ಲಿ ಕುಡಿಯುವ ನೀರನ್ನು ಒದಗಿಸುವ ಯೋಜನೆಯನ್ನು ೧೯೯೩ರಲ್ಲಿ ರೂ. ೧೩೪ ಲಕ್ಷ ಅಂದಾಜಿನೊಂದಿಗೆ ಪ್ರಾರಂಭಿಸಲಾಯಿತು. ಈ ಯೋಜನಾ ವೆಚ್ಚವಾಗಿ ಸರ್ಕಾರ ೪೦ ಲಕ್ಷ ರೂ., ಜೀವ ವಿಮಾ ನಿಗಮ

೬೭ ಲಕ್ಷ ರೂ. ಆರ್ಥಿಕ ನೆರವು ಒದಗಿಸಿದ್ದರೆ, ಪುರಸಭೆ ೨೭ ಲಕ್ಷ ಒದಗಿಸಿದೆ. ಸದರಿ ಯೋಜನೆ ಇನ್ನು ಪೂರ್ಣಗೊಂಡಿಲ್ಲವಾದರೂ ತಾತ್ಕಾಲಿಕವಾಗಿ ೧೯೯೫ ಮೇ ಯಿಂದ ನೀರನ್ನು ವಿತರಿಸಲಾಗುತ್ತಿದೆ. ೧೯೯೬ರಲ್ಲಿ ಇರುವಂತೆ ಖಾಸಗಿ ನಳಗಳ ಸಂಖ್ಯೆ ೧೬೦೦ ಆಗಿದ್ದರೆ ಸಾರ್ವಜನಿಕ ನಳಗಳ ಸಂಖ್ಯೆ ೧೭, ಪ್ರತಿನಿತ್ಯ ಸರಾಸರಿ ಆರು ಲಕ್ಷ ಗ್ಯಾಲನ್ ನೀರನ್ನು ಸರಬರಾಜು ಮಾಡಲಾಗುವುದು. ನೀರಿನ ಸರಾಸರಿ ಹಂಚಿಕೆ ಪ್ರತಿದಿನ ೨೨ ಗ್ಯಾಲನ್ ಎಂದು ವರದಿಯಾಗಿದೆ. ಆಗಸ್ಟ ೧೯೯೬ರ ವರೆಗೆ ಈ ಯೋಜನೆಗೆ ಆದ ವೆಚ್ಚ ರೂ. ೨೭೪ .೫೬ ಲಕ್ಷ.

ಪುರಸಭೆಯ ವರದಿ ತಿಳಿಸುವಂತೆ ಕುಡಿಯುವ ನೀರಿನ ಯೋಜನಗೆ ತಗಲುವ ವಾರ್ಷಿಕ ವೆಚ್ಚ ರೂ. ೩,೮೨,೩೬೪ ಆಗಿದ್ದರೆ, ನೀರಿನ ತೆರಿಗೆ ರೂಪದಲ್ಲಿ ಸಂದಾಯವಾಗುವ ಹಣ ರೂ. ೩,೮೪,೫೬೯.

## ಜನಾರೋಗ್ಯ ಮತ್ತು ನೈರ್ಮಲ್ಯ

ನಗರದಲ್ಲಿ ಒಳಚರಂಡಿಯ ವ್ಯವಸ್ಥೆ ಇರುವುದಿಲ್ಲ. ತೆರೆದ ಚರಂಡಿಗಳ ಒಟ್ಟು ಉದ್ದ ೬ ಕಿ. ಮಿ. ಆಗಿದ್ದು ನಗರದಲ್ಲಿ ೭೮೨ ಸೆಪಟಿಕ್ ಸಂಡಾಸ್‌ಗಳು ಇರುತ್ತವೆ. ನಗರದಲ್ಲಿರುವ ಪೌರ ಕಾರ್ಮಿಕರ ಸಂಖ್ಯೆ ೨೯. ಜನರ ಆರೋಗ್ಯ ಮತ್ತು ನೈರ್ಮಲ್ಯ ಬಾಬಿಗೆ ಪುರಸಭೆಯು ೧೯೯೪-೯೫ರಲ್ಲಿ ಖರ್ಚು ಮಾಡಿದ ಹಣ ರೂ. ೧೧,೪೪೪ ಆಗಿದ್ದರೆ ೧೯೮೯-೯೦ ರಲ್ಲಿ ಈ ಮೊತ್ತ ರೂ.  ೮,೦೧೭ ಆಗಿತ್ತು. ಚರಂಡಿ ವ್ಯವಸ್ಥೆ ಮತ್ತು ಸಾಂಕ್ರಾಮಿಕ ರೋಗಗಳನ್ನು ತಡೆಗಟ್ಟಲು ಮಾಡಿದ ವೆಚ್ಚ ೧೯೮೯-೯೦ರಲ್ಲಿ ರೂ. ೫,೭೯೮ ಆಗಿದ್ದರೆ ೯೪-೯೫ರಲ್ಲಿ ರೂ. ೮,೫೯೦ ಆಗಿತ್ತು.

## ಇತರ ಸೌಲಭ್ಯಗಳು

ಪುರಸಭೆಯ ವ್ಯಾಪ್ತಿಯಲ್ಲಿ ಇರುವ ಒಟ್ಟು ರಸ್ತೆಗಳ ಉದ್ದ ೧೯೯೬ರಲ್ಲಿ ೧೬ ಕಿ. ಮೀ. ಆಗಿದ್ದರೆ ೧೯೬೫ ರಲ್ಲಿ ಇದರ ಪ್ರಮಾಣ ೫ ಕಿ. ಮೀ. ಆಗಿತ್ತು. ಪ್ರಪ್ರಥಮವಾಗಿ ನಗರಕ್ಕೆ ೧೯೫೨ರಲ್ಲಿ ಕೆ.ಇ.ಬಿ ಯಿಂದ ವಿದ್ಯುತ್ತನ್ನು ಪೂರೈಸಲಾಯಿತು. ೧೯೬೫ರಲ್ಲಿ ನಗರದ ಸರಹದ್ದಿನಲ್ಲಿ ೨೬೧ ಬೀದಿ ದೀಪಗಳು ಇದ್ದವು. ೧೯೯೧ರಲ್ಲಿನಗರದಲ್ಲಿದ್ದ ಗೃಹಬಳಕೆ ವಿದ್ಯುತ್ ಅಳವಡಿಕೆಗಳ ಸಂಖ್ಯೆ ೧೧,೦೮೧ ಆಗಿದ್ದರೆ ವಾಣಿಜ್ಯ ಅಳವಡಿಕೆಗಳ ಸಂಖ್ಯೆ ೧,೩೭೯, ಕೈಗಾರಿಕಾ ಅಳವಡಿಕೆಗಳ ಸಂಖ್ಯೆ ೪೬೭, ಬೀದಿ ದೀಪಗಳ ಸಂಖ್ಯೆ ೧೪೯ ಆಗಿತ್ತು. ರಸ್ತೆ ಮತ್ತು ದೀಪಗಳ ನಿರ್ವಹಣೆಗೆ ಪುರಸಭೆಯು ೧೯೮೯-೯೦ರಲ್ಲಿ ರೂ. ೯೦,೮೭೮ ಖರ್ಚು ಮಾಡಿದರೆ, ೧೯೯೪-೯೫ರಲ್ಲಿ ಈ ಬಾಬಿಗೆ ಖರ್ಚಾದ ಹಣ ರೂ. ೧.೨೧ ಲಕ್ಷ ಆಗಿತ್ತು. ಸಾರ್ವಜನಿಕ ಕಾಮಗಾರಿಗಳಿಗೆ ೯೪-೯೫ರಲ್ಲಿ ಪುರಸಭೆ ಮಾಡಿದ ವೆಚ್ಚ ರೂ. ಒಂದು ಲಕ್ಷಕ್ಕಿಂತ ಹೆಚ್ಚಾಗಿತ್ತು. ಆಕ್ಟ್ರಾಯ್ ರದ್ದಾಗುವ ಮೂರು ವರ್ಷ ಪೂರ್ವದಲ್ಲಿ ಆ ಮೂಲದಿಂದ ಸಂದಾಯವಾದ ಆದಾಯ ೧೯೭೮-೭೯, ೭೭-೭೮, ಮತ್ತು ೧೯೭೬-೭೭ರಲ್ಲಿ ಅನುಕ್ರಮವಾಗಿ ರೂ. ೧.೮೭ ಲಕ್ಷ,  ೧.೯೨ ಲಕ್ಷ ಮತ್ತು ೧.೭೨ ಲಕ್ಷ ಆಗಿದ್ದರೆ, ೧೯೯೨-೯೩, ೯೩-೯೪, ೯೪-೯೫ ಮತ್ತು ೯೫-೯೬ರಿಂದ ಪುರಸಭೆಗೆ ಸರ್ಕಾರ ನೀಡಿದ ಜಕಾತಿ ಅನುದಾನ ಕ್ರಮವಾಗಿ ರೂ. ೬.೭೯  ಲಕ್ಷ, ೫.೧೬ ಲಕ್ಷ, ೫.೭೬ ಲಕ್ಷ ಮತ್ತು ೬.೪೯ ಲಕ್ಷ ಎಂದು ವರದಿಯಾಗಿದೆ. ಪುರಸಭೆಗೆ ಸಂದಾಯವಾದ ಮೋಟಾರು ವಾಹನ ತೆರಿಗೆ ಅನುದಾನ ೧೯೯೩-೯೪, ೯೪-೯೫, ೯೫-೯೬ರಲ್ಲಿ ಅನುಕ್ರಮವಾಗಿ ರೂ. ೩.೨೩ ಲಕ್ಷ, ೨.೫೫ ಲಕ್ಷ, ಮತ್ತು ೧.೭೦ ಲಕ್ಷ ಆಗಿತ್ತು.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ವಿವಿಧ ಕಲ್ಯಾಣ ಕಾರ್ಯ ಕ್ರಮಗಳಿಗೆ ಪುರಸಭೆಯು ೧೯೯೨-೯೩ರಲ್ಲಿ ರೂ. ೨೫,೦೦೦ ಖರ್ಚು ಮಾಡಿದ್ದರೆ, ಅದರ ಮುಂದಿನ ಎರಡು ವರ್ಷಗಳಲ್ಲಿ ಅನುಕ್ರಮವಾಗಿ ರೂ. ೮೭,೬೧೨ ಮತ್ತು ರೂ. ೪೪,೦೧೫ ಆಗಿತ್ತು. ಈ ಹಣವನ್ನು ಸಮುದಾಯ ಭವನ ನಿರ್ಮಾಣ, ಪೌರ ಕಾರ್ಮಿಕರಿಗೆ ಜೀವವಿಮಾ ಕಂತಿನ ಹಣದ ಪಾವತಿ ಮತ್ತು ಅವರ ಮಕ್ಕಳಿಗೆ ವಿದ್ಯಾಭ್ಯಾಸದ ಸೌಕರ್ಯ ಒದಗಿಸಲು (ಸೈನಿಕ ಶಾಲೆಗೆ ದಾಖಲು), ವಸತಿ ನಿಲಯ ಮುಂತಾದವುಗಳಿಗೆ ವೆಚ್ಚ ಮಾಡಲಾಗಿದೆ. ಸಿಬ್ಬಂದಿ ಪ್ರಭಾರವನ್ನು ಕುರಿತಂತೆ ೧೯೮೯-೯೦ರಲ್ಲಿ ಪುರಸಭೆಯು ರೂ. ೮.೭೯ ಲಕ್ಷ ವೆಚ್ಚ ಮಾಡಿದ್ದರೆ, ೯೪-೯೫ರಲ್ಲಿ ಇದು ೧೨.೬೫ ಲಕ್ಷಕ್ಕೆ ಏರಿತ್ತು. ಸದರಿ ವರ್ಷಗಳಲ್ಲಿ ಆದ ಇತರೇ ವೆಚ್ಚಗಳು ಕ್ರಮವಾಗಿ ರೂ. ೭೮,೨೪೫ ಮತ್ತು ರೂ. ೯೮,೫೯೮ ಎಂದು ತಿಳಿದು ಬರುವುದು.

## ಹಣಕಾಸು

ಪುರಸಭೆಯ ಇತ್ತೀಚಿನ ಕೆಲವು ವರ್ಷಗಳ ಆದಾಯ ಮತ್ತು ವೆಚ್ಚ ಈ ರೀತಿ ಇರುವವು. ಮೊತ್ತ ಲಕ್ಷ ರೂ.ಗಳಲ್ಲಿ, ಆವರಣದಲ್ಲಿ ಇರುವ ಅಂಕಿಗಳು ವೆಚ್ಚವನ್ನು ಸೂಚಿಸುವುದು.

೧೯೮೪-೮೫ ೫.೧೦ (೩.೪೯), ೧೯೮೫-೮೬ ೭.೨೦ (೯.೮೦), ೧೯೮೬-೮೭ ೮.೨೨ (೮.೨೩), ೧೯೮೭-೮೮ ೯.೧೦ (೯.೫೯), ೧೯೮೮-೮೯ ೧೧.೯೩ (೧೦.೩೮), ೧೯೯೦-೯೧ ೧೫.೯೫ (೧೫.೪೨), ೧೯೯೧-೯೨ ೨೧.೪೩ (೧೯.೯೩), ೧೯೯೨-೯೩ ೧೬.೩೮ (೧೭.೨೯), ೧೯೯೩-೯೪ ೨೩.೬೩ (೨೨.೯೪), ೧೯೯೪-೯೫ ೨೩.೯೦ (೨೨.೧೯), ೧೯೯೫-೯೬ ೨೩.೧೧ (೨೩.೫೭), ೧೯೯೬-೯೭ ೩೩.೩೩ (೩೩.೩೨)

## ಪುರಸಭೆ, ಚಿತ್ತಾಪುರ

ಚಿತ್ತಾಪುರದಲ್ಲಿ ನಗರಾಡಳಿತ ವ್ಯವಸ್ಥೆಯನ್ನು ೧೯೫೬ರಲ್ಲಿ ಮುನಸಿಪಾಲಿಟಿಯ ರಚನೆಯೊಂದಿಗೆ ಜಾರಿಗೊಳಿಸಲಾಯಿತು. ಮತ್ತು ಸ್ಥಳೀಯ ಸಂಸ್ಥೆಯ ದರ್ಜೆಯನ್ನು ಎತ್ತರಿಸಲಾಯಿತು. ಇದಕ್ಕೂ ಪೂರ್ವದಲ್ಲಿ ನಗರಾಡಳಿತವನ್ನು ನೋಡಿಕೊಳ್ಳಲು 'ಟೌನಕಮಿಟಿ' ಎಂಬ ಸ್ಥಳೀಯ ಸಮಿತಿಯು ೧೯೫೧ರ ಹೈದರಾಬಾದ್ ಮುನಿಸಿಪಲ್ ಮತ್ತು ಟೌನ್ ಕಮಿಟಿಯ ಅಧಿನಿಯಮದಂತೆ ಕಾರ್ಯ ನಿರ್ವಹಿಸುತ್ತಿತ್ತು. ೧೯೬೦ರಲ್ಲಿ ಪ್ರಥಮ ಚುಣಾವಣೆಗಳು ನಡೆದು ಪುರಸಭೆ ಪುನರ್ ರಚನೆಗೊಂಡಾಗ ಪರಿಶಿಷ್ಟ ಜಾತಿ : ಪರಿಶಿಷ್ಟ ಪಂಗಡದವರಿಗೆ ಎರಡು ಕಾಯ್ದಿಟ್ಟ ಸ್ಥಳಗಳು ಸೇರಿದಂತೆ ಸದಸ್ಯರ ಸಂಖ್ಯೆ ೧೫ ಆಗಿತ್ತು. ಕರ್ನಾಟಕ ಮುನಸಿಪಲ್ ಅಧಿನಿಯಮ ೧೯೬೪ರ ಅನ್ವಯ ಪುರಸಭೆಗೆ ಇತ್ತೀಚಿನ ಚುಣಾವಣೆಗಳು ೧೯೯೬ ಜನವರಿಯಲ್ಲಿ ನಡೆದವು. ಒಟ್ಟು ಚುಣಾಯಿತ ಸದಸ್ಯರ ಸಂಖ್ಯೆ ೨೩ ಆಗಿದ್ದು ಆ ಪೈಕಿ ೧೧ ಜನ ಸಾಮಾನ್ಯ ಅಭ್ಯರ್ಥಿಗಳು, ೮ ಜನ ಹಿಂದುಳಿದ ವರ್ಗ ಎ ಗುಂಪಿಗೆ ಸೇರಿದವರು ಮತ್ತು ನಾಲ್ವರು ಪರಿಶಿಷ್ಟ ಜಾತಿಗೆ ಸೇರಿದವರಾಗಿರುವರು ಆಗಿದ್ದು ಒಟ್ಟು ಸದಸ್ಯರ ಪೈಕಿ ಮಹಿಳೆಯರ ಸಂಖ್ಯೆ ೯ ಆಗಿತ್ತು. ೧೯೫೫ರಲ್ಲಿ ನಗರದ ವಿಸ್ತೀರ್ಣ ೨.೫ ಚ. ಕಿ. ಮಿ ಆಗಿದ್ದು, ೪,೫೦೦ ಮನೆಗಳು ಇದ್ದವು. ನಗರದ ಜನಸಂಖ್ಯೆ ೧೯,೬೭೭ (೧೯೯೧) ಆಗಿದ್ದು ಸರಾಸರಿ ಕರಭಾರ ರೂ. ೧೯ ಆಗಿತ್ತು. ಇತ್ತೀಚಿನ ವರ್ಷಗಳಲ್ಲಿ ನಗರದ ಕೆಲವು ಪ್ರದೇಶಗಳನ್ನು ಸಾತನೂರು ಗ್ರಾಮ ಪಂಚಾಯ್ತಿಗೆ ಸೇರಿಸಿದ್ದರಿಂದ ನಗರದ ವಿಸ್ತೀರ್ಣ ಕಡಿಮೆಯಾಗಿರುವುದು. ೧೧ನೇ ಶತಮಾನದ ಸುಪ್ರಸಿದ್ಧ ಐತಿಹಾಸಿಕ ಸ್ಥಳ ಪ್ರಾಚೀನ ವಿದ್ಯಾಕೇಂದ್ರ ನಾಗಾಯಿ, ನಗರಕ್ಕೆ ಹೊಂದಿಕೊಂಡಂತೆ ಸುಮಾರು ೩ ಕಿ. ಮಿ. ದೂರದಲ್ಲಿ ಇರುವುದು.

ಕಿರು ನೀರಾವರಿ ಯೋಜನೆಯ ಅನ್ವಯ ನಗರದಿಂದ ಐದು ಕಿ. ಮಿ. ದೂರದ ಕಾಗಿನಾ ನದಿಯನ್ನು ಬಳಸಿಕೊಂಡು ಸುರಕ್ಷಿತ ಕುಡಿಯುವ ನೀರನ್ನು ೧೯೭೨ ರಿಂದ ನಳಗಳ ಮೂಲಕ ನಗರಕ್ಕೆ ಪೂರೈಸಲಾಗುತ್ತಿದೆ. ಇದಕ್ಕೂ ಪೂರ್ವದಲ್ಲಿ ನಗರ ನೀರು ಪೂರೈಕೆ ಯೋಜನೆಗೆ ಸರ್ಕಾರ ರೂ. ೭.೬೨ ಲಕ್ಷದ ಸಾಲದ ನೆರವನ್ನು ಒದಗಿಸಿರುವುದಾಗಿ ತಿಳಿದು ಬರುವುದು. ಬೆಳೆಯುತ್ತಿರುವ ನಗರದ ಹೆಚ್ಚುತ್ತಿರುವ ನೀರಿನ ಬೇಡಿಕೆಯನ್ನು ಪೂರೈಸಲು ಸಹಾಯಕವಾಗುವಂತೆ ಸಮಗ್ರ ನೀರು ಸರಬರಾಜು ಯೋಜನೆಯ ಅನ್ವಯ ಸುಧಾರಿತ ಯೋಜನೆಯನ್ನು ೧೯೯೦ರಲ್ಲಿ ರೂಪಿಸಿ ೧೯೯೪ರಲ್ಲಿ ಪೂರ್ಣಗೊಳಿಸಲಾಯಿತು. ಕಾಗಿನಾ ನದಿಯೇ ನೀರಿನ ಮೂಲವಾಗಿರುವುದು. ಈ ಯೋಜನೆಯಲ್ಲಿ ತಲಾ ಒಂದು ಲಕ್ಷ ಗ್ಯಾಲನ್ ನೀರು ಸಂಗ್ರಹಣಾ ಸಾಮರ್ಥ್ಯದ ಮೂರು ಜಲಾಗಾರಗಳನ್ನು ನಗರದ ವಿವಿಧ ಸ್ಥಳಗಳಲ್ಲಿ ನಿರ್ಮಿಸಲಾಗಿದೆ. ಹೊಸ ಯೋಜನೆಯ ವೆಚ್ಚ ರೂ. ೧೭೦.೧೨ ಲಕ್ಷ ಆಗಿದ್ದು ಪ್ರತಿದಿನ ತಲಾ ಸರಾಸರಿ ಪೂರೆಕೆಯಾಗುವ ನೀರಿನ ಪ್ರಮಾಣ ೪೫ ಲೀಟರ್, ೧೯೯೭ರಲ್ಲಿ ನಗರದಲ್ಲಿ ೧,೧೦೦ ಖಾಸಗಿ ನಳಗಳು. ೮೦ ಸಾರ್ವಜನಿಕ ನಳಗಳು ಇದ್ದುದಾಗಿ ತಿಳಿದು ಬರುವುದು. ನೀರಿನ ಪರೈಕೆಯಿಂದ ಪುರಸಭೆಗೆ ಪ್ರತಿವರ್ಷ ಸರಾಸರಿ ರೂ. ೨.೫ ಲಕ್ಷ ತೆರಿಗೆ ರೂಪದಲ್ಲಿ ಸಂದಾಯವಾದರೆ, ಕನಿಷ್ಟ ರೂ. ೩ ಲಕ್ಷ ವಾರ್ಷಿಕ ವೆಚ್ಚವಾಗುವುದು. ನಗರದ ನೈರ್ಮಲ್ಯವನ್ನು ಕಾಪಾಡಲು ೨೩ ಜನ ಪೌರಕಾರ್ಮಿಕರು ಮತ್ತು ಮೇಲ್ವಿಚಾರಣಾ ಸಿಬ್ಬಂದಿ ಇರುವರು. ಪ್ರಪ್ರಥಮವಾಗಿ ನಗರಕ್ಕೆ ವಿದ್ಯುತ್ತನ್ನು ೧೯೫೮ರಲ್ಲಿ ಒದಗಿಸಲಾಯಿತು. ೧೯೯೫ರಲ್ಲಿ ನಗರದಲ್ಲಿರುವ ಬೀದಿ ದೀಪಗಳ ಸಂಖ್ಯೆ ೬೫೦ ಆಗಿದ್ದರೆ, ಮನೆ ಸಂಪರ್ಕಗಳ ಸಂಖ್ಯೆ ೨,೮೦೦, ವಾಣಿಜ್ಯ ಮತ್ತು ಕೈಗಾರಿಕಾ ದೀಪಗಳ ಸಂಪರ್ಕಗಳ ಸಂಖ್ಯೆ ಕ್ರಮವಾಗಿ ೬೪೦ ಮತ್ತು ೫೦ ಆಗಿತ್ತು.

### ಹಣಕಾಸು

೧೯೮೫-೮೬ರಿಂದ ೧೯೮೯-೯೦ರ ಅವಧಿಯಲ್ಲಿನ ಪುರಸಭೆಯ ಸರಾಸರಿ ಆದಾಯ ರೂ. ೩.೫೦ ಲಕ್ಷ ಆಗಿದ್ದರೆ ಸರಾಸರಿ ಖರ್ಚು ರೂ. ೪.೧೫ ಲಕ್ಷ ಆಗಿತ್ತು. ಅದರ ಮುಂದಿನ ೫ ವರ್ಷಗಳಲ್ಲಿ ೯೦-೯೧ರಿಂದ ೯೪-೯೫ರ ಅವಧಿಯಲ್ಲಿ ಸರಾಸರಿ ಆದಾಯ ರೂ. ೪ ಲಕ್ಷ ಆಗಿದ್ದರೆ, ಸರಾಸರಿ ಖರ್ಚು ರೂ. ೫.೬೦ ಲಕ್ಷ ಎಂದು ತಿಳಿದು ಬರುವುದು. ಆಕ್ಟ್ರಾಯ

ರದ್ದಾಗುವ ಪೂರ್ವದಲ್ಲಿ ವಾರ್ಷಿಕ ಸರಾಸರಿ ರೂ. ೮೦,೦೦೦ ಈ ಮೂಲದಿಂದ ಸಂದಾಯವಾಗುತ್ತಿತ್ತು. ಆಕ್ಟ್ರಾಯ ರದ್ದಾದ ನಂತರ ಇತ್ತೀಚಿನ ಮೂರು ವರ್ಷಗಳಲ್ಲಿ ಅಂದರೆ ೯೨-೯೩ರಲ್ಲಿ ರೂ. ೨ ಲಕ್ಷ ಅದರ ಮುಂದಿನ ವರ್ಷ ರೂ. ೨.೨೦ ಲಕ್ಷ, ೯೪-೯೫ರಲ್ಲಿ ರೂ. ೨.೪೦ ಲಕ್ಷ ಅನುದಾನ ಸರ್ಕಾರದಿಂದ ಪಡೆಯಲಾಗಿದೆ. ಪುರಸಭೆಗೆ ವಾಹನ ತೆರಿಗೆ ಅನುದಾನದ ಮೂಲಕ ರೂ. ೨.೨೦ ಲಕ್ಷ ಸಂದಾಯವಾಗುತ್ತಿದೆ. ಪುರಸಭೆಯು ಹೊಂದಿದ ವಿವಿಧ ಸ್ಥಿರಾಸ್ತಿಗಳ ಸಂಖ್ಯೆ ಸುಮಾರು ೩೦ ಎಂದು ವರದಿಯಾಗಿದೆ.

ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಕಲ್ಯಾಣ ಕಾರ್ಯಕ್ರಮಗಳಿಗಾಗಿ ೯೨-೯೩ ಮತ್ತು ೯೩-೯೪ರಲ್ಲಿ ವೆಚ್ಚವಾದ ಹಣ ಪ್ರತಿ ವರ್ಷ ರೂ. ೨೧,೦೦೦ ಆಗಿದ್ದರೆ ೯೪-೯೫ರಲ್ಲಿ ಈ ಬಗ್ಗೆ ಖರ್ಚು ಮಾಡಿದ ಹಣ ರೂ. ೫೦೦೦ (ಅಂಬೇಡ್ಕರ್ ಜಯಂತಿ). ೧೯೮೯-೯೦ ಮತ್ತು ೧೯೯೪-೯೫ ಸಾಲುಗಳಲ್ಲಿ ಪುರಸಭೆಯು ಮಾಡಿದ ವಿವಿಧ ಅಭಿವೃದ್ಧಿ ವೆಚ್ಚಗಳ ತುಲನಾತ್ಮಕ ವಿವರಣೆ ಈ ಕೆಳಗಿನಂತೆ ಇರುವುದು.

| ವಿವರಗಳು | ೧೯೮೯-೯೦ (ರೂ.) | ೧೯೯೪-೯೫ (ರೂ.) |
|---|---|---|
| ೧. ಜನಾರೋಗ್ಯ | ೨೪,೫೦೦ | ೨೪,೫೦೦ |
| ೨. ನಗರ ನೈರ್ಮಲ್ಯ | ೩೨,೨೦೦ | -- |
| ೩. ನೀರು ಪೂರೈಕೆ | ೨,೨೦,೦೦೦ | ೩,೨೫,೦೦೦ |
| ೪. ರಸ್ತೆ ಮತ್ತು ದೀಪಗಳ ನಿರ್ವಹಣೆ | ೬೦,೦೦೦ | ೭೫,೦೦೦ |
| ೫. ಸಿಬ್ಬಂದಿ ಪ್ರಭಾರ (ಪ್ರತಿತಿಂಗಳು) | ೭೦,೦೦೦ | ೯೦,೦೦೦ |
| ೬. ಇತರೇ | ೬,೦೦೦ | ೮,೦೦೦ |

೧೯೬೧-೧೯೯೬ರ ಮಧ್ಯದ ಕೆಲವು ವರ್ಷಗಳಲ್ಲಿ ಪುರಸಭೆಯ ಆದಾಯ ಮತ್ತು ವೆಚ್ಚಗಳು ಈ ಕೆಳಗಿನಂತೆ ಇರುವವು. ಮೊತ್ತ ಲಕ್ಷ ರೂಗಳಲ್ಲಿ, ಆವರಣದಲ್ಲಿರುವ ಸಂಖ್ಯೆಯು ವೆಚ್ಚವನ್ನು ಸೂಚಿಸುವುದು.

೧೯೬೧-೬೨ : ೦.೨೯ (೦.೨೮), ೧೯೬೨-೬೩ : ೦.೩೦ (೦.೩೬), ೧೯೬೩-೬೪ : ೦.೫೧ (೦.೪೦), ೧೯೬೪-೬೫ : ೦.೪೮ (೦.೫೫), ೧೯೮೫-೮೬ : ೪.೮೮ (೪.೬೮), ೧೯೮೭-೮೮ : ೪.೫೪ (೪.೯೪), ೧೯೮೯-೯೦ : ೫.೮೪ (೫.೦೮), ೧೯೯೧-೯೨ : ೫.೧೫ (೩.೬೭), ೧೯೯೪-೯೫ : ೭.೦೦ (೭.೮೯), ೧೯೯೫-೯೬ : ೭.೪೬ (೭.೪೧)

**ಪುರಸಭೆ, ಶಹಾಪುರ**

ಶಹಾಪುರದ ನಗರಾಡಳಿತ ವ್ಯವಸ್ಥೆಯು ಪ್ರಪ್ರಥಮವಾಗಿ ೧೯೪೫, ಜೂನ್ ೧೧ ರಂದು ಪುರಸಭೆಯ ರಚನೆಯೊಂದಿಗೆ ಪ್ರಾರಂಭವಾಯಿತು. ಮೊದಲಿಗೆ ಪುರಸಭೆಯು ತಹಸೀಲ ಕಛೇರಿಯ ಆಧೀನದಲ್ಲಿ ಕಾರ್ಯನಿರ್ವಹಿಸುತ್ತಿತ್ತು. ಸದಸ್ಯರ ಸಂಖ್ಯೆ ೯ ಆಗಿದ್ದು ಎಲ್ಲರೂ ನಾಮಕರಣಗೊಂಡವರಾಗಿದ್ದರು. ತಹಸೀಲದಾರರು ಪುರಸಭೆಯ ಅಧ್ಯಕ್ಷರಾಗಿದ್ದರು. ೧೯೫೪ರಲ್ಲಿ ತಹಸೀಲದಾರ ಕಛೇರಿಯಿಂದ ಪರುಸಭೆಯನ್ನು ಪ್ರತ್ಯೇಕಿಸಲಾಯಿತು. ಅಲ್ಲದೇ ಪುರಸಭೆಗೆ ಚುನಾವಣೆಗಳನ್ನು ನಡೆಸಲಾಯಿತು. ೧೮ ಜನ ಪ್ರತಿನಿಧಿಗಳಲ್ಲಿ ೧೨ ಜನರು ಚುನಾಯಿತರು, ಉಳಿದವರು ನಾಮಕರಣಗೊಂಡ ಸದಸ್ಯರಾಗಿದ್ದರು. ಪರಿಶಿಷ್ಟ ಜಾತಿಯರಿಗೆ ಒಂದು ಸ್ಥಾನ ಮೀಸಲಾಗಿತ್ತು. ರಾಜ್ಯ ಪುನರ್ ಘಟನೆಯ ನಂತರ ಪ್ರಥಮವಾಗಿ ೧೯೬೦ರಲ್ಲಿ ಚನಾವಣೆಗಳು ನಡೆದು ಪುರಸಭೆಯು ೧೫ ಜನ ಸದಸ್ಯರನ್ನು ಒಳಗೊಂಡಂತೆ ಪುನರ್ ರಚನೆಯಾಯಿತು. ಆ ಪೈಕಿ ಒಂದು ಸ್ಥಾನವನ್ನು ಪರಿಶಿಷ್ಟ ಜಾತಿಯವರಿಗೆ ಕಾಯ್ದಿಡಲಾಗಿತ್ತು.

ಇತ್ತೀಚೆಗೆ ೧೯೯೬ರಲ್ಲಿ ನಡೆದ ಪುರಸಭಾ ಚುನಾವಣೆಯಲ್ಲಿ ಚುಣಾಯಿತ ಸದಸ್ಯರ ಸಂಖ್ಯೆ ೨೩ ಆ ಪೈಕಿ ಸಾಮಾನ್ಯ ಸದಸ್ಯರು ೧೧, ಹಿಂದುಳಿದ ವರ್ಗ ಎ + ಬಿ ಸೇರಿ ೮, ಪರಿಶಿಷ್ಟ ಜಾತಿ ೩, ಒಂದು ನಾಮಕರಣ (ಪ. ಪಂ).

ಒಟ್ಟು ಸದಸ್ಯರಲ್ಲಿ ಮಹಿಳೆಯರ ಸಂಖ್ಯೆ ೮ ಆಗಿತ್ತು. ಪುರಸಭೆಯ ವಿಸ್ತೀರ್ಣ ೧೯೮೧ರಿಂದ ೧೯೯೫ರವರೆಗೆ ಆರು ಚ. ಕಿ. ಮಿ. ಇದ್ದು. ೧೯೯೧ರಲ್ಲಿ ನಗರದ ಜನಸಂಖ್ಯೆ ೨೪,೭೪೦ ಆಗಿದ್ದು ಮನೆಗಳ ಸಂಖ್ಯೆ ೬,೦೬೫ (೧೯೯೫) ಆಗಿತ್ತು. ಸದರಿ ವರ್ಷದಲ್ಲಿ (೧೯೯೧) ನಗರದ ಕರದಾತರ ಸಂಖ್ಯೆ ೪,೩೦೦ ಆಗಿದ್ದರೆ ಸರಾಸರಿ ಕರಭಾರ ರೂ. ೨೧೦ ಆಗಿತ್ತು. ೧೯೯೫ರಲ್ಲಿ ಕರದಾತರ ಸಂಖ್ಯೆ ೬,೦೬೫ ಆಗಿದ್ದು ಕರಭಾರ ರೂ. ೨೬೫ ಎಂದು ತಿಳಿದು ಬರುವುದು.

ಬಡಾವಣೆಗಳು : ಪುರಸಭೆಯ ವ್ಯಾಪ್ತಿಯಲ್ಲಿ ಇತ್ತೀಚಿನ ೧೦ ವರ್ಷಗಳಲ್ಲಿ ೮ ಬಡಾವಣೆಗಳು ರಚನೆಗೊಂಡಿವೆ. ಅವುಗಳಲ್ಲಿ ಸೈಯದ್ ಬಡಾವಣೆ, ಮಾಲೀಪಾಟೀಲ ಬಡಾವಣೆ, ಬುಡನ್ ಬಡಾವಣೆ, ಖಮರ್ ಬಡಾವಣೆ, ಆಶ್ರಯ ಬಡಾವಣೆ, ದೇಶಮುಖ ಬಡಾವಣೆ ಮೊದಲಾದುವುಗಳು. ಈ ಬಡಾವಣೆಗಳ ಜನವಸತಿ ಸುಮಾರು ೮೦೦೦ ಇದ್ದು ಇವುಗಳ ಅಭಿವೃದ್ಧಿಗೆ ಪುರಸಭೆ ಮಾಡಿದ ವೆಚ್ಚ ರೂ. ೫.೦೦ ಲಕ್ಷ.

**ಕುಡಿಯುವ ನೀರಿನ ಯೋಜನೆ**

ಶಹಾಪುರಕ್ಕೆ ಪ್ರಾರಂಭದಿಂದ ಬಾವಿಗಳೇ ಕುಡಿಯುವ ನೀರನ್ನು ಒದಗಿಸುವ ಜಲ ಮೂಲಗಳಾಗಿವೆ. ೧೯೬೫-೬೬ರ ಸುಮಾರಿಗೆ ಪುರಸಭೆಯು ಸುರಕ್ಷಿತ ಕುಡಿಯುವ ನೀರನ್ನು ನಳಗಳ ಮೂಲಕ ಒದಗಿಸುವ ಪ್ರಥಮ ಯೋಜನೆಯನ್ನು ರೂಪಿಸಿದಂತೆ ತಿಳಿದು ಬರುವುದು. ಬೆಳೆಯುತ್ತಿರುವ ನಗರದ ಹೆಚ್ಚುತ್ತಿರುವ ನೀರಿನ ಬೇಡಿಕೆಯನ್ನು ಪೂರೈಸಲು ಸಹಾಯಕವಾಗುವಂತೆ ಹೆಚ್ಚುವರಿ ನೀರು ಪೂರೈಕೆ ಯೋಜನೆಯನ್ನು ರೂ. ೪೪೨ ಲಕ್ಷ ಅಂದಾಜು ವೆಚ್ಚದಲ್ಲಿ ರೂಪಿಸಿ (೧೯೯೧-೯೨) ಪ್ರಾರಂಭಿಸಲಾಯಿತು. ಯೋಜನೆಯ ಅಂತರಗತಹ ಅಳವಡಿಸಲಾದ ಕೆಲವು ಕಾಮಗಾರಿಗಳನ್ನು ಮಾಡಿಪೂರೈಸಲಾಗಿದೆ. ಯೋಜನೆಯು ಇನ್ನೂ ಪೂರ್ಣಗೊಂಡಿರುವುದಿಲ್ಲ. ಈ ಹೆಚ್ಚುವರಿ ನೀರು ಪೂರೈಕೆ ಯೋಜನೆಯಲ್ಲಿ ಕೃಷ್ಣಾ ಮೇಲ್ದಂಡೆ ಯೋಜನೆಯ ಶಹಾಪುರ ಶಾಖಾ ಕಾಲುವೆಯಿಂದ ನೀರನ್ನು ಒದಗಿಸಲಾಗುವುದು (ಇದು ಶಹಾಪುರದಿಂದ ೩ ಕಿ. ಮಿ. ದೂರದಲ್ಲಿದೆ). ಹೊಸ ಯೋಜನೆಯು ೧೧೫ ದಶಲಕ್ಷ ಗ್ಯಾಲನ್ ಸಾಮರ್ಥ್ಯದ ನೀರು ಶೇಖರಣಾ ಜಲಾಶಯ ಮತ್ತು ಹೊಸದಾಗಿ ನಾಲ್ಕು ಲಕ್ಷ ಗ್ಯಾಲನ್ ಸಾಮರ್ಥ್ಯದ ಶುದ್ಧಿಕರಿಸಿದ ನೀರಿನ ಸಂಗ್ರಹಣಾ ಜಲಾಗಾರಗಳನ್ನು ಒಳಗೊಂಡಿರುವವು. ಇದುವರೆಗೆ ಈ ಯೋಜನೆಗೆ ಆದ ವೆಚ್ಚ ರೂ. ೩೫೪.೪೦ ಲಕ್ಷ ಎಂದು ತಿಳಿದು ಬರುವುದು. ಈ ಯೋಜನೆಯು ಪೂರ್ಣಗೊಂಡಾಗ ಪ್ರತಿದಿನ ತಲಾ ಸರಾಸರಿ ೨೫ ಗ್ಯಾಲನಗಳಂತೆ (೨೦೧೧ ವರ್ಷದಲ್ಲಿ ಹೆಚ್ಚಳಗೊಳ್ಳಬಹುದಾದ ಅಂದಾಜು ೪೦,೦೦೦ ಜನಸಂಖ್ಯೆಯ ಲೆಕ್ಕದಲ್ಲಿ) ಪೂರೈಸಬಹುದು ಎಂದು ಅಂದಾಜು ಮಾಡಲಾಗಿದೆ.

ಸದ್ಯದ ಪರಿಸ್ಥಿತಿಯಲ್ಲಿ ಶಹಾಪುರಕ್ಕೆ ಪ್ರತಿದಿನ ಸುಮಾರು ೪೫,೦೦೦ ರಿಂದ ೫೦,೦೦೦ ಗ್ಯಾಲನ್ ನೀರಿನ ಸರಬರಾಜಗುತ್ತಿದ್ದು ತಲಾವಾರು ಮೂರು ಗ್ಯಾಲನ್ ನೀರಿನ ಹಂಚಿಕೆಯಾಗುತ್ತಿದೆ. ನಗರದಲ್ಲಿ ಇರುವ ಖಾಸಗಿ ನಳಗಳ ಸಂಖ್ಯೆ ೭೮೬ ಆಗಿದ್ದರೆ, ಸಾರ್ವಜನಿಕ ನಳಗಳ ಸಂಖ್ಯೆ ೧೬೫ ಆಗಿರುವುದು. ನೀರು ಪೂರೈಕೆಯಿಂದ ಪುರಸಭೆಗೆ ವಾರ್ಷಿಕ ರೂ. ೧.೪೫ ಲಕ್ಷ ವೆಚ್ಚವಾಗುತ್ತಿದ್ದರೆ, ನೀರಿನ ತೆರಿಗೆಯ ರೂಪದಲ್ಲಿ ಸಂದಾಯವಾಗುವ ಹಣ ರೂ. ೨೫,೦೦೦ ರಿಂದ ೩೦,೦೦೦. ನಗರದ ನೈರ್ಮಲ್ಯ ಕಾಪಾಡಲು ಸಹಾಯಕವಾಗುವಂತೆ ೩೦ ಪೌರ ಕಾರ್ಮಿಕರು ಮತ್ತು ಇತರ ಸಿಬ್ಬಂದಿ ಇರುವರು. ಪುರಸಭೆಯು ಸಾರ್ವಜನಿಕ ಸೌಕರ್ಯಕ್ಕಾಗಿ ಮತ್ತು ನಗರ ಸೌಂದರ್ಯವನ್ನು ಹೆಚ್ಚಿಸಲು ಉದ್ಯಾನವನಗಳನ್ನು ಅಭಿವೃದ್ಧಿ ಪಡಿಸಲು ಐದು ಲಕ್ಷ ರೂ. ವೆಚ್ಚದಲ್ಲಿ ಕ್ರೀಯಾ ಯೋಜನೆಯನ್ನು ರೂಪಿಸಿದೆ. ಪುರಸಭೆಯು ೧೯೬೫ರಲ್ಲಿ ರಾಷ್ಟ್ರಪತಿ ಪಾರ್ಕ್ ಎಂಬ ಹೆಸರಿನ ಉದ್ಯಾನವನವನ್ನು ಸಾರ್ವಜನಿಕ ಮನರಂಜನೆಗೆ ಮತ್ತು ಒಂದು ಉಚಿತ ವಾಚನಾಲಯವನ್ನು ಹೊಂದಿದ್ದಾಗಿ ತಿಳಿದು ಬರುವುದು. ಪುರಸಭೆಯು ನಗರದಲ್ಲಿ ೧೯ ಕೊಳಚಿ ಪ್ರದೇಶಗಳನ್ನು ಗುರುತಿಸಿದೆ. ನಗರ ಮಿತಿಯಲ್ಲಿರುವ ಎಲ್ಲಾ ಬಗೆಯ ರಸ್ತೆಗಳ ಒಟ್ಟು ಉದ್ದ ೨೧ ಕಿ.ಮೀ. ಆ ಪೈಕಿ ೩ ಕಿ.ಮೀ. ಉದ್ದದ ಡಾಂಬರ ರಸ್ತೆಯಿರುವುದು. ಇತ್ತೀಚಿನ ಐದು ವರ್ಷಗಳಲ್ಲಿ ಪುರಸಭೆಯು ಎರಡು ಕಿ. ಮಿ. ಉದ್ದದ ಚರಂಡಿ ನಿರ್ಮಿಸಿದ್ದು ಅದಕ್ಕಾಗಿ ಖರ್ಚು ಮಾಡಿದ ಹಣ ರೂ. ೧೦ ಲಕ್ಷ. ಪಟ್ಟಣಕ್ಕೆ ೧೯೬೪ ಡಿಸೆಂಬರ್‌ನಲ್ಲಿ ಪ್ರಥಮ ಬಾರಿಗೆ ಕೆ.ಇ.ಬಿಯಿಂದ ವಿದ್ಯುತ್ ಒದಗಿಸಲಾಯಿತು. ಇಂದು ನಗರದಲ್ಲಿ ೬,೫೨೦ ಮನೆ ದೀಪಗಳ ಸಂಪರ್ಕಗಳು, ೮೫೧ ಬೀದಿ ದೀಪಗಳು, ೩೮ ವಾಣಿಜ್ಯ ಅಳವಡಿಕೆಗಳು, ಆರು ಕೈಗಾರಿಕಾ ಅಳವಡಿಕೆಗಳು ಉಂಟು. ೧೯೬೫ರಲ್ಲಿ ೨೫ ಗ್ಯಾಸುಗಳು (ಪೆಟ್ರೊಮ್ಯಾಕ್ಸ್), ೪೨ ಕಂದಿಲು(ಲಾಟೀನ್ನುಗಳನ್ನು)ಗಳನ್ನು ಪುರಸಭೆಯು ಬೀದಿ ದೀಪದ ವ್ಯವಸ್ಥೆಗೆ ಉಪಯೋಗಿಸುತ್ತಿತ್ತು.

## ಹಣಕಾಸು

೧೯೬೫ ನವೆಂಬರ್ ೧೫ ರಿಂದ ಪುರಸಭೆಯು ಆಕ್ಟ್ರಾಯ ವಸೂಲಿಯನ್ನು ಜಾರಿಯಲ್ಲಿ ತಂದ ಬಗ್ಗೆ ತಿಳಿದು ಬರುವುದು. ಜಕಾತಿ ರದ್ದಾಗುವ ಮೂರು ವರ್ಷಗಳ ಪೂರ್ವದಲ್ಲಿ (೧೯೭೬-೭೯) ಈ ಮೂಲದಿಂದ ಸಂದಾಯವಾದ ಕ್ರೋಢೀಕೃತ ಆದಾಯ ರೂ. ೧೬.೬೩ ಲಕ್ಷ ಆಗಿದ್ದರೆ ೧೯೯೨-೯೩ರಿಂದ ೧೯೯೪-೯೫ ಆವದಿಯಲ್ಲಿ (ಕ್ರೋಡಿಕೃತ) ಸರ್ಕಾರ ನೀಡಿದ ಆಕ್ಟ್ರಾಯ ಅನುದಾನ ರೂ. ೧೮.೩೭ ಲಕ್ಷ ಆಗಿದ್ದರೆ ಅಭಿವೃದ್ಧಿ ಅನುದಾನ ರೂ. ೭.೨೧ ಲಕ್ಷ ಆಗಿತ್ತು. ಪುರಸಭೆಯು ಪರಿಶಿಷ್ಟ ಜಾತಿ : ಪರಿಶಿಷ್ಟ ಪಂಗಡದವರ ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳಿಗಾಗಿ ಖರ್ಚುಮಾಡಿ ಹಣ ೧೯೯೨-೯೩ರಲ್ಲಿ ರೂ. ೫೦,೦೦೦ ಆಗಿದ್ದರೆ, ೧೯೯೩-೯೪ ಮತ್ತು ಅದರ ಮುಂದಿನ ವರ್ಷ ಕ್ರಮವಾಗಿ ರೂ. ೬೫,೦೦೦ ಮತ್ತು ರೂ. ೭೫,೦೦೦ ಆಗಿತ್ತು. ಪುರಸಭೆಯು ವಿವಿಧ ಆದಾಯ ಮೂಲದ ಆಸ್ತಿಗಳನ್ನು ಹೊಂದಿರುವುದು. ಆ ಪೈಕಿ ೩೬ ವ್ಯಾಪಾರ ಮಳಿಗೆಗಳಿಂದ ವಾರ್ಷಿಕ ರೂ. ೯೬,೦೦೦ ಮತ್ತು ಬಜಾರ ಗುತ್ತಿಗೆ ಆದಾಯದಿಂದ ರೂ. ೫.೪೪ಲಕ್ಷ (೧೯೯೬-೯೭), ದನಗಳ ವಧಾಲಯದಿಂದ ರೂ. ೬,೫೦೦, ಕುರಿಗಳ ವಧಾಲಯದಿಂದ ರೂ. ೭,೦೦೦ ಸಂದಾಯವಾದರೆ, ವಾಹನ ತೆರಿಗೆಯಿಂದ ರೂ. ೧೮,೦೦೦, ಟೋಲ್ ಟ್ಯಾಕ್ಸ್‌ದಿಂದ ರೂ. ೧೭,೫೦೦ ಸಂದಾಯವಾಗುವುದಾಗಿ ವರದಿಯಾಗಿದೆ. ೧೯೯೪-೯೫, ೧೯೯೫-೯೬ ಮತ್ತು ೧೯೯೬-೯೭ರಲ್ಲಿ ಪುರಸಭೆಯು ಪಡೆದ ಆಕ್ಟ್ರಾಯ ಅನುದಾನ ಕ್ರಮವಾಗಿ ರೂ. ೯.೪೩ ಲಕ್ಷ, ೭.೪೯ ಮತ್ತು ರೂ. ೧೩.೯೩ ಲಕ್ಷ ಆಗಿದ್ದರೆ, ವಾಹನ ತೆರಿಗೆ ಅನುದಾನ ೧೯೯೪-೯೫ ಮತ್ತು ೧೯೯೫-೯೬ ರಲ್ಲಿ ಕ್ರಮವಾಗಿ ರೂ. ೨.೨೫ ಲಕ್ಷ ಮತ್ತು ರೂ. ೪.೫೦ ಲಕ್ಷ ಆಗಿತ್ತು. ಮನರಂಜನಾ ಅನುದಾನ ೧೯೯೪-೯೫ ರಲ್ಲಿ ರೂ. ೧.೦೯ ಲಕ್ಷ ಆಗಿದ್ದರೆ. ಅದರ ಮುಂದಿನ ವರ್ಷ ರೂ. ೧.೨೧ ಲಕ್ಷ ಆಗಿತ್ತು. ೧೯೯೬-೯೭ರಲ್ಲಿ ಇದು ರೂ. ೯೦,೭೪೭ ಆಗಿತ್ತು.

## ಬಹುಮಾನಿತ ಪುರಸಭೆ

೧೯೮೯-೯೦ ಮತ್ತು ೧೯೯೦-೯೧ರಲ್ಲಿ ಈ ಪುರಸಭೆಯು ರಾಜ್ಯಮಟ್ಟದಲ್ಲಿ ಉತ್ತಮ ಪುರಸಭೆ ಎಂದು ಎರಡನೆಯ ಬಹುಮಾನ (ಪ್ರತಿವರ್ಷ ರೂ. ೨ ಲಕ್ಷದಂತೆ) ಪಡೆದ ಹಿರಿಮೆಯನ್ನು ಹೊಂದಿದೆ. ಸದರಿ ಬಹುಮಾನದ ಹಣವನ್ನು ಮತ್ತು ತನ್ನ ನಿಧಿಯನ್ನು ಸೇರಿಸಿ ರೂ. ೩.೫೦ ಲಕ್ಷ ವೆಚ್ಚದಲ್ಲಿ (೧೯೮೯-೯೦) ಪುರಸಭೆಯ ಕಛೇರಿಯ ನೆಲಮಹಡಿ ಕಟ್ಟಡ ಕಟ್ಟಲಾಯಿತು. ಆದರ ಮುಂದಿನ ವರ್ಷ ರೂ. ನಾಲ್ಕು ಲಕ್ಷ ವೆಚ್ಚದಲ್ಲಿ ಹೆಚ್ಚುವರಿ ಕಟ್ಟಡ ಕಟ್ಟಲಾಯಿತು. ಕೇಂದ್ರ ಸರ್ಕಾರದ ಯೋಜನೆಯಾದ ಸಣ್ಣ ಮತ್ತು ಮಧ್ಯಮ ಪಟ್ಟಣಗಳ ಅಭಿವೃದ್ಧಿ ಯೋಜನೆಯ ಅಡಿಯಲ್ಲಿ ಈ ಪಟ್ಟಣವನ್ನು ೧೯೮೨-೮೩ರಲ್ಲಿ ಸೇರಿಸಲಾಯಿತು. ರಾಜ್ಯ ಸರ್ಕಾರವು ಈ ಯೋಜನೆಯ ಅಡಿಯಲ್ಲಿ ಒಟ್ಟು ರೂ. ೬೭.೪೭ ಲಕ್ಷ ವಿವಿಧ ಅಭಿವೃದ್ಧಿ ಯೋಜನೆಗಳಿಗೆ ಮಂಜೂರು ಮಾಡಿರುವದು. ಈ ಯೋಜನೆಯ ಅಡಿಯಲ್ಲಿ ಪುರಸಭೆಯು ನಿವೇಶನಗಳನ್ನು ನಿರ್ಮಿಸಿ ಹರಾಜು ಮೂಲಕ ಹಂಚಿ ರೂ. ೪೩ ಲಕ್ಷ ಆದಾಯ ಪಡೆಯುವುದರೊಂದಿಗೆ ೩೧ ಮಳಿಗೆಗಳನ್ನು ಕಟ್ಟಿಸಿತು.

೧೯೯೪-೯೫ ಮತ್ತು ೧೯೮೯-೯೦ರಲ್ಲಿ ವಿವಿಧ ಅಭಿವೃದ್ಧಿ ಕಾರ್ಯಗಳಿಗೆ ಪುರಸಭೆ ಮಾಡಿದ ವೆಚ್ಚದ ತುಲನಾತ್ಮಕ ವಿವರ ಈ ಮುಂದಿನಂತೆ ಇರುವುದು. ಆವರಣದಲ್ಲಿನ ಸಂಖ್ಯೆಯು ೧೯೮೯-೯೦ರ ವೆಚ್ಚವನ್ನು ಸೂಚಿಸುವುದು. ಜನಾರೋಗ್ಯ ಮತ್ತು ನೈರ್ಮಲ್ಯ ರೂ. ೬೫,೦೦೦ (೨೦,೦೦೦), ಸಾರ್ವಜನಿಕ ಕಾಮಗಾರಿಗಳು ರೂ. ೧ ಲಕ್ಷ (ಇಲ್ಲ), ನೀರು ಸರಬರಾಜು ರೂ. ೧.೫೦ ಲಕ್ಷ (೫೦,೦೦೦), ರಸ್ತೆ ಮತ್ತು ದೀಪಗಳ ನಿರ್ವಹಣೆ ರೂ. ೧ ಲಕ್ಷ (೪೦,೦೦೦), ಚರಂಡಿ ಮತ್ತು ಸಾಂಕ್ರಾಮಿಕ ರೋಗ ೭೫,೦೦೦ (೫೦,೦೦೦), ಸಿಬ್ಬಂದಿ ಪ್ರಭಾರ ರೂ. ೮೬,೮೫೬ (೮೬,೮೫೬) ಮತ್ತು ಇತರೇ ರೂ. ೧.೫೦ ಲಕ್ಷ (೭೫,೦೦೦).

೧೯೬೧-೬೨ರಿಂದ ೧೯೬೪-೬೫ರ ಅವಧಿಯಲ್ಲಿ ಮತ್ತು ೧೯೮೫-೮೬ರಿಂದ ೯೫-೯೬ರವರೆಗಿನ ಕೆಲವು ವರ್ಷಗಳ ಪುರಸಭೆಯ ಆದಾಯ ವೆಚ್ಚಗಳು ಈ ಮುಂದಿನಂತೆ ಇದ್ದವು. ಆವರಣದಲ್ಲಿರುವ ಸಂಖ್ಯೆ ವೆಚ್ಚವನ್ನು ಸೂಚಿಸುವುದು. ೧೯೬೧-೬೨ ; ೪೯,೭೩೩ (೪೦,೬೬೮), ೧೯೬೨-೬೩ ; ೪೪,೭೫೫ (೭೫,೬೩೨), ೧೯೬೩-೬೪ ; ೬೯,೨೫೧ (೬೪,೨೮೯), ೧೯೬೪-೬೫ ; ೬೯,೯೬೨ (೬೧,೮೬೯), ೧೯೮೫-೮೬ ; ೪.೭೦ ಲಕ್ಷ (೫.೫೭ ಲಕ್ಷ), ೧೯೮೭-೮೮ ; ೩೫.೮೦ ಲಕ್ಷ (೧೮.೦೪ ಲಕ್ಷ),

೧೯೮೯-೯೦ ೧೪.೩೧ ಲಕ್ಷ (೧೩.೩೦ ಲಕ್ಷ), ೧೯೯೧-೯೨ ; ೨೧.೬೭ ಲಕ್ಷ (೧೯.೯೭ ಲಕ್ಷ), ೧೯೯೩-೯೪ ; ೨೧.೭೮ ಲಕ್ಷ (೨೧.೧೬ ಲಕ್ಷ), ೧೯೯೪-೯೫ ; ೨೭.೨೬ ಲಕ್ಷ (೨೬.೭೬ಲಕ್ಷ), ೧೯೯೫-೯೬ ; ೩೧.೮೯ ಲಕ್ಷ (೩೦.೦೫ ಲಕ್ಷ).

**ಪುರಸಭೆ - ಶಹಾಬಾದ್**

ಜಹಗೀರು ತಾಲ್ಲೂಕಿನ ಕೇಂದ್ರವಾಗಿದ್ದ ಶಹಾಬಾದ್‌ಗೆ ೧೯೫೨ರಷ್ಟು ಪೂರ್ವದಲ್ಲಿಯೇ ಪ್ರಥಮ ಬಾರಿಗೆ ಪುರಸಭೆಯನ್ನು ರಚಿಸಲಾಯಿತು. ಅಂದಿನ ಪುರಸಭೆ ಎರಡು ಮೀಸಲು ಸ್ಥಾನಗಳನ್ನು ಒಳಗೊಂಡಂತೆ ೨೦ ಜನ ಸದಸ್ಯರನ್ನು ಒಳಗೊಂಡಿತ್ತು. ಇಂದಿನ ಪುರಸಭೆಯ ವ್ಯಾಪ್ತಿಯು ಎಚ್.ಎಂ.ಪಿ ಮತ್ತು ಎ.ಬಿ.ಬಿ ಕಂಪನಿಗಳು ಒಡೆತನ ಹೊಂದಿರುವ ವಿಶಾಲವಾದ ಕೈಗಾರಿಕಾ ಪ್ರದೇಶವನ್ನು ಹೊರತುಪಡಿಸಿ ಇತರ ಪ್ರದೇಶಗಳಿಗೆ ಸೀಮಿತವಾಗಿರುವುದು. ಈ ಕುರಿತು ೧೯೫೬ ಅಕ್ಟೋಬರ್ ೩೦ ರಂದು ಅಂದಿನ ಎ.ಸಿ.ಸಿ ಕಂಪನಿ ಮತ್ತು ಪರಸಭೆಗಳ ನಡುವೆ ಒಪ್ಪಂದವಾಗಿರುವುದು. ೧೯೬೧ರಲ್ಲಿ ಪುರಸಭೆಯ ಕಾರ್ಯವ್ಯಾಪ್ತಿ ಅಂದಾಜು ಐದು ಚ. ಕಿ.ಮೀ. ಆಗಿದ್ದರೆ ಜನಸಂಖ್ಯೆ ೨೦,೪೧೬ ಆಗಿತ್ತು. ಕರ್ನಾಟಕ ಮುನಸಿಪಾಲಿಟಿಗಳ ಅದಿನಿಯಮ ೧೯೬೪ರ ಅನ್ವಯ ಪುರಸಭೆಗೆ ಇತ್ತೀಚಿನ ಚುಣಾವಣೆಗಳು ೧೯೬೮ರ ಪ್ರಾರಂಭದಲ್ಲಿ ನಡೆದವು. ಒಟ್ಟು ಸದಸ್ಯರ ಸಂಖ್ಯೆ ೨೭, ಆ ಪೈಕಿ ೧೦ ಜನ ಸಾಮಾನ್ಯ ಸದಸ್ಯರು, ೯ ಜನ ಹಿಂದುಳಿದ ವರ್ಗದವರು, ೮ ಜನ ಪ.ಜಾ/ಪ.ಪಂ.ಕ್ಕೆ ಸೇರಿದವರಾಗಿದ್ದರು. ಒಟ್ಟು ಮಹಿಳೆಯರ ಸಂಖ್ಯೆ ೧೦. ಅಧಿಸೂಚಿತ ಪ್ರದೇಶವನ್ನು ಹೊರತುಪಡಿಸಿ ನಗರದ ವಿಸ್ತೀರ್ಣ ೫.೫ ಚ. ಕಿಮೀ ಇದ್ದು ನಗರ ವ್ಯಾಪ್ತಿಯಲ್ಲಿರುವ ಮನೆಗಳ ಸಂಖ್ಯೆ ೧೨,೬೫೦ ನಗರದ ಜನಸಂಖ್ಯೆ ೧೯೯೧ರಲ್ಲಿ ೪೪,೧೪೨, ಸರಾಸರಿ ಕರಭಾರ ೧೯೯೫ರಲ್ಲಿ ರೂ. ೨೮ ಆಗಿತ್ತು.

ಶಹಾಬಾದ್ ಎ.ಸಿ.ಸಿ. ಕಂಪನಿ ನಿಯಂತ್ರಣದಲ್ಲಿ ಇರುವ ಅಧಿಸೂಚಿತ ಪ್ರದೇಶದ ಜನ ಸಂಖ್ಯೆ ೧೯೯೧ರಲ್ಲಿ ೮.೪೨೪ ಆಗಿತ್ತು. ಮನೆಗಳ ಸಂಖ್ಯೆ ೧,೯೪೬. ಅಧಿಸೂಚಿತ ಪ್ರದೇಶದ ಕಾರ್ಯವ್ಯಾಪ್ತಿ ಸುಮಾರು ೧೧ ಚ. ಕಿ. ಮಿ. ಪ್ರದೇಶವನ್ನು ವ್ಯಾಪಿಸಿರುವುದು. ಬೆಳೆಯುತ್ತಿರುವ ನಗರವನ್ನು ನಿಯಂತ್ರಿಸಲು ಸಹಾಯಕವಾಗುವಂತೆ ನಗರ ಯೋಜನೆ ನಿಯಮಾವಳಿಗಳನ್ನು ೧೯೮೭ರಿಂದ ಜಾರಿಯಲ್ಲಿ ತರಲಾಗಿದೆ. ಈ ಕೈಗಾರಿಕಾ ನಗರವು ತೀವ್ರಗತಿಯಿಂದ ಬೆಳೆಯುತ್ತಿದ್ದು ಇತ್ತೀಚೆಗೆ ಅಶೋಕ ನಗರ, ಶರಣ ನಗರ, ಮಿಲ್ಲತನಗರ, ರಹಮತ್ ನಗರ, ಬಾರಿನಗರ, ಬಂಜಾರಾ ನಗರ, ಮುಂತಾದ ಹೊಸ ಬಡಾವಣೆಗಳು ರಚನೆಗೊಂಡಿರುವವು.

**ಕುಡಿಯುವ ನೀರಿನ ಯೋಜನೆ**

ನಗರದ ಹೊರವಲಯದಲ್ಲಿ ಅತೀ ಸಮೀಪದಲ್ಲಿ ಹರಿಯುತ್ತಿರುವ ಕಾಗಿನಾನದಿಯು ಕುಡಿಯುವ ನೀರಿನ ಮೂಲವಾಗಿರುವುದು. ೧೯೬೫ರಲ್ಲಿ ನಗರ ಪ್ರದೇಶದಲ್ಲಿ ೨೧ ಸಾರ್ವಜನಿಕ ನಳಗಳು, ೨೬೭ ಖಾಸಗಿ ನಳಗಳು ಇದ್ದುದಾಗಿ ತಿಳಿದು ಬರುವುದು. ಬೆಳೆಯುತ್ತಿರುವ ನಗರದ ಹೆಚ್ಚುತ್ತಿರುವ ನೀರಿನ ಬೇಡಿಕೆಗಳನ್ನು ಪೂರೈಸಲು ಸಹಾಯಕವಾಗುವಂತೆ ನೀರಿನ ಪ್ರಮಾಣವನ್ನು ವೃದ್ಧಿಸುವ ಯೋಜನೆಗಳನ್ನು ೧೯೮೩ರಲ್ಲಿ ರೂಪಿಸಲಾಯಿತು. ಯೋಜನೆಯು ಕ.ನ.ನಿ.ಸ ಮಂಡಳಿಯಿಂದ ನಿರ್ವಹಿಸಲ್ಪಟ್ಟು ೧೯೯೪ ರಲ್ಲಿ ಸಂಪೂರ್ಣ ಗೊಳಿಸಲಾಗಿದೆ. ಈ ಯೋಜನೆಯ ವೆಚ್ಚ ೧೯೯೭ ಮಾರ್ಚ್‌ವರೆಗೆ ರೂ. ೨೭೯ ಲಕ್ಷ ಎಂದು ವರದಿಯಾಗಿದೆ. ಈಗ ಪ್ರತಿದಿನ ಸರಾಸರಿ ತಲಾ ೪೫ ಲೀಟರ್ ನೀರು ಸರಬರಾಜಾಗುತ್ತಿದ್ದು, ನಗರದಲ್ಲಿ ೧೯೯೫ರಲ್ಲಿ ೨,೧೯೪ ಖಾಸಗಿ ನಳಗಳು, ೧೫೦ ಸಾರ್ವಜನಿಕ ನಳಗಳು ಇದ್ದವು. ನಗರದ ನಿರ್ಮಲೀಕರಣಕ್ಕೆ ೩೮ ಜನ ಪೌರಕಾರ್ಮಿಕರು ಕಾರ್ಯನಿರ್ವಹಿಸುತ್ತಿರುವರು. ನಗರದಲ್ಲಿರುವ ಒಟ್ಟು ರಸ್ತೆಗಳ ಉದ್ದ ೫ ಕಿ. ಮಿ. ಪುರಸಭೆಯು ೧೯೬೫ರಲ್ಲಿ ಒಂದು ಉದ್ಯಾನವನವನ್ನು ಮತ್ತು ಉಚಿತ ವಾಚನಾಲಯವನ್ನು ನಿರ್ವಹಿಸುತ್ತಿತ್ತು ಎಂದು ದಾಖಲೆಗಳಿಂದ ತಿಳಿದುಬರುವುದು. ನಗರಕ್ಕೆ ಪ್ರಥಮವಾಗಿ ಒಂದನೇ ಜುಲೈ ೧೯೫೫ರಂದು ವಿದ್ಯುದ್ದೀಕರಣ ಮಾಡಲಾಯಿತು. ನಗರದಲ್ಲಿ ೧೯೬೫ರಲ್ಲಿ ೨೫೬ ಬೀದಿ ದೀಪಗಳು ಇದ್ದವು. ಪ್ರಾರಂಭದಲ್ಲಿ ವಿದ್ಯುತ್ತನ್ನು ಎ.ಸಿ.ಸಿ. ಕಂಪನಿಯವರು ಅವರದೇ ಆದ ಥರ್ಮಲ್ ಪಾವರಸ್ಟೇಶನದಿಂದ ಉತ್ಪಾದಿಸುತ್ತಿದ್ದುರು. ೧೯೬೪ರ ಸೆಪ್ಟೆಂಬರ್ ೪ ರಿಂದ ಶರಾವತಿಯ ಜಲವಿದ್ಯುತ್ತನ್ನು ಪೂರೈಸಲಾಯಿತು. ಇಂದು (೧೯೯೬) ಇರುವ ಬೀದಿ ದೀಪಗಳ ಸಂಖ್ಯೆ ೧,೨೦೦, ಮನೆ ದೀಪಗಳ ಸಂಖ್ಯೆ ೪,೬೫೨; ಕೈಗಾರಿಕೆ ಹಾಗೂ ವಾಣಿಜ್ಯ ಅಳವಡಿಕೆಗಳ ಸಂಖ್ಯೆ ಕ್ರಮವಾಗಿ ೧೯೬ ಮತ್ತು ೯೯೦. ಇತ್ತೀಚೆಗೆ ನಗರದಲ್ಲಿ ಕೊಳಗೇರಿಗಳ ಸಂಖ್ಯೆ ಹೆಚ್ಚುತ್ತಿದ್ದು ಸುಮಾರು ೧೦,೫೦೦ ಜನರು ಕೊಳಚೆ ನಿವಾಸಿಗಳಾಗಿರುವರು. ಕೊಳಚೆ ನಿರ್ಮೂಲನಕ್ಕೆ ಇದುವರೆಗೆ

ಕೊಳಚೆ ನಿರ್ಮೂಲನಾ ಮಂಡಳಿಯು ರೂ. ೮ ಲಕ್ಷ ಖರ್ಚುಮಾಡಿದ್ದು ಅದರಲ್ಲಿ ಮೇಲಿನ ಮತ್ತು ಕೆಳಗಿನ ಮಡ್ಡಿ ಪ್ರದೇಶಗಳು ಸೇರಿವೆ.

ಹಣಕಾಸು : ಜಕಾತಿ ರದ್ದಾಗುವ ಮೂರು ವರ್ಷಗಳ ಪೂರ್ವದಲ್ಲಿ ಪುರಸಭೆಗೆ ೧೯೭೬-೭೭, ೧೯೭೭-೭೮ರಲ್ಲಿ ಪ್ರತಿ ವರ್ಷ ರೂ. ೨.೯೩ ಲಕ್ಷ ಜಕಾತಿ ಮೂಲಕ ಸಂದಾಯವಾಗಿದ್ದರೆ, ೧೯೭೮-೭೯ರಲ್ಲಿ ರೂ. ೬.೫೫ ಲಕ್ಷ ಸಂದಾಯವಾಗಿತ್ತು. ೧೯೯೪-೯೫ರಲ್ಲಿ ಸರ್ಕಾರದಿಂದ ಸಂದಾಯವಾದ ಜಕಾತಿ ಅನುದಾನ ರೂ. ೬.೫೫ ಲಕ್ಷ ಆಗಿತ್ತು.

ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡದವರ ಶ್ರೇಯೋಭಿವೃದ್ಧಿಗೆ ಮೀಸಲಾದ ಶೇ. ೧೮ ರ ಆಯವ್ಯಯದಲ್ಲಿ ೧೯೯೨-೯೩ನೇ ಸಾಲಿಗೆ ರೂ. ೮೮,೦೦೦ ಪೈಕಿ ಖರ್ಚುಮಾಡಿದ ಹಣ ರೂ. ೧೮,೦೦೦, ಆದರ ಮುಂದಿನ ಸಾಲಿಗೆ ಮೀಸಲಾದ ಹಣ ರೂ. ೬೦,೦೦೦ ಪೈಕಿ ಖರ್ಚಾದ ಹಣ ರೂ. ೧೨,೦೦೦ ಆಗಿತ್ತು. ೧೯೯೪-೯೫ರಲ್ಲಿ ಈ ಮೊತ್ತಗಳು ಅನುಕ್ರಮವಾಗಿ ರೂ. ೬೮,೦೦೦ ಮತ್ತು ೧೦,೦೦೦ ಎಂದು ವರದಿ ತಿಳಿಸುವುದು. ೧೯೯೪-೯೫ರಲ್ಲಿ ಪುರಸಭೆಯು ಕೆಲವು ಪ್ರಮುಖ ಬಾಬುಗಳಿಗೆ ಮಾಡಿದ ವೆಚ್ಚದ ವಿವರ ಈ ರೀತಿ ಇತ್ತು. ನೀರು ಸರಬರಾಜು ರೂ. ೨.೮೦ ಲಕ್ಷ, ರಸ್ತೆ ಮತ್ತು ದೀಪಗಳ ನಿರ್ವಹಣೆ ರೂ. ೯೩,೦೦೦, ಚರಂಡಿ ಮತ್ತು ಸಾಂಕ್ರಾಮಿಕ ರೋಗ ತಡೆ ರೂ. ೫೮,೧೦೦, ಇತರೇ ೨೯,೭೦೦. ಪುರಸಭೆಯಲ್ಲಿ ೧೯೯೫-೯೬ರಲ್ಲಿದ್ದಂತೆ ಒಟ್ಟು ೫೫ ಸಿಬ್ಬಂದಿಗಳಿದ್ದು ಸಿಬ್ಬಂದಿ ಪ್ರಭಾರದ ವೆಚ್ಚ ರೂ. ೧೯.೮೭ ಲಕ್ಷವಾಗಿದ್ದಿತು.

**ಪುರಸಭೆ - ಸುರಪುರ**

ಐತಿಹಾಸಿಕ ನಗರವಾಗಿದ್ದ ಸುರಪುರದಲ್ಲಿ ನಗರಾಡಳಿತ ವ್ಯವಸ್ಥೆಯು ಪ್ರಪ್ರಥಮವಾಗಿ ೧೯೫೩ ನವೆಂಬರ್ ೧೯ ರಂದು ನಗರಸಭಾ ಸಮಿತಿಯನ್ನು ರಚಿಸುವ ಮೂಲಕ ಪ್ರಾರಂಭವಾಯಿತು. ಸಮಿತಿಯ ಸದಸ್ಯರ ಸಂಖ್ಯೆ ೨೪ ಆಗಿದ್ದು, ಆ ಪೈಕಿ ೧೭ ಚುನಾಯಿತರು, ಉಳಿದ ೭ ಜನರು ನಾಮಕರಣಗೊಂಡ ಸದಸ್ಯರಾಗಿದ್ದರು. ನಾಮಕರಣಗೊಂಡವರಲ್ಲಿ ಮೂವರು ಅಧಿಕಾರಿ ಸದಸ್ಯರು (ಸ್ಥಳೀಯ ವೈದ್ಯಾಧಿಕಾರಿ, ಸರ್ಕಾರಿ ಹೈಸ್ಕೂಲಿನ ಮುಖ್ಯೋಪಾಧ್ಯಯರು ಮತ್ತು ತಹಸಿಲದಾರ), ನಾಲ್ವರು ಅಧಿಕಾರೇತರರು ಇದ್ದರು. ಕರ್ನಾಟಕ ಮುನಸಿಪಾಲಿಟಿಗಳ ಅಧಿನಿಯಮ ೧೯೬೪ರ ಅನ್ವಯ ನಗರ ಸಭೆ (ಸಿಟಿ ಮುನಸಿಪಾಲಿಟಿ)ಯನ್ನು ಪುರಸಭೆ ಎಂದು ಪುನರ್ ನಾಮಕರಣಗೊಳಿಸಿ ೧೯೬೫ರಲ್ಲಿ ಪುನರ್ ರಚನೆಗೊಂಡಾಗ ಸದಸ್ಯರ ಸಂಖ್ಯೆ ೧೭ ಆಗಿತ್ತು. ಆ ಪೈಕಿ ಒಂದು ಸ್ಥಾನವನ್ನು ಪರಿಶಿಷ್ಟ ಜಾತಿಯವರಿಗೆ ಮೀಸಲಾಗಿ ಇಡಲಾಗಿತ್ತು.

ಪುರಸಭೆಯ ಕಾರ್ಯವ್ಯಾಪ್ತಿಯು ೧೯೬೫ರಲ್ಲಿ ಸುಮಾರು ೩ ಚ. ಮೈ. ವ್ಯಾಪಿಸಿದ್ದು ಅದು ನೆರೆಯ ರಂಗಂಪೇಟೆ ಮತ್ತು ತಿಮ್ಮಾಪುರ ಗ್ರಾಮಗಳನ್ನೂ ಸಹ ಒಳಗೊಂಡಿತ್ತು. ಇಂದೂ ಸಹ ಪುರಸಭೆಯ ಕಾರ್ಯವ್ಯಾಪ್ತಿ ಸುರಪುರ, ರಂಗಂಪೇಟೆ ಮತ್ತು ತಿಮ್ಮಾಪುರಗಳನ್ನು ಒಳಗೊಂಡಿರುವುದು. ೧೯೬೧ರಲ್ಲಿ ಸುರಪುರದ ಜನಸಂಖ್ಯೆ ೧೭,೨೮೨ ಆಗಿದ್ದರೆ ೧೯೬೫ರಲ್ಲಿ ನಗರದಲ್ಲಿದ್ದ ಕಟ್ಟಡಗಳ ಸಂಖ್ಯೆ ೫,೨೦೦ ಆಗಿತ್ತು. ೧೯೮೧ರಲ್ಲಿ ನಗರದ ಸರಹದ್ದು ೫.೮ ಚ. ಕಿ.ಮೀ ವ್ಯಾಪಿಸಿದ್ದರೆ ೪,೨೪೫ ಮನೆಗಳನ್ನು ಹೊಂದಿತ್ತು. ೧೯೯೧ರಲ್ಲಿ ನಗರದ ಜನ ಸಂಖ್ಯೆ ೩೦,೫೪೯ ಆಗಿತ್ತು,

**ನೀರು ಪೂರೈಕೆ**

ಪ್ರಾರಂಭದಿಂದಲೂ ಹೊಕ್ಕು ತುಂಬುವ (ಪಾವಟಿಗೆಗಳ) ಬಾವಿಗಳು ನಗರದ ಕುಡಿಯುವ ನೀರಿನ ಜಲಮೂಲಗಳಾಗಿರುವವು. ಸಾಮಾನ್ಯವಾಗಿ ಎತ್ತರ ಪ್ರದೇಶದಲ್ಲಿರುವ ಸುರಪುರ ಬಾವಿಗಳಿಗಿಂತ ತಗ್ಗು ಪ್ರದೇಶದಲ್ಲಿರುವ ರಂಗಂಪೇಟೆ ಮತ್ತು ತಿಮ್ಮಾಪುರಗಳ ಬಾವಿಯ ನೀರು ಸಿಹಿಯಾಗಿರುವುದು. ಬೇಸಿಗೆಯಲ್ಲಿ ಸುರಪುರವು ನೀರಿನ ತೊಂದರೆಯನ್ನು ಅನುಭವಿಸುವುದು ಸಾಮಾನ್ಯವಾಗಿರುವುದು. ೧೯೬೫ರಲ್ಲಿ ಸುರಪುರದಲ್ಲಿ ೨೬ ಸಾರ್ವಜನಿಕ ಸಿಹಿನೀರಿನ ಬಾವಿಗಳು, ನಾಲ್ಕು ಖಾಸಗಿ ಸಿಹಿನೀರಿನ ಬಾವಿಗಳು ಮತ್ತು ೩೯ ಸವಳು ನೀರಿನ ಬಾವಿಗಳು ಇದ್ದುದಾಗಿ ತಿಳಿದು ಬರುವುದು. ೧೯೬೫ರ ಸುಮಾರಿಗೆ ಪುರಸಬೆಯು ಅಂದಾಜು ರೂ. ೨.೬ ಲಕ್ಷ ವೆಚ್ಚದಲ್ಲಿ ಸುರಕ್ಷಿತ ಕುಡಿಯುವ ನೀರಿನ ಯೋಜನೆಯನ್ನು ರೂಪಿಸಿದ್ದಾಗಿ ತಿಳಿದುಬರುವುದು. ಈ ಯೋಜನೆಯನ್ನು ಲೋಕೋಪಯೋಗಿ ಇಲಾಖೆಯು ಕಾರ್ಯಗತಗೊಳಿಸಿತ್ತು. ಸದ್ಯದ ನೀರು ಪೂರೈಕೆ ಪ್ರಮಾಣವನ್ನು ಹೆಚ್ಚಿಸಲು ಹಾಲಿ ಯೋಜನೆಯನ್ನು ಸುಧಾರಿಸಲು ಸುಮಾರು ೫ ಕೋಟಿ ರೂಗಳ

ಯೋಜನೆಯನ್ನು ೧೯೯೪ರಲ್ಲಿ ರೂಪಿಸಿದ್ದು ಯೋಜನೆಯು ಮುಂದುವರೆಯುತ್ತಿದೆ, ಮಾರ್ಚ್ ೧೯೯೭ರವರೆಗೆ ಈ ಯೋಜನೆಗೆ ಖರ್ಚು ಮಾಡಿದ ಹಣ ರೂ. ೭೧.೫೦ ಲಕ್ಷ.

ನಗರದ ನೈರ್ಮಲ್ಯ ಕಾಪಾಡಲು ಪೌರಕಾರ್ಮಿಕರು ಮತ್ತು ಇತರ ಸಿಬ್ಬಂದಿ ಇರುವುದು. ೧೯೬೫ರಲ್ಲಿ ನಗರದಲ್ಲಿ ೩೦೨ ವಿದ್ಯುತ್ ಬೀದಿ ದೀಪಗಳು ಇದ್ದುದಾಗಿ ತಿಳಿದು ಬರುವುದು.

**ಪಟ್ಟಣ ಪಂಚಾಯಿತಿ - ಅಫಜಲಪುರ**

ತಾಲೂಕು ಕೇಂದ್ರವಾದ ಅಫಜಲಪುರಕ್ಕೆ ಪ್ರಥಮ ಬಾರಿಗೆ ೧೯೭೪ರಲ್ಲಿ ೧೩ ಜನ ಸದಸ್ಯರನ್ನು ಒಳಗೊಂಡ ಪುರಸಭೆಯ ರಚನೆಯಾಯಿತು. ಜಿಲ್ಲಾಪರಿಷತ್ ಕಾಯಿದೆಯು ಬಂದನಂತರ ಪುರಸಭೆಯನ್ನು ಮಧ್ಯಂತರ ಮಂಡಳ ಪಂಚಾಯಿತಿಯನ್ನಾಗಿ ಪುನರ್ ರಚಿಸಲಾಯಿತು. ೧೯೯೬ ಮೇ ತಿಂಗಳಿಂದ ಮಂಡಳ ಪಂಚಾಯತಿಯು ಪಟ್ಟಣ ಪಂಚಾಯತಿಯಾಗಿ ಪುನರ್ ನಾಮಕರಣಗೊಂಡು ಮುಂದುವರೆಯುತ್ತಿರುವುದು. ಪಟ್ಟಣ ಪಂಚಾಯತಿಗೆ ಇತ್ತೀಚಿನ ಚುಣಾವಣೆಗಳು ೧೯೯೬ ಜೂನ್ ತಿಂಗಳಲ್ಲಿ ನಡೆದವು. ಚುಣಾಯಿತ ಸದಸ್ಯರ ಸಂಖ್ಯೆ ೧೫, ಆ ಪೈಕಿ ಮೀಸಲು ಸ್ಥಾನಗಳು ಮೂರು, ಸಾಮಾನ್ಯ ಅಭ್ಯರ್ಥಿಗಳು ೭, ಹಿಂದುಳಿದವರು ೫, ಒಟ್ಟು ಮಹಿಳೆಯರ ಸಂಖ್ಯೆ ೬.

ಪಟ್ಟಣ ಪಂಚಾಯತಿಯ ಕಾರ್ಯವ್ಯಾಪ್ತಿ ೧೯೮೧ರಲ್ಲಿ ೨.೫ ಚ.ಕಿ.ಮೀ. ಆಗಿದ್ದರೆ ೧೯೯೫ರಲ್ಲಿ ೩.೫ ಚ.ಕಿ.ಮೀ. ಆಗಿತ್ತು. ಪಟ್ಟಣದ ಜನಸಂಖ್ಯೆ ೧೯೯೧ರಲ್ಲಿ ೧೫,೦೭೦ ಆಗಿದ್ದರೆ ಮನೆಗಳ ಸಂಖ್ಯೆ ೧,೩೦೦ ಇದ್ದು ಸರಾಸರಿ ಕರಭಾರ ೧೯೯೫ರಲ್ಲಿ ರೂ. ೧೭.೧೨ ಆಗಿದ್ದರೆ ೧೯೮೧ ಮತ್ತು ೧೯೯೧ರಲ್ಲಿ ಅನುಕ್ರಮವಾಗಿ ಇದು ರೂ. ೧೫.೦೪ ಮತ್ತು ರೂ. ೧೬.೦೮ ಆಗಿತ್ತು. ಬೆಳೆಯುತ್ತಿರುವ ನಗರದ ವ್ಯಾಪ್ತಿ ಹೆಚ್ಚುತ್ತಿದ್ದು ಇತ್ತೀಚೆಗೆ ಕೆಲವು ಹೊಸ ಬವಣೆಗಳು ರಚನೆಗೊಂಡಿರುವವು ಅವುಗಳಲ್ಲಿ ಮಹತ್ಮಾಗಾಂಧೀನಗರ, ರಾಜೀವಗಾಂಧೀ ನಗರ, ರೇವಣ ಸಿದ್ದೇಶ್ವರ ಕಾಲೋನಿ, ಮಹಂತೇಶ ಬಡಾವಣೆ, ಚೌಡಯ್ಯ ನಗರ ಮತ್ತು ಇಂದಿರಾನಗರ ಮುಂತಾದವುಗಳು ಮುಖ್ಯವಾದವುಗಳು. ಈ ಬಡಾವಣೆಗಳ ಅಭಿವೃದ್ಧಿಗಾಗಿ ಪುರಸಭೆಯು ಇದುವರೆಗೆ ರೂ. ೫೧,೦೦೦ ಖರ್ಚು ಮಾಡಿರುವುದು.

ಅಫಜಲಪುರಕ್ಕೆ ಭೀಮಾನದಿಯಿಂದ ಸುರಕ್ಷಿತ ಕುಡಿಯುವ ನೀರನ್ನು ನಳಗಳ ಮೂಲಕ ಪೂರೈಸಲಾಗುತ್ತಿದೆ. ಈ ಯೋಜನೆಯನ್ನು ೯೨-೯೩ರಲ್ಲಿ ಪ್ರಾರಂಭಿಸಿ ೧೯೯೭ರಲ್ಲಿ ಪೂರೈಸಲಾಯಿತು. ಯೋಜನಾವೆಚ್ಚ ರೂ. ೮೭ ಲಕ್ಷ ಆಗಿದ್ದರೆ ಮಾರ್ಚ್ ೧೯೯೭ರವರೆಗೆ ಆದ ವೆಚ್ಚ ರೂ. ೭೫.೯೧ ಲಕ್ಷ. ಪ್ರತಿ ದಿವಸ ತಲಾವಾರು ಸರಾಸರಿ ನೀರಿನ ಪೂರೈಕೆ ೮೦ ಲೀಟರ್‌ಗಳು ಎಂದು ವರದಿಯಾಗಿದೆ. ನಗರದಲ್ಲಿ ೮೦೦ ಖಾಸಗಿ ನಳಗಳು, ೩೦ ಸಾರ್ವಜನಿಕ ನಳಗಳು ಇರುವವು. ನಗರದಲ್ಲಿ ಕೇವಲ ಹೊರ ಚರಂಡಿ ವ್ಯವಸ್ಥೆ ಇದ್ದು ನೈರ್ಮಲ್ಯ ನಿರೀಕ್ಷಕರ ಅಧೀನದಲ್ಲಿ ೧೯ ಜನ ಪೌರಕಾರ್ಮಿಕರು ನಗರ ನೈರ್ಮಲ್ಯ ಕಾರ್ಯನಿರ್ವಹಿಸುತ್ತಿರುವರು. ಪಟ್ಟಣ ಪಂಚಾಯತಿಯ ಪರಿಮಿತಿಯಲ್ಲಿ ಇರುವ ಒಟ್ಟು ರಸ್ತೆಗಳ ಉದ್ದ ಸಮಾರು ೩೦ ಕಿ. ಮಿ. ಆ ಪೈಕಿ, ಐದು ಕಿ. ಮಿ. ಉದ್ದದ ಡಾಂಬರ ರಸ್ತೆ ಇರುವುದು. ೧೯೬೯ರಲ್ಲಿ ಮೊದಲಬಾರಿಗೆ ನಗರಕ್ಕೆ ವಿದ್ಯುತ್ತನ್ನು ಒದಗಿಸಿಲಾಯಿತು. ೧೯೯೭ರಲ್ಲಿ ಇರುವ ಮನೆ ದೀಪಗಳು ಮತ್ತು ಬೀದಿ ದೀಪಗಳ ಸಂಖ್ಯೆ ಕ್ರಮವಾಗಿ ೨,೦೦೦ ಮತ್ತು ೩,೦೦೦ ಎಂದು ವರದಿಯಾಗಿದೆ. ನಗರದಲ್ಲಿ ೧೦ ಕೊಳಚೆ ಪ್ರದೇಶಗಳು ಇದ್ದು ಜನವಸತಿ ಇರುವ ಗುಡಿಸಲುಗಳ ಸಂಖ್ಯೆ ೫೦೦. ಪ. ಜಾ. / ಪ. ಪಂ. ದವರ ವಿವಿಧ ಕಲ್ಯಾಣ ಕಾರ್ಯಕ್ರಮಗಳಿಗಾಗಿ ಪಂಚಾಯಿತಿಯಿಂದ ೧೯೯೨-೯೩, ೯೩-೯೪ ಮತ್ತು ೧೯೯೪-೯೫ರಲ್ಲಿ ಖರ್ಚು ಮಾಡಿದ ಹಣ ಕ್ರಮವಾಗಿ ರೂ. ೫೬,೩೦೦, ರೂ. ೫೪,೦೦೦ ಮತ್ತು ರೂ. ೫,೦೦೦ ಎಂದು ವರದಿಯಾಗಿದೆ.

ಜಿಲ್ಲಾ ಪಂಚಾಯತಿಯಿಂದ ಈ ಸ್ಥಳೀಯ ಸಂಸ್ಥೆಗೆ ಒದಗಿಸಲಾದ ಅಭಿವೃದ್ಧಿ ಅನುದಾನ ೧೯೯೨-೯೩, ೯೩-೯೪ ಸಾಲುಗಳಲ್ಲಿ ಪ್ರತಿವರ್ಷ ರೂ. ಒಂದು ಲಕ್ಷ ಆಗಿದ್ದರೆ ಅದರ ಮುಂದಿನ ವರ್ಷ ರೂ. ೧.೨೫ ಲಕ್ಷ ಆಗಿತ್ತು. ಪಟ್ಟಣ ಪಂಚಾಯತಿಯು ೧೯೯೫-೯೬ರಲ್ಲಿ ತನ್ನ ಒಟ್ಟು ವೆಚ್ಚದ ಪೈಕಿ ವಿವಿಧ ಅಭಿವೃದ್ಧಿ ಕಾರ್ಯಗಳಿಗೆ ಶೇಕಡಾ ಪ್ರಮಾಣದಲ್ಲಿ ಖರ್ಚು ಮಾಡಿದ್ದ ವಿವರ ಈ ರೀತಿ ಇರುವುದು. ಜನಾರೋಗ್ಯ ಮತ್ತು ನೈರ್ಮಲ್ಯ (ಶೇ. ೫೦), ಸಾರ್ವಜನಿಕ ಕಾಮಗಾರಿ (ಶೇ. ೨೫), ನೀರು ಸರಬರಾಜು (ಶೇ. ೮), ರಸ್ತೆ ಮತ್ತು ದೀಪಗಳ ನಿರ್ವಹಣೆ (ಸೇ. ೮), ಚರಂಡಿ ಮತ್ತು ಸಾಂಕ್ರಾಮಿಕ

ರೋಗ (ಶೇ. ೨), ಸಿಬ್ಬಂದಿ ಪ್ರಭಾರ (ಶೇ. ೩) ಮತ್ತು ಇತರೆ (ಶೇ. ೪). ಪುರಸಭೆಯ ಕಛೇರಿ ಕಟ್ಟಡವನ್ನು ೧೯೯೫-೯೬ರಲ್ಲಿ ಕಟ್ಟಿ ಪೂರೈಸಿದ್ದು ಅದರ ವೆಚ್ಚ ಸುಮಾರು ೭ ಲಕ್ಷ ಎಂದು ತಿಳಿದು ಬರುವುದು.

**ಪಟ್ಟಣ ಪಂಚಾಯಿತಿ - ಗುರಮಠಕಲ್**

ಇಂದು ಪಟ್ಟಣ ಪಂಚಾಯಿತಿಯಾಗಿರುವ ಗುರುಮಠಕಲ್‌ಗೆ ೧೯೫೪ರಲ್ಲಿ (ಮುನಸಿಪಾಲಟಿ)ನಗರ ಸಭೆಯನ್ನು ರಚಿಸುವ ಮೂಲಕ ಪುರಾಡಳಿತ ವ್ಯವಸ್ಥೆಯನ್ನು ಪ್ರಾರಂಭಿಸಲಾಯಿತು. ೧೯೦೫ರವರೆಗೆ ಗುರುಮಠಕಲ್ ತಾಲೂಕು ಕೇಂದ್ರವೂ ಆಗಿತ್ತು. ೧೯೫೪ರಲ್ಲಿ ಪುರ ಸಭೆಯು ೧೮ ಜನ ಸದಸ್ಯರನ್ನು ಹೊಂದಿತ್ತು. ಕರ್ನಾಟಕ ಮುನಸಿಪಾಲಿಟಿಗಳ ಅಧಿನಿಯಮ ೧೯೬೪ರ ಅನ್ವಯ ಪುನರ್ ರಚನೆಗೊಂಡಾಗ ೧೯೬೪ ಆಗಸ್ಟ್‌ನಲ್ಲಿ ಸದಸ್ಯರ ಸಂಖ್ಯೆ ೧೫ ಆಗಿತ್ತು. ಆ ಪೈಕಿ ಒಂದು ಸ್ಥಾನವನ್ನು ಪರಿಶಿಷ್ಟ ಜಾತಿಯವರಿಗೆ ಕಾಯ್ದಿಡಲಾಗಿತ್ತು. ಕರ್ನಾಟಕ ಪಂಚಾಯತಿ ರಾಜ್ ಕಾಯಿದೆ ೧೯೯೩ರಲ್ಲಿ ಜಾರಿಯಲ್ಲಿ ಬಂದನಂತರ ಮೊದಲು ಮಧ್ಯಂತರ ಮಂಡಳ ಪಂಚಾಯಿತಿ ಆಗಿದ್ದ ಪುರಸಭೆ ಇಂದು ಟೌನ್ ಪಂಚಾಯತಿಯಾಗಿ ಮುಂದುವರೆಯುತ್ತಿರುವುದು. ೧೯೯೧ರಲ್ಲಿ ಪಟ್ಟಣದ ಜನಸಂಖ್ಯೆ ೧೩,೬೭೪ ಆಗಿದ್ದು ವಿಸ್ತೀರ್ಣ ೨.೫ ಚ.ಕಿ.ಮಿ ಆಗಿತ್ತು. ೧೯೯೫ರಲ್ಲಿ ಇದ್ದ ಮನೆಗಳ ಸಂಖ್ಯೆ ೩,೫೧೨. ಪಂಚಾಯಿತಿ ಕ್ಷೇತ್ರವನ್ನು ನಾಲ್ಕು ಡಿವಿಜನ್ ಮತ್ತು ೧೫ ವಾರ್ಡುಗಳಾಗಿ ವಿಭಾಗಿಸಲಾಗಿದೆ.

**ಕುಡಿಯುವ ನೀರಿನ ಯೋಜನೆ**

ಪ್ರಾರಂಭದಲ್ಲಿ ಬಾವಿಗಳು, (ಇಂದು ಕೊಳವೆ ಬಾವಿಗಳು) ನೀರನ್ನು ಒದಗಿಸುವ ಮೂಲಗಳಾಗಿವೆ. ೧೯೭೯ರಿಂದ ಪುರಸಭೆಯು ಸುರಕ್ಷಿತ ಕುಡಿಯುವ ನೀರನ್ನು ನಳಗಳ ಮೂಲಕ ಒದಗಿಸುತ್ತಿರುವುದು. ಈ ಯೋಜನೆಯನ್ನು ರೂ. ೭೭ ಲಕ್ಷ ರೂ. ಅಂದಾಜಿನಲ್ಲಿ ಕೈಗೊಳ್ಳಲಾಯಿತು. ೧೯೯೫ರಲ್ಲಿ ನಗರ ಪರಿಮಿತಿಯಲ್ಲಿ ೭೨೫ ಖಾಸಗಿ ನಳಗಳು, ೫೦ ಸಾರ್ವಜನಿಕ ನಳಗಳು ಇದ್ದವು. ದಿನನಿತ್ಯ ಸರಾಸರಿ ಸುಮಾರು ೨ ಲಕ್ಷ ಗ್ಯಾಲನ್ ನೀರನ್ನು ನಗರಕ್ಕೆ ಒದಗಿಸಲಾಗುವುದು. ನೀರಿನ ತೆರಿಗೆ ರೂಪದಲ್ಲಿ ಪುರಸಭೆಗೆ ವಾರ್ಷಿಕ ಸುಮಾರು ರೂ. ೧.೪೭ ಲಕ್ಷ ಸಂದಾಯವಾದರೆ, ವಾರ್ಷಿಕ ನಿರ್ವಹಣಾ ವೆಚ್ಚ ರೂ. ೨೦,೦೦೦ ಆಗಿತ್ತು. ೧೫ ಜನ ಪೌರ ಕಾರ್ಮಿಕರು ಪುರಸಭೆಯ ನೈರ್ಮಲ್ಯ ಕಾಪಾಡುವಲ್ಲಿ ಸಹಾಯಕರಾಗಿರುವರು. ೧೯೯೫ರಲ್ಲಿ ಇದ್ದಂತೆ ನಗರದ ಪರಿಮಿತಿಯಲ್ಲಿ ಇದ್ದ ಒಟ್ಟು ರಸ್ತೆಗಳ ಉದ್ದ ೧೨ ಕಿ.ಮಿ. ೧೯೬೪ ಡಿಸೆಂಬರ್‌ನಲ್ಲಿ ನಗರವನ್ನು ಪ್ರಥಮ ಬಾರಿಗೆ ಕೆ.ಇ.ಬಿ.ಯಿಂದ ವಿದ್ಯುದ್ಧೀಕರಣಗೊಳಿಸಲಾಯಿತು. ೧೯೯೬ರಲ್ಲಿ ನಗರದಲ್ಲಿ ೧೯೦ ಬೀದಿ ದೀಪಗಳು ಇದ್ದವು. ಜಕಾತಿ ರದ್ದಾಗುವ ಪೂರ್ವದಲ್ಲಿ ವರ್ಷಕ್ಕೆ ಸರಾಸರಿ ರೂ. ೪೮,೦೦೦ ಈ ಮೂಲದಿಂದ ಸಂದಾಯವಾಗುತ್ತಿತ್ತು. ಇತ್ತೀಚಿನ ಮೂರು ವರ್ಷಗಳಲ್ಲಿ ೧೯೯೪-೯೫, ೯೫-೯೬ ಮತ್ತು ೯೬-೯೭ರಲ್ಲಿ ಸರ್ಕಾರ ನೀಡಿದ ಆಕ್ಟ್ರಾಯ ಅನುದಾನ ಕ್ರಮವಾಗಿ ರೂ. ೧.೯೫ ಲಕ್ಷ, ರೂ. ೨.೧೧ ಲಕ್ಷ ಮತ್ತು ರೂ. ೬.೭೫ ಲಕ್ಷ.

ಪುರಸಭೆಯ ಆಯವ್ಯಯದ ಶೇ. ೧೮ರ ಮೀಸಲಾತಿ ನಿಧಿಯಿಂದ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದವರ ಕಲ್ಯಾಣ ಕಾರ್ಯಕ್ರಮಗಳಿಗೆ ಖರ್ಚುಮಾಡಿದ ಹಣ ೧೯೯೪-೯೫ರಲ್ಲಿ ರೂ. ೫,೦೦೦ ಆಗಿದ್ದರೆ ಅದರ ಮುಂದಿನ ವರ್ಷ ರೂ. ೩,೩೦೦ ಮತ್ತು ೧೯೯೬-೯೭ರಲ್ಲಿ ರೂ. ೧೧,೭೦೦ ಎಂದು ತಿಳಿದು ಬರುವುದು. ಕೇಂದ್ರ ಸರ್ಕಾರ ಪುರಸ್ಕೃತ ಸಣ್ಣ ಮತ್ತು ಮಧ್ಯಮ ನಗರಗಳ ಅಭಿವೃದ್ಧಿ ಯೋಜನೆಯಲ್ಲಿ ಈ ಪಟ್ಟಣ ಪಂಚಾಯತಿಯನ್ನು ಸೇರಿಸಲಾಗಿದೆ. ಪುರಸಭೆಗೆ ವಿವಿಧ ಅಭಿವೃದ್ಧಿ ಕಾರ್ಯ ಕ್ರಮಗಳನ್ನು ಕೈಗೊಳ್ಳಲು ರೂ. ೪೦ ಲಕ್ಷ ಮಂಜೂರಾಗಿತ್ತು. ಆ ಪೈಕಿ ರೂ. ೨೬ ಲಕ್ಷ ಕೇಂದ್ರ ಸರ್ಕಾರದಿಂದ ಮತ್ತು ರಾಜ್ಯ ಸರ್ಕಾರದಿಂದ ರೂ. ೪.೯೫ ಲಕ್ಷ ಬಿಡುಗಡೆಯಾಗಿರುವುದು. ಈ ಆರ್ಥಿಕ ನೆರವಿನಿಂದ ಪುರಸಭೆಯು ೩೯ ಮಳಿಗೆಗಳನ್ನು ನಿರ್ಮಿಸಿದೆ.

ಪುರಸಭೆಯ ಇತ್ತೀಚಿನ ಹಲವು ವರ್ಷಗಳ ಆದಾಯ ವೆಚ್ಚಗಳ ಕೋಷ್ಟಕ ಈ ಕೆಳಗಿನಂತೆ ಇರುವುದು.

(ಮೊತ್ತ ಲಕ್ಷ ರೂ.ಗಳಲ್ಲಿ)

| ವರ್ಷ | ಆದಾಯ | ಖರ್ಚು |
|---|---|---|
| ೧೯೮೬-೮೭ | ೩.೭೦ | ೩.೧೯ |
| ೧೯೮೭-೮೮ | ೩.೧೧ | ೧.೮೪ |
| ೧೯೮೮-೮೯ | ೨.೯೫ | ೪.೧೭ |
| ೧೯೮೯-೯೦ | ೦.೨೧ | ೦.೩೨ |
| ೧೯೯೦-೯೧ | ೨.೮೪ | ೩.೧೧ |
| ೧೯೯೧-೯೨ | ೨.೪೪ | ೦.೨೫ |
| ೧೯೯೨-೯೩ | ೬.೧೫ | ೫.೫೮ |
| ೧೯೯೩-೯೪ | ೩೭.೦೪ | ೧೬.೦೩ |
| ೧೯೯೪-೯೫ | ೧೩.೫೭ | ೧೨.೮೭ |

## ಅಧಿಸೂಚಿತ ಪ್ರದೇಶ, ವಾಡಿ

ಹೈದರಾಬಾದ್-ವಾಡಿ ರೈಲು ಮಾರ್ಗ ೧೮೭೪ರಲ್ಲಿ ಪ್ರಾರಂಭವಾದ ನಂತರ ವಾಡಿಯು ಶೀಘ್ರಗತಿಯಿಂದ ಬೆಳೆಯುತ್ತಿರುವುದು. ಇದು ಜಿಲ್ಲೆಯ ಸಿಮೆಂಟ್ ಕೈಗಾರಿಕೆಯ ಒಂದು ಪ್ರಮುಖ ಕೇಂದ್ರವಾಗಿರುವುದು. ಸಿಮೆಂಟ್ ಉದ್ಯಮದ ಒಡೆತನ ಎ. ಸಿ. ಸಿ. ಕಂಪನಿಯವರಿಗೆ ಸೇರಿದ್ದು ಸ್ಥಳೀಯ ಕೈಗಾರಿಕಾ ಪ್ರದೇಶಕ್ಕೆ ಸೀಮಿತವಾದಂತೆ ನಾಗರಿಕ ಸೌಲಭ್ಯಗಳನ್ನು ಒದಗಿಸಲು ಸಹಾಯಕವಾಗುವಂತೆ ಶಾಸನಬದ್ಧ ಅದಿಸೂಚಿತ ಪ್ರದೇಶ ಸಮಿತಿಯು ಇರುವುದು. ಸಮಿತಿಯು ಮೊದಲಿಗೆ ೧೯೭೩ರಲ್ಲಿ ರಚನೆಯಾಗಿರುವುದು. ಇದರ ಅಧ್ಯಕ್ಷರು ಜಿಲ್ಲಾಧಿಕಾರಿಗಳಾಗಿದ್ದು ಉಳಿದ ನಾಲ್ವರು ಸರ್ಕಾರದಿಂದ ನೇಮಕಗೊಂಡ ಸದಸ್ಯರಾಗಿರುವರು. ಅವರಲ್ಲಿ ಗುಲಬರ್ಗಾ ವಿಭಾಗದ ಕಾರ್ಯ ನಿರ್ವಾಹಕ ಇಂಜಿನಿಯರ್, ಅವರನ್ನು ಬಿಟ್ಟರೆ ಮೂವರು ಎ.ಸಿ.ಸಿ. ಕಂಪಿನಿಯ ಹಿರಿಯ ಅಧಿಕಾರಿಗಳು ಅಂದರೆ ಜನರಲ್ ಮ್ಯಾನೇಜರ್, ಸಿವಿಲ್ ಇಂಜಿನಿಯರ್, ಸಿಬ್ಬಂದಿ ಕಲ್ಯಾಣ ಇಲಾಖೆಯ ಮ್ಯಾನೇಜರ್ ಮುಂತಾದವರು. ಸಮಿತಿಯ ಮುಖ್ಯ ಕಾರ್ಯನಿರ್ವಾಹಕರು, ನಗರಾಡಳಿತ ಇಲಾಖೆಗೆ ಸೇರಿದವರು. ವಾಡಿಯ ಇತರೇ ನಾಗರಿಕ ಪ್ರದೇಶಗಳ ಆಡಳಿತ ನೋಡಿ ಕೊಳ್ಳಲು ಪ್ರತ್ಯೇಕವಾದ ಗ್ರಾಮ ಪಂಚಾಯತಿ ಇರುವುದು. ಈ ಸೀಮಿತವಲಯದಲ್ಲಿನ ಎಲ್ಲಾ ನಾಗರಿಕ ಸೌಲಭ್ಯಗಳನ್ನುಅಂದರೆ ಕುಡಿಯುವ ನೀರು ಜನರ ಆರೋಗ್ಯ, ವೈದ್ಯಕೀಯ ಸೇವೆ, ಶಿಕ್ಷಣ ಮುಂತಾದವುಗಳನ್ನು ಸ್ಥಳೀಯ ಎ.ಸಿ.ಸಿ ಕಂಪನಿಯವರೇ ಪೂರೈಸುವರು. ಅಧಿಸೂಚಿತ ಪ್ರದೇಶದ ಒಟ್ಟು ವಿಸ್ತೀರ್ಣ ಸುಮಾರು ೧,೬೮೪ ಎಕರೆ ಆಗಿದ್ದು ಒಟ್ಟು ಮನೆಗಳ ಸಂಖ್ಯೆ ೮೩೫ ಆಗಿತ್ತು. ೧೯೯೧ರ ಜನಸಂಖ್ಯೆ ೩,೨೯೨. ನಿಗಧಿತ ಆಸ್ತಿ ತೆರಿಗೆಯನ್ನು ಕೈಗಾರಿಕೆಯವರು ಅಧಿಸೂಚಿತ ಪ್ರದೇಶ ಸಮಿತಿಗೆ ನೀಡವರು. ಗ್ರಾಮ ಪಂಚಾಯಿತಿಯ ಸರಹದ್ದಿನಲ್ಲಿರುವ ಜನಸಂಖ್ಯೆ ೨೫,೦೫೦. ನಗರಕ್ಕೆ ಮೂರು ಕಿ. ಮಿ. ದೂರದಲ್ಲಿರುವ ಕಾಗಿನಾ ನದಿಯಿಂದ ನೀರು ಪೂರೈಕೆಯಾಗುವುದು. ನೀರು ಪೂರೈಕೆ ಯೋಜನೆಯನ್ನು ಮೊದಲಿನಂದಲೂ ಕಂಪನಿಯವರು ನಿರ್ವಹಿಸುತ್ತಿರುವರು. ೧೯೯೬-೯೭ರಲ್ಲಿ ಅಧಿಸೂಚಿತ ಪ್ರದೇಶ ಸಮಿತಿಯ ಒಟ್ಟು ಆದಾಯ ರೂ. ೩.೧೯ ಲಕ್ಷ ಆಗಿದ್ದರೆ ಆ ಪೈಕಿ ಆಸ್ತಿ ತೆರಿಗೆ ರೂಪದಲ್ಲಿ ಸಂದಾಯವಾದದ್ದು ರೂ. ೨.೪೨ ಲಕ್ಷ ಆಗಿದ್ದು ಒಟ್ಟು ಖರ್ಚು ರೂ. ೩.೩೪ ಲಕ್ಷ ಎಂದು ತಿಳಿದು ಬರುವುದು. ಅಧಿಸೂಚಿತ ಪ್ರದೇಶ ಸಮಿತಿಗಳಿಗೆ ಯಾವುದೇ ಚುನಾಯಿತ ಸದಸ್ಯರು ಇರುವುದಿಲ್ಲ.

## ಗುಲಬರ್ಗಾ ನಗರಾಭಿವೃದ್ಧಿ ಪ್ರಾಧಿಕಾರ

ನಗರಗಳ ಸುವ್ಯವಸ್ಥಿತ ಮತ್ತು ಸರ್ವಾಂಗೀಣ ಅಭಿವೃದ್ಧಿಯನ್ನು ಸಾಧಿಸಲು ಸಹಾಯಕವಾಗುವಂತೆ ಕರ್ನಾಟಕಸರ್ಕಾರವು ೧೯೭೬ರಲ್ಲಿ ಕರ್ನಾಟಕ ನಗರಾಭಿವೃದ್ಧಿ ಮಂಡಳಿಗಳ ಅಧಿನಿಯಮವನ್ನು ಜಾರಿಗೊಳಿಸಿತು. ನಂತರ ನಗರ ಯೋಜನಾ

ಪ್ರಾಧಿಕಾರ ಮತ್ತು ನಗರಾಭಿವೃದ್ಧಿ ಮಂಡಳಿಗಳನ್ನು ಒಂದೇ ಆಡಳಿತ ವ್ಯವಸ್ಥೆಯಲ್ಲಿ ತರುವ ಮೂಲಕ ಎರಡೂ ಸಂಸ್ಥೆಗಳನ್ನು ಒಂದುಗೂಡಿಸಿ ೧೯೮೮ರಲ್ಲಿ (೧೬.೫.೮೮) ಗುಲಬರ್ಗಾ ನಗರಾಭಿವೃದ್ಧಿ ಪ್ರಾಧಿಕಾರವನ್ನು ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯಿದೆ ೧೯೮೭ರ ಅನ್ವಯ ರಚಿಸಲಾಯಿತು. ಇದು ಒಂದು ಅರೆಸರ್ಕಾರಿ ಸ್ವಾಯತ್ತತೆಯನ್ನು ಹೊಂದಿದ ಶಾಸನಬದ್ಧ ಸಂಸ್ಥೆಯಾಗಿರುವುದು. ೧೯೭೬ರ ಈ ಅಧಿನಿಯಮವು ಜಿಲ್ಲಾ ಕೇಂದ್ರ ಸ್ಥಳಗಳು ಅಲ್ಲದೆ, ಇತರೇ ಪ್ರಮುಖ ನಗರಗಳಿಗೂ ಅನ್ವಯಿಸುವುದು. ಅಭಿವೃದ್ಧಿ ಪ್ರಾಧಿಕಾರದ ಪ್ರಮುಖ ಉದ್ದೇಶಗಳು : ಗುಲಬರ್ಗಾ ನಗರವನ್ನು ಯೋಜನಾ ಬದ್ಧವಾಗಿ ಬೆಳೆಯುವಂತೆ ನಿಯಂತ್ರಿಸುವುದು, ನಗರದ ಸೌಂದರ್ಯವನ್ನು ಹೆಚ್ಚಿಸುವುದು, ವಸತಿ ಅಭಿವೃದ್ಧಿ ಯೋಜನೆಗಳನ್ನು ತಯಾರಿಸಿ ಸಾರ್ವಜನಿಕರಿಗೆ ನಿವೇಶನಗಳನ್ನು ಹಂಚುವುದು, ಖಾಸಗಿ ಬಡಾವಣೆಗಳಿಗೆ ಅನುಮೋದನೆ ಕೊಡುವುದು, ಕಟ್ಟಡ ಕಟ್ಟಲು ಪ್ರಾರಂಭಿಕ ಪ್ರಮಾಣ ಪತ್ರ ನೀಡುವುದು ಮುಂತಾದವು.

ಅಭಿವೃದ್ಧಿ ಪ್ರಾಧಿಕಾರದ ಕಾರ್ಯವ್ಯಾಪ್ತಿಯು ಗುಲಬರ್ಗಾನಗರವನ್ನು ಒಳಗೊಂಡಂತೆ ಸುತ್ತಮುತ್ತಲಿನ ೩೩ ಗ್ರಾಮಗಳನ್ನು ಒಳಗೊಂಡಿದ್ದು ವಿಸ್ತೀರ್ಣ ಸುಮಾರು ೨೫೩ ಚ. ಕಿ.ಮೀ. ಪ್ರಾರಂಭದಲ್ಲಿ (೧೯೮೮) ೨೦ ಗ್ರಾಮಗಳನ್ನು ಇದು ಒಳಗೊಂಡಿದ್ದು, ೧೯೮೯ರಲ್ಲಿ ಹೊಸದಾಗಿ ೧೩ ಗ್ರಾಮಗಳು ಸೇರಿಸಲ್ಪಟ್ಟವು. ನಗರಾಭಿವೃದ್ಧಿ ಪ್ರಾಧಿಕಾರದವತಿಯಿಂದ ವ್ಯಾಪಕ ಅಭಿವೃದ್ಧಿ ಯೋಜನೆಯನ್ನು ತಯಾರಿಸಿದ್ದು, ಅದಕ್ಕೆ ಸರ್ಕಾರವು ೬.೬.೧೯೮೮ರಲ್ಲಿ ಅನುಮೋದನೆಯನ್ನು ನೀಡಿರುವುದು. ಸದರಿ ಯೋಜನೆಯ ಅನ್ವಯ ೧೯೮೧ರ ಜನಗಣತಿಯ ಆಧಾರದ ಮೇಲೆ ೨೦೦೧ ಸಾಲಿನವರೆಗೆ ಯೋಜನೆಯಲ್ಲಿ ವಸತಿ, ವಾಣಿಜ್ಯ, ಉದ್ದಿಮೆ, ಸಾರ್ವಜನಿಕ ಮತ್ತು ಅರೇ ಸಾರ್ವಜನಿಕ ಬಯಲು ಜಾಗ, ಆಟದ ಬಯಲು, ಉದ್ಯಾನವನಗಳು ಇತ್ಯಾದಿಗಳ ಉಪಯೋಗಕ್ಕೆ ಬೇಕಾಗುವ ೪೦,೬೨೫ ಹೆಕ್ಟೇರ್ ಪ್ರದೇಶವನ್ನು ಮುಂದಾಗಬಹುದಾದ (೨೦೦೧ ಇಸ್ವಿ) ಸುಮಾರು ೪.೫ ಲಕ್ಷ ಜನಸಂಖ್ಯೆಗೆ ಮೀಸಲು ಇಡಲಾಗಿದೆ. ಉಳಿದ ಜಾಗವನ್ನು ವ್ಯವಸಾಯ ವಲಯ (ಹಸಿರುಪಟ್ಟಿ)ಕ್ಕೆ ಮೀಸಲಾಗಿಡಲಾಗಿದೆ.

ಪ್ರಾಧಿಕಾರವು ಇದುವರೆಗೆ ಒಟ್ಟು ೧೨ ಅಭಿವೃದ್ದಿ ಯೋಜನೆಗಳನ್ನು ನಗರದ ವಿವಿಧ ಕಡೆಗಳಲ್ಲಿ ಕೈಗೊಂಡಿದ್ದು ೮,೮೪೬ ನಿವೇಶನಗಳನ್ನು ರಚಿಸಲಾಗಿದ್ದು, ಆ ಪೈಕಿ ೬,೮೧೫ ನಿವೇಶನಗಳನ್ನು ಸಾರ್ವಜನಿಕರಿಗೆ ಹಂಚಲಾಗಿದೆ. ಹಂಚಿಕೆಯಲ್ಲಿ ಶೇ. ೩೦ ನಿವೇಶನಗಳನ್ನು ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದವರಿಗೆ ಆರ್ಥಿಕವಾಗಿ ಹಿಂದುವಳಿದವರಿಗೆ, ರಿಯಾಯತಿ ದರದಲ್ಲಿ ನೀಡಲಾಗುವುದು. ಈ ಅಭಿವೃದ್ಧಿ ಯೋಜನೆಗಳಿಗೆ ಇದುವರೆಗೆ ಒಟ್ಟು ೮೯ ಎಕರೆ ಪ್ರದೇಶವನ್ನು ಭೂಸ್ವಾಧೀನ ಪಡಿಸಿಕೊಳ್ಳಲಾಗಿದೆ.

ಪ್ರಾಧಿಕಾರದ ವತಿಯಿಂದ ಸುಪರ್ ಮಾರ್ಕೆಟ್‌ನಲ್ಲಿ ಸಾರ್ವಜನಿಕರಿಗೆ ತಂಪಾದ ಕುಡಿಯುವ ನೀರಿನ ಕೇಂದ್ರ ನಿರ್ಮಿಸಲಾಗಿದೆ. ಸಂಚಾರಿ ಸಿಗ್ನಲ್ ವ್ಯವಸ್ಥೆಗೆ ರೂ. ೩.೫ ಲಕ್ಷಗಳನ್ನು ದೇಣಿಗೆಯಾಗಿ ನೀಡಲಾಗಿದೆ. ಪ್ರಾಧಿಕಾರದ ಕಳೆದ ಐದು ವರ್ಷಗಳ ಆದಾಯ ಮತ್ತು ವೆಚ್ಚದ ವಿವರ ಈ ರೀತಿ ಇರುವುದು. ಮೊತ್ತ ಲಕ್ಷ ರೂ.ಗಳಲ್ಲಿ, ಆವರಣದಲ್ಲಿರುವ ಸಂಖ್ಯೆಯು ವೆಚ್ಚವನ್ನು ಸೂಚಿಸುವುದು.

೧೯೯೦-೯೧ : ೧೫೧.೯೬ (೧೪೫.೫೫), ೧೯೯೧-೯೨ : ೧೦೨.೪೮ (೧೧೨.೦೬), ೧೯೯೨-೯೩ : ೧೬೮.೮೭ (೨೩೬.೮೪), ೧೯೯೩-೯೪ : ೧೯೮.೬೧ (೧೩೯.೭೬), ೧೯೯೪-೯೫ : ೮೩.೬೨ (೧೧೭.೯೮), ೧೯೯೫-೯೬ ಡಿಸೆಂಬರ್‌ವರೆಗೆ ೧೦೯.೪೨ (೧೦೯.೪೨)

## ನಗರ ಯೋಜನೆ

ಯೋಜಿತ ನಗರ ನಿರ್ಮಾಣದ ಕಲ್ಪನೆಯು ಅತ್ಯಂತ ಪುರಾತನವಾಗಿದ್ದು ನಗರ ಮತ್ತು ಗ್ರಾಮೀಣ ಪ್ರದೇಶಗಳನ್ನು ಯೋಜನಾ ಬದ್ಧವಾಗಿ, ವೈಜ್ಞಾನಿಕವಾಗಿ, ನಿರ್ಮಿಸುವ ಮತ್ತು ವಿಸ್ತರಿಸುವ ಅಗತ್ಯತೆ ಇಂದು ಹೆಚ್ಚಿನ ಮಹತ್ವ ಪಡೆದಿರುವುದು. ಸುಮಾರು ೩೦ ವರ್ಷಗಳ ಹಿಂದೆಯೇ ಒಂದು ಲಕ್ಷಕ್ಕೂ ಮೀರಿದ ಜನಸಂಖ್ಯೆಯೊಂದಿಗೆ ಅಡ್ಡಾ ದಿಡ್ಡಿ ಬೆಳೆಯುತ್ತಿದ್ದ ನಗರಗಳ ಗತಿಯನ್ನು ನಿಯಂತ್ರಿಸಲು ಸಹಾಯಕವಾಗುವಂತೆ ೧೯೬೨ರಲ್ಲಿ ನಗರ ಯೋಜನಾ ಅಧಿಕಾರಿಗಳ ಕಛೇರಿಯನ್ನು ಗುಲಬರ್ಗಾದಲ್ಲಿ ತೆರೆಯಲಾಯಿತು. ಆಗಿನ ಅದರ ಕಾರ್ಯ ವ್ಯಾಪ್ತಿಯು ಗುಲಬರ್ಗಾ, ಬೀದರ ಮತ್ತು ರಾಯಚೂರು

ಜಿಲ್ಲೆಗಳಿಗೆ ವಿಸ್ತರಿಸಿತ್ತು. ಕೇಂದ್ರ ಯೋಜನೆಯ ಅನ್ವಯ ಸದರಿ ಕಛೇರಿಯಿಂದ ಗುಲಬರ್ಗಾ ನಗರದ ಮಾಸ್ಟರ್ ಪ್ಲಾನ್ ೧೯೭೭ರ ಸುಮಾರಿಗೆ ತಯಾರಿಸಲಾಯಿತು.

ರಾಜ್ಯ ಪುನರ್ ವಿಂಗಡನೆಯ ನಂತರದ ವರ್ಷಗಳಲ್ಲಿ ಸರ್ಕಾರವು ೧೯೬೧ರಲ್ಲಿ ರಾಜ್ಯ ವ್ಯಾಪ್ತಿಯ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನೆ ಎಂಬ ವ್ಯಾಪಕ ಅಧಿನಿಯಮವನ್ನು ರಚಿಸಿ ೧೯೬೫ರಿಂದ ಅದನ್ನು ಜಾರಿಯಲ್ಲಿ ತಂದಿತು. ಈ ಕಾಯ್ದೆಯ ಮುಖ್ಯ ಉದ್ದೇಶ ಸಂಪೂರ್ಣವಾಗಿ ಪೌರ ಮತ್ತು ಸಾಮಾಜಿಕ ಸೌಲಭ್ಯಗಳನ್ನು ಒದಗಿಸುವುದಕ್ಕಾಗಿ ಪಟ್ಟಣ ಮತ್ತು ಗ್ರಾಮಾಂತರ ಪ್ರದೇಶಗಳ ಯೋಜನೆ ಮತ್ತು ಪುನರ್ ಯೋಜನೆಗೆ ಅನುಕೂಲವಾಗುವ ಪರಿಸ್ಥಿತಿಯನ್ನುಂಟು ಮಾಡುವುದು, ನಿಯಂತ್ರಣಕ್ಕೆ ಒಳಪಡದ ಭೂಮಿಯನ್ನು ಅಭಿವೃದ್ಧಿ ಪಡಿಸುವುದು ಮತ್ತು ಭೂಮಿಯ ವ್ಯಾಪಾರದಲ್ಲಿ ಲಾಭ ಕೋರತನವನ್ನು ತಡೆಯುವುದು, ಭೂಮಿಯನ್ನು ಸಮತೋಲನದಿಂದ ಬಳಸುವುದು, ಪರಿಸರದ ರಕ್ಷಣೆ, ಉದ್ಯಾನವನ, ಆಟದ ಮೈದಾನ ಮುಂತಾದ ಸೌಕರ್ಯಗಳನ್ನು ಒದಗಿಸುವುದು, ರಕ್ಷಿಸುವುದು ಮತ್ತು ಸುಧಾರಿಸುವುದು ಸೇರಿವೆ.

**ಕೊಳಚೆ ನಿರ್ಮೂಲನಾ ಮಂಡಳಿ**

ಇತ್ತೀಚಿನ ವರ್ಷಗಳಲ್ಲಿ ತೀವ್ರಗತಿಯಿಂದ ಹೆಚ್ಚುತ್ತಿರುವ ನಗರೀಕರಣ, ಕೈಗಾರಿಕೆಗಳ ಬೆಳವಣಿಗೆ, ನಗರಗಳಿಗೆ ದೊಡ್ಡ ಪ್ರಮಾಣದಿಂದ ಬರುತ್ತಿರುವ ವಲಸಿಗರ ಸಂಖ್ಯೆ, ನಗರದಲ್ಲಿಯೇ ಇರುವವರಿಗೆ ನಾಗರಿಕ ಸೌಲಭ್ಯಗಳ ಕೊರತೆ ಇವೇ ಮುಂತಾದ ಕಾರಣಗಳಿಂದ ನಗರ ಪರಿಸರದಲ್ಲಿ ಅನಾರೋಗ್ಯಕರ ಕೊಳಚೆ ಪ್ರದೇಶಗಳು (ಕೊಳಗೇರಿಗಳು) ಕಂಡುಬರುತ್ತಿರುವುದು ಸರ್ವೆಸಾಮಾನ್ಯವಾಗಿರುವುದು. ಈ ಸಮಸ್ಯೆಯನ್ನು ನಿವಾರಿಸಲು ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಳಿಯು ಗುಲಬರ್ಗಾ ಸೇರಿ ಎಂಟು ಜಿಲ್ಲೆಗಳನ್ನು ಒಳಗೊಂಡಂತೆ ಉತ್ತರ ವಲಯದ ವಿಭಾಗಿಯ ಕಛೇರಿಯನ್ನು ೧೯೮೦ರಲ್ಲಿ ಬೆಳಗಾವಿಯಲ್ಲಿ ಪ್ರಾರಂಭಿಸಿ ನಂತರ ೧೯೮೨ರಲ್ಲಿ ಹುಬ್ಬಳ್ಳಿಗೆ ವರ್ಗಾಯಿಸಲಾಯಿತು. ವಿಭಾಗೀಯ ಕಛೇರಿಯ ನಿಯಂತ್ರಣದಲ್ಲಿ ಗುಲಬರ್ಗಾವನ್ನು ಒಳಗೊಂಡಂತೆ ನಾಲ್ಕು ಉಪ ವಿಭಾಗಗಳು ಇರುವವು.

ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಳಿಯ ವರದಿ ತಿಳಿಸುವಂತೆ ೧೯೭೭ರಲ್ಲಿ ಜಿಲ್ಲೆಯಾದ್ಯಂತ ಇರುವ ಕೊಳಚೆ ಪ್ರದೇಶಗಳ ಸಂಖ್ಯೆ ಸುಮಾರು ೧೧೧ ಆಗಿದ್ದು ಗುಡಿಸಲುಗಳ ಸಂಖ್ಯೆ ಸುಮಾರು ೧೯,೮೩೪. ಆ ಪೈಕಿ ಸುಮಾರು ೩೦ ಕೊಳಚೆ ಪ್ರದೇಶಗಳು ಗುಲಬರ್ಗಾ ನಗರದಲ್ಲಿಯೇ ಇರುವವು. ನಂತರದ ಸ್ಥಾನ ಸಿಮೆಂಟ್ ನಗರವಾದ ಶಹಾಬಾದ್ (೧೭), ಯಾದಗೀರ (೧೪), ಸುರಪುರ (೧೨), ಗುರು ಮಠಕಲ್ (೧೦). ಬಹುಪಾಲು ಕೊಳಚೆ ಪ್ರದೇಶಗಳು ಸರ್ಕಾರಿ ಮತ್ತು ಪುರಸಭೆಯ ಮಾಲಿಕತ್ವದ ಜಮೀನಿನ ಮೇಲೆ ನೆಲೆಗೊಂಡಿರುವವು. ಗುಲಬರ್ಗಾ ನಗರ ಒಂದರಲ್ಲೇ ಇರುವ ಕೊಳಚೆ ಪ್ರದೇಶದ ಒಟ್ಟು ವಿಸ್ತೀರ್ಣ ಸುಮಾರು ೧೨೦ ಎಕರೆ ಆಗಿದ್ದರೆ ಅಲ್ಲಿರುವ ಒಟ್ಟು ಗುಡಿಸಲುಗಳ ಸಂಖ್ಯೆ ಸುಮಾರು ಐದು ಸಾವಿರ ಮೀರಿದೆ. ಕೊಳಚೆ ಮಂಡಳಿಯು ಗುಲಬರ್ಗಾ ಜಿಲ್ಲೆಯಲ್ಲಿ ಇದುವರೆಗೆ ಆರು ಪ್ರದೇಶದಲ್ಲಿ ಪುನರ್ ವಸತಿ ಸೌಲಭ್ಯದಂತೆ ೩೬೩ ಮನೆಗಳನ್ನು ರೂ. ೫೭.೯೬ ಲಕ್ಷ ವೆಚ್ಚದಲ್ಲಿ ನಿರ್ಮಿಸುವ ಮೂಲಕ ಒದಗಿಸಿದೆ. ಆರು ಪ್ರದೇಶಗಳ ಪೈಕಿ ಗುಲಬರ್ಗಾದ ಗಾಜಿಪುರ, ಟಾರಪೈಲ, ಜೋಶಿವಾಡ ಮತ್ತು ಸಂಜೀವ ನಗರ ಸೇರಿವೆ.

## ಪಂಚಾಯತಿ ರಾಜ್

ಪಂಚಾಯತಿ ರಾಜ್ ಪರಿಕಲ್ಪನೆಯ ಮುಖ್ಯ ಉದ್ದೇಶಗಳು ಪ್ರಜೆಗಳಿಗೆ ಹೆಚ್ಚಿನ ಅಧಿಕಾರ, ಆಡಳಿತದಲ್ಲಿ ವಿಕೇಂದ್ರಿಕರಣ, ಸ್ವಾಯತ್ತತೆ, ಸಮಗ್ರ ಗ್ರಾಮೀಣ ಅಭಿವೃದ್ಧಿ ಇವೇ ಮುಂತಾದವುಗಳು. ರಾಜ್ಯ ಪುನರ್ ರಚನೆಯ ನಂತರ ಕರ್ನಾಟಕದಲ್ಲಿ ೧೯೬೦ರಿಂದ ಏಕರೂಪದ ಮತ್ತು ಸಮಗ್ರ ಪಂಚಾಯತಿರಾಜ್ ಕಾನೂನ್ನು ಜಾರಿಯಲ್ಲಿ ತರಲಾಯಿತು. ಇದು ಮೂರು ಹಂತದ ಸಂಸ್ಥೆಗಳನ್ನು ಒಳಗೊಂಡಿತ್ತು. ಅವುಗಳೆಂದರೆ ಗ್ರಾಮಮಟ್ಟದಲ್ಲಿ ಗ್ರಾಮ ಪಂಚಾಯತಿ ತಾಲೂಕು ಮಟ್ಟದಲ್ಲಿ ತಾಲೂಕು ಅಭಿವೃದ್ಧಿ ಮಂಡಳಿ, ಮತ್ತು ಜಿಲ್ಲೆಗೆ ಒಂದರಂತೆ ಜಿಲ್ಲಾ ಅಭಿವೃದ್ಧಿ ಸಮಿತಿ. ಮೊದಲಿನ ಎರಡು ಸಂಸ್ಥೆಗಳು ಮಾತ್ರ ಚುನಾಯಿತ ಪ್ರತಿನಿಧಿಗಳನ್ನು ಒಳಗೊಂಡಿದ್ದರೆ ಜಿಲ್ಲಾ ಮಟ್ಟದ ಸಮಿತಿ ಆ ಜಿಲ್ಲೆಯ ಸಂಸತ್ ಸದಸ್ಯರು, ರಾಜ್ಯ ಶಾಸಕಾಂಗದ ಸದಸ್ಯರು, ತಾಲೂಕು ಅಭಿವೃದ್ಧಿ ಮಂಡಳಿಗಳ ಅಧ್ಯಕ್ಷರು ಮತ್ತು ಅಧಿಕಾರಿಗಳಿಂದ ಕೂಡಿದ ಸಲಹಾ ಸಮಿತಿಯಾಗಿತ್ತು. ಬಹುಪಾಲು ಅಭಿವೃದ್ಧಿ ಚಟುವಟಿಕೆಗಳು ತಾಲೂಕು ಮಂಡಳಿಗಳ ಮೂಲಕ ನಡೆಯುತ್ತಿದ್ದವು. ಈ ಬಗೆಯ ವ್ಯವಸ್ಥೆ ೧೯೮೫ರವರೆಗೆ ಮುಂದುವರೆಯಿತು.

ಪಂಚಾಯತಿ ರಾಜ್ ವ್ಯವಸ್ಥೆಯನ್ನು ಇನ್ನಷ್ಟು ಬಲಪಡಿಸಲು ಆಡಳಿತದಲ್ಲಿ ಹೆಚ್ಚಿನ ಸ್ವಾಯತ್ತತೆ, ವಿಕೇಂದ್ರಿಕರಣ ಸಾಧಿಸಲು ಸಹಾಯವಾಗುವಂತೆ ೧೯೮೩ರಲ್ಲಿ ಹೊಸ "ಪಂಚಾಯತಿರಾಜ್" ಕಾನೂನ್ನು ಅಳವಡಿಸಲಾಯಿತು. ಆದರೆ ಕಾನೂನು ಕಾರ್ಯ ರೂಪದಲ್ಲಿ ಬಂದದ್ದು ೧೪-೮-೧೯೮೫ರಿಂದ. ಇದರ ಪ್ರಯೋಗ ಪ್ರಾರಂಭವಾದ್ದು ೧೯೮೭ ರಲ್ಲಿ ಪ್ರಪ್ರಥಮವಾಗಿ ಈ ಸಂಸ್ಥೆಗಳಿಗೆ ಚುಣಾವಣೆ ನಡೆಸಿದ ನಂತರ. ಈ ಕಾನೂನಿನ ಅನ್ವಯ ರಚನೆಗೊಂಡ ಮೂರು ಹಂತದ ಸಂಸ್ಥೆಗಳು ಅಂದರೆ ಮಂಡಳ ಪಂಚಾಯತಿ, ತಾಲೂಕು ಪಂಚಾಯತಿ ಸಮಿತಿ ಮತ್ತು ಜಿಲ್ಲಾ ಪರಿಷತ್ ಆಗಿದ್ದವು. ಆದರೇ ಇದೇ ಕಾನೂನಿನಲ್ಲಿ ಅಡಕವಾಗಿದ್ದ ನ್ಯಾಯ ಪಂಚಾಯಿತಿಗಳು ಕೊನೆಯವರೆಗೂ ಕಾರ್ಯ ರೂಪದಲ್ಲಿ ಬರಲಿಲ್ಲ. ಈ ವ್ಯವಸ್ಥೆಯಲ್ಲಿ ಕೆಳಹಂತದಲ್ಲಿ ಮಂಡಳ ಪಂಚಾಯತಿಗಳು, ಮೇಲಿನ ಹಂತದಲ್ಲಿ ಜಿಲ್ಲಾ ಪರಿಷತ್ತುಗಳು ಮಾತ್ರ ಚುಣಾಯಿತ ಪ್ರತಿನಿಧಿಗಳನ್ನು ಒಳಗೊಂಡಿದ್ದವು. ತಾಲೂಕು ಪಂಚಾಯಿತಿ ಸಮಿತಿಗಳಿಗೆ ಯಾವುದೇ ವಿಶೇಷ ಅಧಿಕಾರ ಇರಲಿಲ್ಲ. ಇವು ಕೇವಲ ಸಲಹಾ ಸಮಿತಿಗಳಂತೆ ಜಿಲ್ಲಾ ಪರಿಷತ್ತಿನ ಅಧೀನದಲ್ಲಿ ಉಸ್ತುವಾರಿ ಸಂಸ್ಥೆಗಳಂತೆ ಕಾರ್ಯ ನಿರ್ವಹಿಸುತ್ತಿದ್ದವು. ಜಿಲ್ಲಾ ಪರಿಷತ್ತುಗಳು ಜಿಲ್ಲಾ ಮಟ್ಟದಲ್ಲಿ "ಸಮಾಂತರ ಸರ್ಕಾರದಂತೆ" ವ್ಯಾಪಕ ಅಧಿಕಾರ ಹೊಂದಿದ್ದವು. ರಾಜ್ಯದ ಬಹಪಾಲು ಅಭಿವೃದ್ಧಿ ಕಾರ್ಯಗಳು ಜಿಲ್ಲಾ ಪರಿಷತ್ ಮತ್ತು ಮಂಡಳ ಪಂಚಾಯತ್ ಮೂಲಕ ನಡೆಯುತ್ತಿದ್ದವು. ಮಂಡಳ ಪಂಚಾಯತಿಗಳು ಈ ಹಿಂದಿನ ಗ್ರಾಮ ಪಂಚಾಯತಿಗಿಂತ ಗಾತ್ರದಲ್ಲಿ ಬಹು ದೊಡ್ಡದಾಗಿದ್ದವು ಮತ್ತು ವ್ಯಾಪಕ ಅಧಿಕಾರ ಹೊಂದಿದ್ದವು. ಸಾಮಾನ್ಯವಾಗಿ ೮ ರಿಂದ ೧೨ ಸಾವಿರ ಮೀರದ ಜನಸಂಖ್ಯೆ ಇರುವ ಗ್ರಾಮ ಅಥವಾ ಗ್ರಾಮಗಳ ಗುಂಪಿಗೆ ಒಂದು ಮಂಡಳ ಪಂಚಾಯತಿಗಳನ್ನು ರಚಿಸಲಾಗಿತ್ತು. ರಾಜ್ಯದಲ್ಲಿ ಸುಮಾರು ೨,೫೦೦ ಮಂಡಳ ಪಂಚಾಯತ್‌ಗಳು ಕಾರ್ಯ ನಿರ್ವಹಿಸುತ್ತದ್ದವು. ಒಟ್ಟು ಸದಸ್ಯರ ಪೈಕಿ ಶೇ. ೨೫ ರಷ್ಟು ಸ್ಥಾನಗಳು ಮಹಿಳೆಯರಿಗೆ, ಶೇ. ೧೮ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದವರಿಗೆ ಮೀಸಲಾಗಿದ್ದವು. ಹಿಂದುಳಿದ ವರ್ಗದವರಿಗೆ ನಾಮಕರಣ ಮಾಡುವ ವ್ಯವಸ್ಥೆ ಇತ್ತು. ಈ ಆಡಳಿತ ವ್ಯವಸ್ಥೆ ಸುಮಾರು ೫ ವರ್ಷಗಳ ಕಾಲ ಅಂದರೆ ೧೯೯೨ರವರೆಗೆ ಮುಂದುವರೆಯಿತು.

ಗುಲಬರ್ಗಾ ಜಿಲ್ಲೆಯಲ್ಲಿ ಒಟ್ಟು ೧೦ ತಾಲೂಕುಗಳು, ೪೮ ಹೋಬಳಿಗಳು ಇದ್ದವು. ೧೯೮೭ ಏಪ್ರಿಲ್ ಒಂದರಿಂದ ಜಿಲ್ಲಾ ಪರಿಷತ್ತುಗಳು ಅಸ್ತಿತ್ವಕ್ಕೆ ಬಂದನಂತರ ಈ ಹಿಂದೆ ಇದ್ದ ಪಂಚಾಯಿತಿಗಳ ಬದಲಾಗಿ ೧೬೯ ಮಂಡಳಪಂಚಾಯತಿಗಳು ರಚನೆಗೊಂಡವು. ತಾಲೂಕುವಾರು ಮಂಡಳ ಪಂಚಾಯತಿಗಳ ಹಂಚಿಕೆ ಈ ರೀತಿ ಇತ್ತು. ಅಫಜಲಪುರ (೧೩), ಆಳಂದ (೨೧), ಚಿಂಚೋಳಿ (೧೬), ಚಿತ್ತಾಪುರ (೨೦), ಗುಲಬರ್ಗಾ (೧೯), ಜೇವರ್ಗಿ (೧೬), ಸೇಡಂ (೧೧), ಶಹಾಪುರ (೧೭), ಸುರಪುರ (೧೮), ಮತ್ತು ಯಾದಗಿರ (೧೮), ಒಟ್ಟು ಚುಣಾಯಿತ ಮಂಡಳ ಪಂಚಾಯತಿಗಳ ಸದಸ್ಯರ ಸಂಖ್ಯೆ ೩,೬೧೭ ಆಗಿತ್ತು.

## ಗ್ರಾಮ ಪಂಚಾಯತಿಗಳು

ಸ್ವಾತಂತ್ರ್ಯ ಪೂರ್ವದಲ್ಲಿ ಹೈದರಾಬಾದ್ ಸಂಸ್ಥಾನದ ಆಡಳಿತ ಪ್ರದೇಶಗಳಲ್ಲಿ ಪಂಚಾಯತಿ ರಾಜ್ ವ್ಯವಸ್ಥೆಯ ತಾಯಿಬೇರುಗಳಾದ ಗ್ರಾಮಪಂಚಾಯತಿಗಳು ೧೯೪೧-೪೨ರಲ್ಲಿ ಹೈದರಾಬಾದ್ ಗ್ರಾಮಪಂಚಾಯತಿಗಳ ಅಧಿನಿಯಮವನ್ನು ಜಾರಿಯಲ್ಲಿ ತರುವ ಮೂಲಕ ಪ್ರಾರಂಭವಾದವು. ರಾಜ್ಯ ಪುನರ್ ರಚನೆಯ ನಂತರ ೧೯೫೯ರಲ್ಲಿ ಸಮಗ್ರ ರಾಜ್ಯಕ್ಕೆ ಅನ್ವಯವಾಗುವ ಕರ್ನಾಟಕ ಲೋಕಲ್ ಬೋರ್ಡ್ ಮತ್ತು ಗ್ರಾಮಪಂಚಾಯತಿ ಅಧಿನಿಯಮ ೧೯೬೦ರಿಂದ ಜಾರಿಯಲ್ಲಿ ಬಂದಿತು. ಈ ಕಾಯ್ದೆಗೆ ಪೂರ್ವದಲ್ಲಿ ೧೯೫೧ರಲ್ಲಿ ಹೈದರಾಬಾದ್ ಸರ್ಕಾರವು ಹೈದ್ರಾಬಾದ ಗ್ರಾಮಪಂಚಾಯತಿ ಕಾಯ್ದೆಯನ್ನು ಜಾರಿಯಲ್ಲಿ ತಂದಿತ್ತು. ೧೯೫೬ರಲ್ಲಿ ಪುನಃ ಹೊಸದಾಗಿ ಹೈದರಾಬಾದ್ ಗ್ರಾಮ ಪಂಚಾಯತ್ ಕಾನೂನನ್ನು ಜಾರಿಯಲ್ಲಿ ತರಲಾಯಿತು. ಏಕೀಕರಣದ ನಂತರ ೧೯೫೯ರ ಕಾನೂನು ಜಾರಿಯಲ್ಲಿ ಬಂದ ನಂತರ ಗುಲಬರ್ಗಾ ಜಿಲ್ಲೆಯಲ್ಲಿ ೫೧೦ ಗ್ರಾಮಪಂಚಾಯತಿಗಳು ೬ ಟೌನ್ ಪಂಚಾಯತಿಗಳು ಅಸ್ತಿತ್ವದಲ್ಲಿ ಇದ್ದವು. ೧೯೫೯ರ ಕಾನೂನಿನ ಅನ್ವಯ ಪ್ರಥಮ ಬಾರಿಗೆ ಟೌನ್ ಪಂಚಾಯತಿಗಳು ರೂಢಿಯಲ್ಲಿ ಬಂದವು. ಇವುಗಳು ಗ್ರಾಮಪಂಚಾಯತಿಗಿಂತ ದೊಡ್ಡವು (೧೦,೦೦೦ ಜನಸಂಖ್ಯೆ) ಆದರೆ ಪುರಸಭೆಗಳಿಗಿಂತ ಚಿಕ್ಕಸಂಸ್ಥೆಗಳು ಆಗಿದ್ದವು. ಇವುಗಳು ತಾಲೂಕು ಅಭಿವೃದ್ಧಿ ಮಂಡಳಿಗಳ ನಿಯಂತ್ರಣದಲ್ಲಿ ಕಾರ್ಯ ನಿರ್ವಹಿಸುತ್ತಿದ್ದವು. ಪ್ರಾರಂಭದಲ್ಲಿ ಗ್ರಾಮ ಪಂಚಾಯತಿಗಳ ಸದಸ್ಯರ ಅಧಿಕಾರ ಅವಧಿ ನಾಲ್ಕು ವರ್ಷಗಳದ್ದಾಗಿತ್ತು, ಈಗ ಐದು ವರ್ಷ. ೧೯೬೧ರಲ್ಲಿ ೫೧೬ ಗ್ರಾಮ ಪಂಚಾಯತಿಯ ಒಟ್ಟು ಚುಣಾಯಿತ ಸದಸ್ಯರ ಸಂಖ್ಯೆ ೬,೭೦೦ ಆಗಿದ್ದರೆ ಆ ಪೈಕಿ ೧,೦೩೪ ಸ್ಥಾನಗಳು ಮಹಿಳೆಯರಿಗೆ ೯೩೨ ಪರಿಶಿಷ್ಟ ಜಾತಿಯವರಿಗೆ ಮೀಸಲಾಗಿದ್ದವು. ಪರಿಶಿಷ್ಟ ಪಂಗಡದವರಿಗೆ

ಯಾವುದೇ ಮೀಸಲಾತಿ ಇರಲಿಲ್ಲ. ೧೯೭೯ ರಲ್ಲಿ ಜಿಲ್ಲೆಯಲ್ಲಿನ ಗ್ರಾಮ ಪಂಚಾಯಿತಿಗಳ ಸಂಖ್ಯೆ ೫೨೦ ಆಗಿತ್ತು. ಅವುಗಳ ತಾಲೂಕುವಾರು ಹಂಚಿಕೆ ಈ ರೀತಿ ಇತ್ತು. ಗುಲಬರ್ಗಾ (೫೫), ಆಳಂದ (೬೩), ಅಫಜಲಪುರ (೪೦), ಜೇವರ್ಗಿ (೪೬), ಸೇಡಂ (೪೦), ಚಿತ್ತಾಪುರ (೬೦), ಚಿಂಚೋಳಿ (೪೫), ಯಾದಗೀರ (೭೯), ಸುರಪುರ (೫೪) ಮತ್ತು ಶಹಾಪುರ (೪೮).

## ಕರ್ನಾಟಕ ಪಂಚಾಯತಿ ಕಾನೂನು ೧೯೯೩

ಪಂಚಾಯತಿ ರಾಜ್ ಸಂಸ್ಥೆಗಳನ್ನು ಇನ್ನೂ ಹೆಚ್ಚು ಬಲಪಡಿಸುವ ಮತ್ತು ಆಯಾ ಹಂತಗಳಲ್ಲಿ ವಿಕೇಂದ್ರಿಕರಣ, ದಕ್ಷತೆ, ಹಿಂದುಳಿದವರಿಗೆ ಮತ್ತು ಮಹಿಳೆಯರಿಗೆ ಹೆಚ್ಚಿನ ಮೀಸಲಾತಿ ಸೌಲಭ್ಯ, ಮೂರೂ ಹಂತಗಳಲ್ಲಿ ಚುನಾಯಿತ ಮಂಡಳಿಯ ರಚನೆ, ಇವುಗಳನ್ನು ಒಳಗೊಂಡಂತೆ ವ್ಯಾಪಕ ಬದಲಾವಣೆಗಳೊಂದಿಗೆ ಹೊಸದಾಗಿ ರಚಿತವಾದ ಕರ್ನಾಟಕ ಪಂಚಾಯತಿ ರಾಜ್ ಕಾನೂನನ್ನು ೧೯೯೩ ಮೇ ತಿಂಗಳ ೧೦ ರಿಂದ ಜಾರಿಯಲ್ಲಿ ತರಲಾಯಿತು. ಇದರಿಂದ ಮೊದಲಿನ ಮಂಡಳ ಪಂಚಾಯತಿ, ತಾಲೂಕು ಪಂಚಾಯತಿ ಸಮಿತಿ ಮತ್ತು ಜಿಲ್ಲಾ ಪರಿಷತ್ತುಗಳು ರದ್ದಾದವು. ಸದ್ಯದ ಕಾನೂನಿನಲ್ಲಿ ಮೂರು ಹಂತದ ಅಂದರೆ ಗ್ರಾಮ ಪಂಚಾಯತಿ, ತಾಲೂಕು ಪಂಚಾಯಿತಿ ಮತ್ತು ಜಿಲ್ಲಾ ಪಂಚಾಯತಿಯ ರಚನೆಗೆ ಅವಕಾಶ ಇದ್ದು ಈಎಲ್ಲಾ ಸಂಸ್ಥೆಗಳಲ್ಲಿ ಚುಣಾಯಿತ ಸದಸ್ಯರು ಇರುವರು. ಪಂಚಾಯತಿ ರಾಜ್ ಸಂಸ್ಥೆಗಳಿಗೆ ಅನ್ವಯಿಸುವಂತೆ ಸಂವಿಧಾನದ ೭೩ನೇ ವಿಧಿಯ ಎಲ್ಲಾ ತಿದ್ದುಪಡಿಗಳನ್ನು ಅಳವಡಿಸಿಕೊಂಡು ಜಾರಿಗೆ ತರುವಲ್ಲಿ ಕರ್ನಾಟಕವು ದೇಶದಲ್ಲಿಯೇ ಪ್ರಥಮ ರಾಜ್ಯವಾಗಿದೆ.

## ಗ್ರಾಮ ಪಂಚಾಯತಿ

ಪಂಚಾಯತಿ ರಾಜ್ ಸಂಸ್ಥೆಗಳಲ್ಲಿ ಇದು ಅತ್ಯಂತ ಪ್ರಮುಖವಾದ ಮತ್ತು ಮೂಲ ಭೂತವಾದ ಬಹು ಹಿಂದಿನಿಂದಲೂ ರೂಢಿಯಲ್ಲಿದ್ದ ಸಂಸ್ಥೆಯಾಗಿದೆ. 'ಗ್ರಾಮಸ್ವರಾಜ್ಯ', 'ಸುರಾಜ್ಯ', 'ರಾಮರಾಜ್ಯ' ಮುಂತಾದ ಪರಿಕಲ್ಪನೆಗಳು ಕಾರ್ಯ ರೂಪದಲ್ಲಿ ಬರಬೇಕಾದುದು ಈ ಸಂಸ್ಥೆಯ ಮೂಲಕವೆ. ಸದ್ಯದ ಕಾನೂನಿ ಅನ್ವಯ ಐದರಿಂದ ಏಳುಸಾವಿರ ಪ್ರಜಾಸಂಖ್ಯೆಯುಳ್ಳ ಒಂದು ದೊಡ್ಡ ಗ್ರಾಮ ಅಥವಾ ಹಲವಾರು ನೆರೆಯ ಗುಂಪು ಗ್ರಾಮಗಳನ್ನು ಒಳಗೊಂಡಂತೆ ಪಂಚಾಯತಿಯ ರಚನೆಗೆ ಅವಕಾಶ ಇರುವುದು. ವಿಶೇಷ ಸಂದರ್ಭಗಳಲ್ಲಿ (ಮಲೆನಾಡು, ಬೆಟ್ಟಪ್ರದೇಶ) ೨,೫೦೦ ಜನಸಂಖ್ಯೆಗೆ ಸೀಮಿತವಾದಂತೆ ಪಂಚಾಯತಿಯನ್ನು ರಚಿಸಬಹುದು. ಹೊಸ ಕಾನೂನಿನ ಅನ್ವಯ ರಾಜ್ಯದಲ್ಲಿ ಸುಮಾರು ೫,೬೪೫ ಗ್ರಾಮ ಪಂಚಾಯತಿಗಳು ರಚನೆಯಾಗಿರುವವು. ಗ್ರಾಮ ಪಂಚಾಯತಿಗೆ ಪ್ರತಿ ೪೦೦ ಜನಸಂಖ್ಯೆಗೆ ಒಬ್ಬರಂತೆ ಪ್ರತಿನಿಧಿಗಳ ಆಯ್ಕೆ ಮಾಡಲಾಗುವುದು. ಚುಣಾಯಿತ ಪ್ರತಿನಿಧಿಗಳ ಅಧಿಕಾರದ ಅವಧಿ ಐದು ವರ್ಷಗಳು. ಗ್ರಾಮ ಮಟ್ಟದಲ್ಲಿ ನಡೆಯುವ ಚುಣಾವಣೆಗಳು ಪಕ್ಷಾತೀತವಾಗಿರುವುದು ಈ ಹೊಸ ಕಾನೂನಿ ವೈಶಿಷ್ಟ್ಯ. ಇದರಿಂದ ಗ್ರಾಮ ಜೀವನದಲ್ಲಿ ರಾಜಕೀಯ ಅಸೂಯೆ, ದ್ವೇಷ, ಅಶಾಂತಿ ಬೆಳೆಯಲು ಅವಕಾಶವಾಗುವುದಿಲ್ಲ ಎಂದು ನಂಬಲಾಗಿದೆ. ಒಟ್ಟು ಸದಸ್ಯರ ಸಂಖ್ಯೆಯಲ್ಲಿ ಎಲ್ಲಾ ವರ್ಗಗಳಲ್ಲಿ ಮೂರನೆಯ ಒಂದರಷ್ಟ ಸ್ಥಾನಗಳಿಗೆ ಮಹಿಳೆಯರಿಗೆ ಮೀಸಲಾತಿ ಉಂಟು. ಅಲ್ಲದೆ ಹಿಂದುಳಿದವರಿಗೆ ಸಹ ಮೂರನೇ ಒಂದರಷ್ಟು ಸ್ಥಾನಗಳನ್ನು ಕಾಯ್ದಿರಿಸಲಾಗಿದೆ. ಹೊಸ ವ್ಯವಸ್ಥೆಯಲ್ಲಿ ಅಧ್ಯಕ್ಷ, ಉಪಾಧ್ಯಕ್ಷ ಮುಂತಾದ ಪದಾಧಿಕಾರಿಗಳ ಹುದ್ದೆಗಳಿಗೂ ಮೀಸಲಾತಿ ಸೌಲಭ್ಯವನ್ನು ಕಲ್ಪಿಸಲಾಗಿದೆ (೨೦ ತಿಂಗಳಿಗೆ ಒಬ್ಬರಂತೆ). ಸದಸ್ಯರ ನಾಮಕರಣ ವ್ರವಸ್ಥೆಯನ್ನು ಸಂಪೂರ್ಣವಾಗಿ ತೆಗೆದುಹಾಕಲಾಗಿದೆ.

## ಗ್ರಾಮಸಭೆ

ಸದ್ಯದ ಗ್ರಾಮ ಪಂಚಾಯತಿಯ ಆಡಳಿತ ವ್ಯವಸ್ಥೆಯಲ್ಲಿ ಗ್ರಾಮಸಭೆಗೆ ಹೆಚ್ಚಿನ ಮಹತ್ವ ಉಂಟು. ಇದು ಗ್ರಾಮದ ಎಲ್ಲಾ ಮತದಾರರನ್ನು ಒಳಗೊಂಡಿರುವುದು, ಕನಿಷ್ಟ ಆರು ತಿಂಗಳಿಗೆ ಒಮ್ಮೆಯಾದರೂ ಇದು ಸೇರಲೇಬೇಕು. ಪಂಚಾಯತಿಯ ಅಧ್ಯಕ್ಷರು ಈ ಸಭೆಯ ಅಧ್ಯಕ್ಷತೆಯನ್ನು ವಹಿಸುವರು. ಈ ಸಭೆಗೆ ಪಂಚಾಯತಿಯ ಆಡಳಿತ ವರದಿ, ಅಭಿವೃದ್ಧಿ ಕಾರ್ಯಗಳ ಯೋಜನಾ ವರದಿ, ಗ್ರಾಮಕ್ಕೆ ಆಗಬೇಕಾದ ಸೌಕರ್ಯಗಳು, ಜನರ ಸಮಸ್ಯೆಗಳು ಮುಂತಾದ ಹಲವಾರು ಮಹತ್ವದ ವಿಷಯಗಳನ್ನು ಚರ್ಚಿಸುವ ಮತ್ತು ನಿರ್ಣಯಿಸುವ ಅಧಿಕಾರ ಉಂಟು. ಸರ್ಕಾರ ನೀಡುವ ವಿವಿಧ ಸವಲತ್ತುಗಳನ್ನು ಪಡೆಯಲು ಫಲಾನುಭವಿಗಳನ್ನು ಆಯ್ಕೆ ಮಾಡುವ ಅಧಿಕಾವೂ ಈ ಸಭೆಗೆ ಇದೆ. ಗ್ರಾಮದಲ್ಲಿ ಶಾಂತಿ, ಸುವ್ಯವಸ್ಥೆ,

ಸಹಬಾಳುವೆ, ನೆಲೆಸುವಂತೆ ಮಾಡುವುದು, ವಯಸ್ಕರ ಶಿಕ್ಷಣ ಯೋಜನೆಯನ್ನು ಜಾರಿಗೊಳಿಸುವುದು ಗ್ರಾಮ ಸಭೆಯ ಹೊಣೆಗಾರಿಕೆಯಾಗಿರುವುದು. ಗ್ರಾಮ ಸಭೆಯ ನಿರ್ಣಯಗಳನ್ನು ಕಾರ್ಯ ರೂಪದಲ್ಲಿ ತರುವುದು ಪಂಚಾಯತಿಯ ಕರ್ತವ್ಯ. ಪಂಚಾಯತಿಯು ಕನಿಷ್ಟಪಕ್ಷ ಎರಡು ತಿಂಗಳಿಗೆ ಒಮ್ಮೆಯಾದರೂ ಸಭೆ ಸೇರಿ, ತನ್ನ ಕಾರ್ಯ ಕಲಾಪಗಳನ್ನು ನಡೆಸಬೇಕು. ಪಂಚಾಯತಿಯ ಆಡಳಿತ ಸಮರ್ಪಕವಾಗಿ ನಡೆಯಲು ಸಹಾಯಕವಾಗುವಂತೆ ಹಲವಾರು ಉಪಸಮಿತಿಗಳನ್ನು ರಚಿಸಬಹುದಾಗಿದೆ. ಪ್ರತಿ ಒಂದು ಪಂಚಾಯತಿಗೆ ಸರ್ಕಾರ ಒಂದು ಲಕ್ಷ ರೂ. ಅನುದಾನ ನೀಡುವುದು. ಈ ಹಣವನ್ನು ಅತ್ಯಾವಶ್ಯಕ ವೆಚ್ಚಗಳಾದ ವಿದ್ಯುತ್ ಪೂರೈಕೆ, ನೀರು ಸರಬರಾಜು, ಗ್ರಾಮನೈರ್ಮಲ್ಯ ಮುಂತಾದವುಗಳಿಗೆ ಮಾತ್ರ ಖರ್ಚು ಮಾಡಬೇಕಾಗುವುದು.

ಗ್ರಾಮಪಂಚಾಯತಿಯ ಕರ್ತವ್ಯಗಳು ವ್ಯಾಪಕವಾಗಿದ್ದು, ಹೊಸ ಕಾನೂನಿನ ಅನ್ವಯ ಸುಮಾರು ೩೦ ವಿವಿಧ ಬಗೆಯ ಅಭಿವೃದ್ಧಿ ಕಾರ್ಯಗಳನ್ನು ಪಂಚಾಯತಿಯು ಕೈಗೊಳ್ಳಬಹುದಾಗಿದೆ. ಅವುಗಳಲ್ಲಿ ಬಹು ಮುಖ್ಯವಾದವುಗಳು : ಗ್ರಾಮ ನೈರ್ಮಲ್ಯ ಮತ್ತು ಆರೋಗ್ಯ ಪಾಲನೆ, ಶುದ್ಧವಾದ ಕುಡಿಯುವ ನೀರಿನ ಪೂರೈಕೆ, ರಸ್ತೆ ದೀಪ, ಚರಂಡಿ ವ್ಯವಸ್ಥೆ, ವ್ಯವಸಾಯ ಅಭಿವೃದ್ಧಿ, ಪಶುಸಂಗೋಪನೆ, ಸಾಮಾಜಿಕ ಅರಣ್ಣೀಕರಣ, ಗ್ರಾಮೀಣ ವಸತಿ ಯೋಜನೆ, ಪ್ರಾಥಮಿಕ ಶಿಕ್ಷಣ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಮತ್ತು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಹಿಂದುಳಿದವರ ಅಭಿವೃದ್ಧಿ ಮುಂತಾದವುಗಳು.

ಹಣಕಾಸು : ಗ್ರಾಮಪಂಚಾಯತಿಯು ತನ್ನ ಆಡಳಿತ ವ್ಯಾಪ್ತಿಯಲ್ಲಿ ಹಲವಾರು ತೆರಿಗೆಗಳನ್ನು ವಿಧಿಸಬಹುದಾಗಿದೆ. ಅವುಗಳೆಂದರೆ ಮನೆ ಕಂದಾಯ, ಖಾಲಿ ಇರುವ ನಿವೇಶನಗಳ ಮೇಲಿನ ಕಂದಾಯ, ನೀರಿನ ತೆರಿಗೆ, ಮನರಂಜನಾ ತೆರಿಗೆ, ಮೋಟಾರ್ ವಾಹನ ಹೊರತು ಪಡಿಸಿ ಇತರೇ ವಾಹನಗಳ ಮೇಲಿನ ತೆರಿಗೆ, ಯಾತ್ರಿಕರ ಮೇಲಿನ ಜಾತ್ರೆ ತೆರಿಗೆ, ಮಾರುಕಟ್ಟೆ ಸುಂಕ ಇತ್ಯಾದಿ. ಸರ್ಕಾರ ಭೂಕಂದಾಯದ ಮೇಲೆ ವಿಧಿಸುವ ಸ್ಥಳೀಯ ಉಪತೆರಿಗೆ (ಸೆಸ್ಸ್)ಗಳ ಸಂಪೂರ್ಣ ಮೊತ್ತವನ್ನು ಸಂಬಂಧಪಟ್ಟ ಗ್ರಾಮ ಪಂಚಾಯತಿಗಳಿಗೆ ವರ್ಗಾಯಿಸುವುದು. ವಿಶೇಷ ಸಂದರ್ಭಗಳಲ್ಲಿ ಸರ್ಕಾರವು ಪಂಚಾಯತಿಗಳಿಗೆ ಅನುದಾನ ನೀಡುವುದು. ಪ್ರತಿ ಪಂಚಾಯತಿಯು ತನ್ನದೇ ಆದ ಗ್ರಾಮ ಪಂಚಾಯತಿ ಫಂಡನ್ನು (ನಿಧಿ) ಹೊಂದಿರಬಹುದಾಗಿದೆ.

**ತಾಲೂಕು ಪಂಚಾಯಿತಿ**

ಪ್ರತಿ ಒಂದು ಕಂದಾಯ ತಾಲೂಕಿಗೆ ಒಂದರಂತೆ ಈ ಪಂಚಾಯತಿಗಳು ರಚನೆಗೊಂಡಿರುವವು. ಹಿಂದಿನ ತಾಲೂಕು ಅಭಿವೃದ್ಧಿ ಮಂಡಳಿಗಳಂತೆ ಇವು ಚುನಾಯಿತ ಪ್ರತಿನಿಧಿಗಳನ್ನು ಒಳಗೊಂಡಿದ್ದು ಅದರ ಕಾರ್ಯವ್ಯಾಪ್ತಿ ಆಯಾ ತಾಲೂಕಿನಲ್ಲಿ ಬರುವ ನಗರಸಭೆ/ ಪುರಸಭೆ ಇವುಗಳನ್ನು ಹೊರತುಪಡಿಸಿ ಉಳಿದ ಗ್ರಾಮೀಣ ಪ್ರದೇಶಕ್ಕೆ ಸೀಮಿತವಾಗಿರುವುದು. ತಾಲೂಕು ಪಂಚಾಯತಿಯು ಪ್ರತಿ ೧೦ ಸಾವಿರ ಜನಸಂಖ್ಯೆಗೆ ಒಬ್ಬರಂತೆ (ಕನಿಷ್ಟ ೧೧ ಜನ) ಪ್ರತಿನಿಧಿಗಳನ್ನು ಹೊಂದಿರುವುದು ಅಲ್ಲದೆ ಆಯಾ ತಾಲೂಕಿನಲ್ಲಿ ಮತದಾರರೆಂದು ನೋಂದಾಯಿಸಲ್ಪಟ್ಟಿರುವ ಸಂಸತ್ತ ಸದಸ್ಯರು, ಮತ್ತು ತಾಲೂಕನ್ನು ಪ್ರತಿನಿಧಿಸುವ ಶಾಸಕರನ್ನು ಒಳಗೊಂಡಿರುವುದು. ತಾಲೂಕು ಪಂಚಾಯತಿಯು ಆಯಾ ತಾಲೂಕಿನ ಗ್ರಾಮ ಪಂಚಾಯತಿಗಳ ೧/೫ ಭಾಗದಷ್ಟು ಅಧ್ಯಕ್ಷರನ್ನು ಸಹ ಸರತಿಯ ಪ್ರಕಾರ ಒಂದು ವರ್ಷದವರೆಗೆ ಒಳಗೊಂಡಿರುವುದು. ಇಲ್ಲಿಯೂ ಮಹಿಳೆಯರಿಗೆ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದವರಿಗೆ ಮೀಸಲಾತಿ ಉಂಟು. ಈ ಜಿಲ್ಲೆಯಲ್ಲಿ ತಾಲೂಕು ಪಂಚಾಯತಿಯ ಒಟ್ಟು ಸ್ಥಾನಗಳ ಸಂಖ್ಯೆ ೨೦೫. ಅವುಗಳ ತಾಲೂಕುವಾರ ಹಂಚಿಕೆ ಈ ರೀತಿ ಇರುವುದು :

ಅಫಜಲಪುರ (೧೬), ಆಳಂದ (೨೪), ಗುಲಬರ್ಗಾ (೨೨), ಜೇವರ್ಗಿ (೧೯), ಸೇಡಂ (೧೪), ಚಿತ್ತಾಪುರ (೨೧), ಚಿಂಚೋಳಿ (೧೯), ಯಾದಗಿರಿ (೨೨), ಶಹಾಪುರ (೨೧) ಮತ್ತು ಸುರಪುರ(೨೭).

## ಜಿಲ್ಲಾ ಪಂಚಾಯತಿ

ಪಂಚಾಯತಿರಾಜ್ ಸಂಸ್ಥೆಗಳಲ್ಲಿ ಜಿಲ್ಲಾ ಮಟ್ಟದಲ್ಲಿ ಇದು ಅತ್ಯಂತ ಪ್ರಮುಖವಾದುದು ಮತ್ತು ಹೆಚ್ಚು ಅದಿಕಾರ ಯುತವಾದದ್ದು. ಬಹುಪಾಲು ಗ್ರಾಮೀಣ ಅಭಿವೃದ್ಧಿ ಯೋಜನೆಗಳು ಈ ಸಂಸ್ಥೆಯ ಮೂಲಕ ಪ್ರವಹಿಸುವವು. ಇದರ ಕಾರ್ಯ ವ್ಯಾಪ್ತಿ ನಗರ ಸ್ಥಾನಿಕ ಸಂಸ್ಥೆಗಳನ್ನು ಹೊರತುಪಡಿಸಿ ಗ್ರಾಮೀಣ ಪ್ರದೇಶಗಳನ್ನು ಮಾತ್ರ ಒಳಗೊಂಡಿರುವುದು. ಇದು ಚುಣಾಯಿತ ಪ್ರತಿನಿಧಿಗಳನ್ನು ಅಲ್ಲದೇ ಜಿಲ್ಲೆಯನ್ನು ಪ್ರತಿನಿಧಿಸುವ ಲೋಕಸಭೆ, ರಾಜ್ಯ ಸಭೆಯ ಸದಸ್ಯರು,ರಾಜ್ಯ ಶಾಸಕಾಂಗದ ಎರಡೂ ಮನೆಗಳ ಸದಸ್ಯರು, ತಾಲೂಕು ಪಂಚಾಯತ್‌ಗಳ ಅಧ್ಯಕ್ಷರನ್ನು ಒಳಗೊಂಡಿರುವುದು.

ಜಿಲ್ಲಾ ಪಂಚಾಯತ್‌ಗೆ ಪ್ರತಿ ೪೦ ಸಾವಿರ ಜನಸಂಖ್ಯೆಗೆ ಒಬ್ಬರಂತೆ ಚುಣಾಯಿತ ಸದಸ್ಯರು ಇರುವರು (ಕೊಡಗು, ಉತ್ತರ ಕನ್ನಡ, ಚಿಕ್ಕಮಗಳೂರು ಜಿಲ್ಲೆ ಹೊರತು ಪಡಿಸಿ ಅಲ್ಲಿ ೩೦,೦೦೦ ಜನ ಸಂಖ್ಯೆಗೆ ಒಬ್ಬರಂತೆ). ಒಟ್ಟು ಚುಣಾಯಿತ ಸದಸ್ಯರ ಸಂಖ್ಯೆಯಲ್ಲಿ ಎಲ್ಲಾ ವರ್ಗಗಳಿಗೆ ಅನ್ವಯವಾಗುವಂತೆ ಮೂರನೆಯ ಒಂದರಷ್ಟು ಸ್ಥಾನಗಳು ಮಹಿಳೆಯರಿಗೆ ಕಾಯ್ದಿರಿಸಲಾಗಿದೆ.

ಆಡಳಿತ : ಪ್ರಚಲಿತ ಕಾನೂನಿನ ಅನ್ವಯ ಜಿಲ್ಲಾ ಪಂಚಾಯತಿಯು ಕನಿಷ್ಟ ಎರಡು ತಿಂಗಳಿಗೆ ಒಮ್ಮೆಯಾದರೂ ಸಭೆ ನಡೆಸಬೇಕು. ಸಭೆಯ ಅಧ್ಯಕ್ಷತೆಯನ್ನು ಜಿಲ್ಲಾ ಪಂಚಾಯತ್ ಅಧ್ಯಕ್ಷರು ವಹಿಸುವರು. ಪಂಚಾಯತಿಯ ಸಭೆಯಲ್ಲಿ ಮಂಡಿಸಿ ಒಪ್ಪಿಗೆಯಾದ ಪ್ರತಿ ಒಂದು ಗೊತ್ತುವಳಿಯ ನಕಲನ್ನು ವಿಭಾಗೀಯ ಕಮಿಷನರ್ ಅವರಿಗೆ ಕಳುಹಿಸಿಕೊಡಬೇಕು. ಕಾನೂನಿನಲ್ಲಿ ಚುಣಾಯಿತ ಪ್ರತಿನಿಧಿಗಳನ್ನು ಒಳಗೊಂಡ ಐದು ಸ್ಥಾಯೀ ಸಮಿತಿಗಳನ್ನು ರಚಿಸಲು ಅವಕಾಶ ಇರುವುದು. ಅವುಗಳೆಂದರೆ ೧) ಸಾಮಾನ್ಯ (ಜನರಲ್) ಸಮಿತಿ, ೨) ಹಣಕಾಸು, ಲೆಕ್ಕ ತಪಾಸಣೆ ಮತ್ತು ಯೋಜನೆ, (೩) ಸಾಮಾಜಿಕ ನ್ಯಾಯ, (೪) ಶಿಕ್ಷಣ ಮತ್ತು ಆರೋಗ್ಯ, (೫) ವ್ಯವಸಾಯ ಮತ್ತು ಕೈಗಾರಿಕಾ ಸಮಿತಿ.

ಜಿಲ್ಲಾ ಪಂಚಾಯತಿಯ ಆಡಳಿತದ ಪ್ರತಿ ಒಂದು ವಿಭಾಗ, ಅಭಿವೃದ್ಧಿ ಯೋಜನೆಗಳ ಅನುಷ್ಠಾನದ ಹಣಕಾಸಿನ ನಿರ್ವಹಣೆ, ಸಿಬ್ಬಂದಿಯ ನಿಯಂತ್ರಣ ಮುಂತಾದವುಗಳ ಮೇಲೆ ಅಧ್ಯಕ್ಷರ ಪರಮಾಧಿಕಾರ ಇರುವುದು. ನೈಸರ್ಗಿಕ ವಿಪತ್ತು ಮುಂತಾದ ಸಂದರ್ಭಗಳಲ್ಲಿ ಅವುಗಳ ಪರಿಹಾರ ಕ್ರಮಕ್ಕಾಗಿ ಅದ್ಯಕ್ಷರು ಒಂದು ಲಕ್ಷ ರೂ.ವರೆಗೆ ಹಣವನ್ನು ಮಂಜೂರು ಮಾಡಬಹುದು. ಜಿಲ್ಲಾಧಿಕಾರಿ ದರ್ಜೆಯ ಅಧಿಕಾರಿಯು ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯಾಗಿರುವರು. ಹೊಸ ಕಾನೂನಿನ ಅನ್ವಯ ಜಿಲ್ಲೆಗೆ ಪ್ರತ್ಯೇಕವಾದ ಜಿಲ್ಲಾ ಯೋಜನಾ ಸಮಿತಿಯನ್ನು ನಿಯಮಿಸಲು ಅವಕಾಶ ಇರುವುದು. ಇದರಿಂದ ಯೋಜನೆಯ ಪರಿಣಾಮಕಾರಿಯಾದ ಅನುಷ್ಠಾನ ಮತ್ತು ಯೋಜನೆಯ ಗುಣಮಟ್ಟದಲ್ಲಿ ಸುಧಾರಣೆ ಕಂಡುಬರುವ ಸಾಧ್ಯತೆಗಳು ಉಂಟು. ಗ್ರಾಮ ಪಂಚಾಯತಿ, ತಾಲೂಕು ಮತ್ತು ಜಿಲ್ಲಾ ಪಂಚಾಯತಿಗಳು ಸಮರ್ಪಕವಾಗಿ ಕಾರ್ಯ ನಿರ್ವಹಿಸದೇ ಇದ್ದಲ್ಲಿ, ಪಂಚಾಯತಿಯ ಕಾನೂನು, ಅಥವಾ ಸರ್ಕಾರದ ಇನ್ನಾವುದೇ ಆಜ್ಞೆಗಳನ್ನು ಪಾಲಿಸದೇ ಇದ್ದಲ್ಲಿ ಅಂತಹ ಪಂಚಾಯತಿಗಳನ್ನು ಸರ್ಕಾರವು ವಿಸರ್ಜಿಸುವ ಪರಮಾಧಿಕಾರ ಹೊಂದಿರುವುದು.

ಪಂಚಾಯತಿ ಸಂಸ್ಥೆಗಳ ಚುನಾವಣೆಯನ್ನು ಕುರಿತಂತೆ ರಾಜ್ಯ ಸರ್ಕಾರವು ಪ್ರತ್ಯೇಕವಾದ ಚುನಾವಣಾ ಆಯೋಗವನ್ನು ರಚಿಸಿದೆ. ಡಿಸೆಂಬರ್ ೧೯೯೩ ಗ್ರಾಮ ಪಂಚಾಯತಿಗಳಿಗೆ ಮತ್ತು ಮಾರ್ಚ್ ೧೯೯೫ರಲ್ಲಿ ತಾಲೂಕು ಮತ್ತು ಜಿಲ್ಲಾ ಪಂಚಾಯತಿಗಳಿಗೆ ಪ್ರಥಮವಾಗಿ ಹೊಸ ಕಾನೂನಿನ ಅನ್ವಯ ಚುನಾವಣೆಗಳು ನಡೆದವು.

## ಜಿಲ್ಲಾ ಪಂಚಾಯತಿಯ ಕರ್ತವ್ಯಗಳು

ಜಿಲ್ಲಾ ಪಂಚಾಯತಿಗಳು ರಾಜ್ಯ ಸರ್ಕಾರದ ಮೇಲ್ವಿಚಾರಣೆಗೆ ಒಳಪಟ್ಟಿವೆ. ಜಿಲ್ಲೆಯ ಸರ್ವಾಂಗೀಣ ಅಭಿವೃದ್ಧಿಗೆ ಅಗತ್ಯ ಯೋಜನೆಗಳನ್ನು ರೂಪಿಸುವುದು, ಅವುಗಳ ಪರಿಣಾಮಕಾರಿಯಾದ ಅನುಷ್ಠಾನ, ತಾಲೂಕು ಪಂಚಾಯತ್ ಮತ್ತು ಗ್ರಾಮ ಪಂಚಾಯತಿಗಳ ಮಧ್ಯೆ ಪರಸ್ಪರ ಸಾಮರಸ್ಯ ಕಾಪಾಡುವುದು, ಅವುಗಳು ಕೈಗೊಳ್ಳುವ ಯೋಜನೆಗಳ ಮೇಲ್ವಿಚಾರಣೆ, ಮಾರ್ಗದರ್ಶನ, ಮುಂತಾದವುಗಳು ಜಿಲ್ಲಾ ಪಂಚಾಯತ್ ಸಾಮಾನ್ಯ ಕೆಲಸಗಳು. ಕಾನೂನಿನ ಅನ್ವಯ ಜಿಲ್ಲಾ ಪಂಚಾಯತ್ ಕೈಗೊಳ್ಳಬೇಕಾದ ಕಾರ್ಯಗಳ ಪಟ್ಟಿಯು ಸುಮಾರು ೩೦ ವಿವಿಧ ಅಭಿವೃದ್ಧಿ ಕಾರ್ಯಗಳನ್ನು ಒಳಗೊಂಡಿರುವುದು.

**ಹಣಕಾಸು**

ಜಿಲ್ಲಾ ಪಂಚಾಯತ್‌ಗೆ ತನ್ನದೇ ಆದ ಪ್ರತ್ಯೇಕವಾದ ಪಂಚಾಯತ್ ಫಂಡ್ ಇರುವುದು. ಇದು (೧) ರಾಜ್ಯ ಸಂಚಿತ ನಿಧಿಯಿಂದ ವರ್ಗಾವಣೆಯಾದ ಹಣ, (೨) ಸರ್ಕಾರದ ಅನುದಾನ, (೩) ಸಾಲಗಳು, (೪) ಮುಂಗಡಗಳು, (೫) ವಂತಿಕೆಗಳು (೬) ಆಸ್ತಿಗಳಿಂದ ಬರುವ ಬಾಡಿಗೆ, (೭) ವಿವಿಧ ಸೇವೆಗಳ ಶುಲ್ಕಗಳು, (೮) ಬಡ್ಡಿಯ ಹಣ ಮುಂತಾದವುಗಳನ್ನು ಒಳಗೊಂಡಿರುವುದು. ಜಿಲ್ಲಾ ಪಂಚಾಯತಿಯು ತನ್ನ ಆದಾಯದಲ್ಲಿ ಶೆ. ೨೦ಕ್ಕೆ ಕಡಿಮೆ ಇಲ್ಲದಷ್ಟು ಹಣವನ್ನು ಪ.ಜಾ/ ಪ.ಪಂ.ದವರ ಅಭಿವೃದ್ಧಿಗೆ ವಿನಿಯೋಗಿಸಬೇಕು.

ಜಿಲ್ಲೆಯಲ್ಲಿರುವ ಚುನಾಯಿತ ಜಿಲ್ಲಾ ಪಂಚಾಯತಿಯ ಸದಸ್ಯರ ಒಟ್ಟು ಸ್ಥಾನಗಳ ಸಂಖ್ಯೆ ೫೫, ಆ ಪೈಕಿ ೧೪ ಪರಿಶಿಷ್ಟ ಜಾತಿ, ೩ ಪರಿಶಿಷ್ಟ ವರ್ಗ, ೧೮ ಹಿಂದುಳಿದ ವರ್ಗದವರಿಗೆ (ಎ ವರ್ಗ ೧೪, ಬಿ ವರ್ಗ ೪) ಮತ್ತು ೨೦ ಸಾಮಾನ್ಯ ಸದಸ್ಯರು. ಒಟ್ಟು ಸ್ಥಾನಗಳ ಪೈಕಿ ಎಲ್ಲಾ ವರ್ಗಗಳಲ್ಲಿ ಸೇರಿ ಮಹಿಳೆಯರಿಗೆ ಮೀಸಲಾದ ಸ್ಥಾನಗಳ ಸಂಖ್ಯೆ ೧೯ ಆಗಿತ್ತು. ತಾಲೂಕುವಾರು ಜಿಲ್ಲಾ ಪಂಚಾಯತಿಯ ಸ್ಥಾನಗಳ ಹಂಚಿಕೆ ಈ ರೀತಿ ಇತ್ತು. ಅಫಜಲ್‌ಪುರ (೪), ಆಳಂದ (೬), ಗುಲಬರ್ಗಾ (೬), ಜೇವರ್ಗಿ (೫), ಸೇಡಂ (೪), ಚಿತ್ತಾಪುರ (೬), ಚಿಂಚೋಳಿ (೫), ಯಾದಗಿರಿ (೬), ಶಹಾಪುರ (೬), ಸುರಪುರ (೭).

**ಜಿಲ್ಲಾ ಪಂಚಾಯತಿ, ಗುಲಬರ್ಗಾ**

ಜಿಲ್ಲಾ ಮಟ್ಟದಲ್ಲಿ ಗ್ರಾಮೀಣ ಪ್ರದೇಶಗಳನ್ನು ಒಳಗೊಂಡಂತೆ ಕಾರ್ಯ ನಿರ್ವಹಿಸುತ್ತಿರುವ ಪಂಚಾಯತಿ ರಾಜ್ ಸಂಸ್ಥೆಗಳಲ್ಲಿ ಜಿಲ್ಲಾ ಪಂಚಾಯತಿ ಅತ್ಯಂತ ಪ್ರಮುಖವಾದುದು. ಈ ಸ್ಥಾನಿಕ ಸಂಸ್ಥೆಯ ಮೂಲಕ ಬಹುಪಾಲು ರಾಜ್ಯ ಸರ್ಕಾರದ, ಕೇಂದ್ರ ಸರ್ಕಾರದ ಅಭಿವೃದ್ಧಿ ಕಾರ್ಯಗಳು ವಿಕೇಂದ್ರೀಕರಣಗೊಂಡು ಈ ಸಂಸ್ಥೆಯ ನೇತೃತ್ವದಲ್ಲಿ ಮತ್ತು ಅಧೀನ ಸಂಸ್ಥೆಗಳಾದ ತಾಲೂಕು ಪಂಚಾಯತಿ ಮತ್ತು ಗ್ರಾಮ ಪಂಚಾಯತಿಗಳ ಮೂಲಕ ಗ್ರಾಮೀಣ ಸಮಷ್ಟಿಯನ್ನು ತಲುಪುತ್ತವೆ.

೧೯೮೩ರ ಕರ್ನಾಟಕ ಜಿಲ್ಲಾ ಪರಿಷತ್, ತಾಲೂಕು ಪಂಚಾಯತಿ ಸಮಿತಿ, ಮಂಡಳ ಪಂಚಾಯತಿ ಮತ್ತು ನ್ಯಾಯ ಪಂಚಾಯತಿ ಅಧಿ ನಿಯಮದನ್ವಯ ಗುಲಬರ್ಗಾ ಜಿಲ್ಲಾ ಪರಿಷತ್ತು ೧೯೮೭ ಏಪ್ರಿಲ್ ಒಂದರಿಂದ ಕಾರ್ಯಾರಂಭ ಮಾಡಿತು. ಜಿಲ್ಲಾ ಪರಿಷತ್ತಿಗೆ ದಿನಾಂಕ ೨.೧.೧೯೮೭ರಲ್ಲಿ ಪ್ರಥಮ ಚುನಾವಣೆಗಳು ನಡೆದವು. ಜಿಲ್ಲಾ ಪರಿಷತ್ ರಚನೆಗೊಂಡಾಗ ೧೯೮೭ರಲ್ಲಿ ಅದರ ಕಾರ್ಯ ವ್ಯಾಪ್ತಿ ೧೬,೨೨೪ ಚದರ ಕಿ.ಮಿ. ವ್ಯಾಪಿಸಿದ್ದರೆ, ಅದರ ಕಾರ್ಯ ವ್ಯಾಪ್ತಿಗೆ ಒಳಪಟ್ಟ ಜನಸಂಖ್ಯೆ ೧೬,೩೪,೨೨೬ (೧೯೮೧) ಆಗಿತ್ತು. ಜಿಲ್ಲಾ ಪರಿಷತ್ತಿನ ಒಟ್ಟು ಸದಸ್ಯರ ಸಂಖ್ಯೆ ೭೩ ಆಗಿತ್ತು. ಆ ಪೈಕಿ ಚುನಾಯಿತ ಸದಸ್ಯರ ಸಂಖ್ಯೆ ೫೫ ಆಗಿತ್ತು. ಇನ್ನುಳಿದಂತೆ ೧೮ ಜನರಲ್ಲಿ ೧೨ ಜನ ವಿಧಾನ ಸಭೆಯ ಸದಸ್ಯರು, ಮೂರು ಲೋಕ ಸಭಾ ಸದಸ್ಯರು, ಇಬ್ಬರು ವಿಧಾನ ಪರಿಷತ್ ಸದಸ್ಯರು, ಇನ್ನೊಬ್ಬರು ನಾಮಕರಣಗೊಂಡ ಜಿಲ್ಲಾ ಸಹಕಾರಿ ಬ್ಯಾಂಕಿನ ಅಧ್ಯಕ್ಷರಾಗಿದ್ದರು. ೫೫ ಜನ ಚುನಾಯಿತರ ಪೈಕಿ ೧೪ ಮಹಿಳೆಯರಿಗೆ, ೧೧ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡದವರಿಗೆ ಮೀಸಲಾತಿ ಇದ್ದರೆ ೩೦ ಜನರು ಸಾಮಾನ್ಯ ಅಭ್ಯರ್ಥಿಗಳು ಆಗಿದ್ದರು.

ಜಿಲ್ಲಾ ಪರಿಷತ್ತಿನ ಕಾರ್ಯವ್ಯಾಪ್ತಿಯಲ್ಲಿ ಹಿಂದೆ ಇದ್ದ ಗ್ರಾಮ ಪಂಚಾಯತಿಗಳ ಬದಲಾಗಿ ೧೬೯ ಮಂಡಳ ಪಂಚಾಯತಿಗಳು, ಕಾರ್ಯ ನಿರ್ವಹಿಸುತ್ತಿದ್ದವು. ಜಿಲ್ಲೆಯಲ್ಲಿದ್ದ ಒಟ್ಟು ಗ್ರಾಮಗಳ ಸಂಖ್ಯೆ ೧೩೯೫. ಜಿಲ್ಲಾ ಪರಿಷತ್ತಿನ ಆಡಳಿತವು ಸುಗಮವಾಗಿ ನಡೆಯಲು ಸಹಾಯಕವಾಗುವಂತೆ ೯ ಸ್ಥಾಯಿ ಸಮಿತಿಗಳನ್ನು ರಚಿಸಲಾಗಿತ್ತು.

ಐದು ವರ್ಷಗಳ ಆಡಳಿತದ ನಂತರ ೧೯೯೨ರ ಜನೆವರಿಯಲ್ಲಿ ಜಿಲ್ಲಾ ಪರಿಷತ್ತುಗಳನ್ನು ಮತ್ತು ಅವುಗಳ ಅಧೀನ ಸಂಸ್ಥೆಗಳನ್ನು ರದ್ದುಪಡಿಸಲಾಯಿತು. ಚುನಾಯಿತ ಪ್ರತಿನಿಧಿಗಳ ಬದಲಿಗೆ ೧೪.೧.೧೯೯೨ರಿಂದ ಆಡಳಿತಾಧಿಕಾರಿಯನ್ನು ನಿಯಮಿಸಲಾಯಿತು.

೧೯೯೩ ಮೇ ತಿಂಗಳಲ್ಲಿ ಜಾರಿಗೆ ಬಂದ ಕರ್ನಾಟಕ ಪಂಚಾಯತಿ ಕಾನೂನು ೧೯೯೩ರ ಅನ್ವಯ ಗುಲಬರ್ಗಾ ಜಿಲ್ಲಾ ಪರಿಷತ್ ಬದಲಿಗೆ ಗುಲಬರ್ಗಾ ಜಿಲ್ಲಾ ಪಂಚಾಯತಿಯು ರಚನೆಗೊಂಡಿತು. ಸದರಿ ಪಂಚಾಯತಿಗೆ ೧೯೯೫ರ

ಮಾರ್ಚಿಯಲ್ಲಿ ಪ್ರಥಮ ಚುನಾವಣೆಯ ನಡೆಯಿತು. ಜಿಲ್ಲಾ ಪಂಚಾಯತಿಯು ೮.೫.೧೯೯೫ರಿಂದ ಕಾರ್ಯಾರಂಭ ಮಾಡುತ್ತಿದ್ದು ೫೫ ಜನ ಚುನಾಯಿತ ಪ್ರತಿನಿಧಿಗಳನ್ನು ಹೊಂದಿರುವುದು. (ಜಿಲ್ಲಾ ಪಂಚಾಯತಿಯ ಅಭಿವೃದ್ಧಿ ಕಾರ್ಯವನ್ನು ಇತರ ಅಧ್ಯಾಯಗಳಲ್ಲಿ ವಿವರಿಸಲಾಗಿದೆ.)

## ಗ್ರಾಮೀಣ ನೀರು ಸರಬರಾಜು ಮತ್ತು ನೈಮಲ್ಯ ಯೋಜನೆ

ಬಹುಪಾಲು ಸಾಂಕ್ರಾಮಿಕ ರೋಗಗಳಿಗೆ ಮತ್ತು ನಾರುಹುಣ್ಣು, ಫ್ಲೋರೋಸಿಸ್ ಮುಂತಾದ ತೊಂದರೆಗಳಿಗೆ ಅಶುದ್ಧವಾದ ಅಸುರಕ್ಷಿತ ಕುಡಿಯುವ ನೀರೇ ಕಾರಣ. ಸ್ವಾತಂತ್ರ್ಯ ನಂತರದ ದಶಕಗಳಲ್ಲಿ ಗ್ರಾಮೀಣ ಪ್ರದೇಶಗಳಲ್ಲಿಯೂ ಶುದ್ಧವಾದ ಕುಡಿಯುವ ನೀರನ್ನು ಒದಗಿಸಲು ಮತ್ತು ಗ್ರಾಮ ನೈರ್ಮಲ್ಯ ಸುಧಾರಿಸಲು ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಹಲವಾರು ಯೋಜನೆಗಳನ್ನು ರೂಪಿಸಿ ಜಾರಿಯಲ್ಲಿ ತಂದಿವೆ. ನಗರಗಳಿಗೆ ಸುರಕ್ಷಿತ ಕುಡಿಯುವ ನೀರು ಮತ್ತು ಒಳ ಚರಂಡಿ ವ್ಯವಸ್ಥೆಯನ್ನು ನೋಡಿಕೊಳ್ಳಲು ಪ್ರತ್ಯೇಕವಾದ ರಾಜ್ಯ ಮಟ್ಟದ ಮಂಡಳಿ ರಚನೆಯಾದ ನಂತರ ಗ್ರಾಮೀಣ ನೀರು ಪೂರೈಕೆ ಯೋಜನೆಯನ್ನು ನೋಡಿಕೊಳ್ಳಲು ಸಾರ್ವಜನಿಕ ಆರೋಗ್ಯ ಮತ್ತು ಇಂಜಿನಿಯರಿಂಗ್ (ಪಿ.ಎಚ್.ಇ.) ವಿಭಾಗಗಳು ೧೯೭೫ರಿಂದ ಕಾರ್ಯ ನಿರ್ವಹಿಸುತ್ತಿದ್ದವು. ಈಗ ಈ ಕಾರ್ಯವನ್ನು ಜಿಲ್ಲಾ ಪಂಚಾಯತಿಗಳು ನಿರ್ವಹಿಸುತ್ತಿವೆ. ಗ್ರಾಮೀಣ ನೀರು ಪೂರೈಕೆ ಯೋಜನೆಯನ್ನು ರಾಜ್ಯ ವಲಯ ಯೋಜನೆ. ರಾಷ್ಟ್ರೀಯ ಗ್ರಾಮೀಣ ನೀರು ಪೂರೈಕೆ ಯೋಜನೆ ಮತ್ತು ತ್ವರಿತ ಗ್ರಾಮೀಣ ನೀರು ಪೂರೈಕೆ ಯೋಜನೆ (ಕೇಂದ್ರ ವಲಯ) ಎಂದು ಎರಡು ಪ್ರಮುಖ ವಲಯಗಳಾಗಿ ವಿಂಗಡಿಸಲಾಗಿದೆ. ೧೯೭೫-೭೭ ರಿಂದ ಕೇಂದ್ರ ವಲಯದ ತ್ವರಿತ ನೀರು ಪೂರೈಕೆ ಯೋಜನೆಗಳ ಸಂಪೂರ್ಣ ವೆಚ್ಚವನ್ನು ಕೇಂದ್ರ ಸರ್ಕಾರವೇ ಭರಿಸುವುದು.ಈ ಪ್ರಮುಖ ಯೋಜನೆಗಳು ಅಲ್ಲದೇ ಜಿಲ್ಲಾ ಯೋಜನೆಯ ಅಂತರ್ಗತ ಕಿರು ನೀರು ಸರಬರಾಜು ಯೋಜನೆ, ತೆರೆದ ಭಾವಿಗಳ ಯೋಜನೆ ಮುಂತಾದ ಹಲವಾರು ಯೋಜನೆಗಳನ್ನು ರಾಜ್ಯ ಮತ್ತು ಕೇಂದ್ರ ವಲಯದಲ್ಲಿ ಅವಳಡಿಸಲಾಗಿದೆ. ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರ ವಸತಿ ಪ್ರದೇಶಗಳಲ್ಲಿ ಪ್ರತ್ಯೇಕವಾದ ಕುಡಿಯುವ ನೀರಿನ ಯೋಜನೆಗಳನ್ನು ಕೇಂದ್ರ ವಲಯ ಮತ್ತು ರಾಜ್ಯ ವಲಯದ ಯೋಜನೆಗಳಲ್ಲಿ ವಿಶೇಷ ಘಟಕ ಯೋಜನೆಗಳನ್ನಾಗಿ ಅಳವಡಿಸಲಾಗಿದೆ.

## ಗುಲಬರ್ಗಾ ಜಿಲ್ಲೆಯಲ್ಲಿ ಗ್ರಾಮಾಂತರ ಕುಡಿಯುವ ನೀರಿನ ಯೋಜನೆಯಡಿಯಲ್ಲಿ ೧೯೯೬-೯೭ರವರೆಗೆ ಸಾಧಿಸಿದ ಪ್ರಗತಿಯ ವಿವರ

ವಿವಿಧ ಯೋಜನೆಗಳ ಅಡಿಯಲ್ಲಿ ಪೂರ್ಣಗೊಂಡಿರುವ ಯೋಜನೆಗಳು

| ತಾಲೂಕು | ಪಿ. ಡಬ್ಲ್ಯೂ ಎಸ್. | | | | | ಎಂ. ಡಬ್ಲ್ಯೂ ಎಸ್ | | | | | ಬಿ. ಡಬ್ಲ್ಯೂ ಎಸ್ | | | | |
|---|---|---|---|---|---|---|---|---|---|---|---|---|---|---|---|
| | ೧-೪-೯೪ರ ವರೆಗೆ | ೯೪-೯೫ | ೯೫-೯೬ | ೯೬-೯೭ | ಒಟ್ಟು | ೧-೪-೯೪ರ ವರೆಗೆ | ೯೪-೯೫ | ೯೫-೯೬ | ೯೬-೯೭ | ಒಟ್ಟು | ೧-೪-೯೪ರ ವರೆಗೆ | ೯೪-೯೫ | ೯೫-೯೬ | ೯೬-೯೭ | ಒಟ್ಟು |
| **ಜಿಲ್ಲಾ ಪಂಚಾಯತ್ ಇಂಜಿನಿಯರಿಂಗ್ ವಿಭಾಗ, ಗುಲಬರ್ಗಾ** | | | | | | | | | | | | | | | |
| ಅಫಜಲ್‌ಪುರ | ೨೦ | ೭ | ೮ | ೧೧ | ೪೬ | ೫೪ | ೫ | ೧೦ | ೫ | ೭೪ | ೬೩೫ | ೬೧ | ೫೭ | ೫೨ | ೮೦೫ |
| ಆಳಂದ | ೪೪ | ೧೪ | ೧೬ | ೫ | ೭೯ | ೫೭ | ೧೦ | ೮ | ೯ | ೮೪ | ೭೨೫ | ೬೫ | ೬೨ | ೭೪ | ೯೨೬ |
| ಚಿಂಚೋಳಿ | ೪೬ | ೪ | ೩ | ೨ | ೫೫ | ೨೭ | ೧೦ | ೯ | ೭ | ೫೩ | ೭೦೦ | ೬೪ | ೭೦ | ೬೨ | ೮೯೬ |
| ಚಿತ್ತಾಪುರ | ೪೪ | ೪ | ೮ | ೬ | ೬೨ | ೩೯ | ೩ | ೭ | ೬ | ೫೫ | ೭೫೭ | ೬೭ | ೫೫ | ೭೧ | ೯೫೦ |
| ಗುಲಬರ್ಗಾ | ೪೩ | ೭ | ೩ | ೫ | ೫೮ | ೪೪ | ೪ | ೪ | ೧೧ | ೬೩ | ೭೬೧ | ೬೧ | ೬೭ | ೭೭ | ೯೬೬ |
| **ಒಟ್ಟು** | ೧೯೭ | ೩೬ | ೩೮ | ೨೯ | ೩೦೦ | ೨೨೧ | ೩೨ | ೩೮ | ೩೮ | ೩೨೯ | ೩೫೭೮ | ೩೧೮ | ೩೧೧ | ೩೩೬ | ೪೫೪೩ |
| **ಜಿಲ್ಲಾ ಪಂಚಾಯತ್ ಇಂಜಿನಿಯರಿಂಗ್ ವಿಭಾಗ, ಯಾದಗಿರಿ** | | | | | | | | | | | | | | | |
| ಯಾದಗಿರಿ | ೪೨ | ೩ | ೫ | ೮ | ೫೮ | ೧೩೨ | ೨೬ | ೧೩ | ೧೧ | ೧೮೨ | ೮೪೨ | ೫೫ | ೬೬ | ೭೧ | ೧೦೩೪ |
| ಶಹಾಪುರ | ೪೨ | ೪ | ೩ | ೩ | ೫೨ | ೪೭ | ೭ | ೬ | ೮ | ೬೮ | ೬೪೨ | ೫೫ | ೫೫ | ೬೧ | ೮೧೩ |
| ಸುರಪುರ | ೨೯ | ೩ | ೪ | ೭ | ೪೩ | ೩೪ | ೪ | ೪ | ೯ | ೫೧ | ೬೭೦ | ೪೯ | ೬೧ | ೭೧ | ೮೫೧ |
| ಜೇವರ್ಗಿ | ೩೪ | ೪ | ೧೦ | ೨ | ೫೦ | ೪೬ | ೪ | ೭ | ೧ | ೫೮ | ೫೭೮ | ೪೫ | ೫೫ | ೭೭ | ೭೫೫ |
| ಸೇಡಂ | ೨೬ | ೩ | ೪ | ೫ | ೩೮ | ೩೪ | ೪ | ೫ | ೨ | ೪೫ | ೫೫೧ | ೪೫ | ೪೮ | ೪೨ | ೬೮೬ |
| **ಒಟ್ಟು** | ೧೭೩ | ೧೭ | ೨೬ | ೨೫ | ೨೪೧ | ೨೯೩ | ೪೫ | ೩೫ | ೩೧ | ೪೦೪ | ೩೨೮೩ | ೨೪೯ | ೨೮೫ | ೩೨೨ | ೪೧೩೯ |

ಪಿ.ಡಬ್ಲ್ಯೂ ಎಸ್ : ಪೈಪುಗಳ ಮೂಲಕ ನೀರು ಪೂರೈಕೆ ಯೋಜನೆ

ಎಂ.ಡಬ್ಲ್ಯೂ ಎಸ್ : ಕಿರು (ಮಿನಿ) ನೀರು ಪೂರೈಕೆ ಯೋಜನೆ

ಬಿ.ಡಬ್ಲ್ಯೂ ಎಸ್ : ಕೊಳವೆ ಬಾವಿ (ಬೋರ್ ವೆಲ್) ಮೂಲಕ ನೀರು ಪೂರೈಕೆ ಯೋಜನ

**ವಸತಿ ಯೋಜನೆ**

ವಿಶೇಷವಾಗಿ ನಗರ ಮತ್ತು ಅರೆನಗರ ಪ್ರದೇಶಗಳಲ್ಲಿ ಇರುವ ಹಲವಾರು ಸಮಸ್ಯೆಗಳಲ್ಲಿ ವಸತಿಯ ಸಮಸ್ಯೆ ಬಹು ಮುಖ್ಯವಾದುದು. ಇತ್ತೀಚೆಗೆ ಗ್ರಾಮೀಣ ಜನತೆಯೂ ಈ ಸಮಸ್ಯೆಯನ್ನು ಎದುರಿಸುತ್ತಿರುವುದು. ಬೆಳೆಯುತ್ತಿರುವ ನಗರೀಕರಣ, ಕೈಗಾರೀಕಾಕರಣ, ದೊಡ್ಡ ಪ್ರಮಾಣದಲ್ಲಿ ನಗರಕ್ಕೆ ವಲಸೆ ಮುಂತಾದವುಗಳಿಂದ ಬೇಡಿಕೆಗೆ ಪೂರಕವಾಗಿ ಸೂಕ್ತ ವಸತಿ ವ್ಯವಸ್ಥೆ ಇಲ್ಲದೇ ಇರುವ ಕೊರತೆ ಇತರೆಡೆಯಂತೆ ಈ ಜಿಲ್ಲೆಯ ನಗರ ಪ್ರದೇಶಗಳಲ್ಲಿ ವಿಶೇಷವಾಗಿ ಕಂಡು ಬರುವುದು. ಇತ್ತೀಚಿನ ವರ್ಷಗಳಲ್ಲಿ ಹೆಚ್ಚುತ್ತಿರುವ ನಿರ್ಮಾಣ ವೆಚ್ಚ, ಅಭಿವೃದ್ಧಿ ಹೊಂದಿದ ನಿವೇಶನಗಳ ಕೊರತೆ ಮತ್ತು ಭಾರಿ ಬೆಲೆ, ವಸತಿಯ ಸಮಸ್ಯೆಯನ್ನು ಇನ್ನೂ ತೀವ್ರಗೊಳಿಸಿವೆ. ಇತ್ತೀಚಿನ ದಶಕಗಳಲ್ಲಿ ಈ ಸಮಸ್ಯೆಯನ್ನು ನಿವಾರಿಸಲು ಸರ್ಕಾರ, ಸರ್ಕಾರೇತರ ಸಂಸ್ಥೆಗಳಾದ ಗೃಹ ಮಂಡಳಿ, ನಗರ ಸಭೆ, ನಗರಾಭಿವೃದ್ಧಿ ಪ್ರಾಧಿಕಾರ, ಕೊಳಚೆ ನಿರ್ಮೂಲನಾ ಮಂಡಳಿ, ಸಹಕಾರಿ ಗೃಹ ನಿರ್ಮಾಣ ಸಂಘಗಳು, ಜೀವ ವಿಮಾ ನಿಗಮ, ಹುಡ್ಕೋ ಮತ್ತು ಇತರೇ ಬ್ಯಾಂಕಿಂಗ್ ಸಂಸ್ಥೆಗಳು ಗೃಹ ನಿರ್ಮಾಣಕ್ಕೆ ಆರ್ಥಿಕ ನೆರವನ್ನು ನೀಡುತ್ತಿರುವುವು. ವಸತಿ ಸಮಸ್ಯೆಯನ್ನು ನಿವಾರಿಸುವಲ್ಲಿ ಕರ್ನಾಟಕ ಗೃಹ ಮಂಡಳಿಯು ಬಹು ದೊಡ್ಡ ಪಾತ್ರ ವಹಿಸುತ್ತಿರುವುದು.

ಕರ್ನಾಟಕ ಗೃಹ ಮಂಡಳಿ, ಬೆಂಗಳೂರು, ಸಂಸ್ಥೆಯ ಗುಲಬರ್ಗಾ ವಿಭಾಗವು ೧೯೬೬ರಲ್ಲಿ ಗುಲಬರ್ಗಾ, ಬೀದರ್, ಬಿಜಾಪುರ ಮತ್ತು ಬಳ್ಳಾರಿ ಜಿಲ್ಲೆಗಳ ಕಾರ್ಯ ವ್ಯಾಪ್ತಿಯನ್ನು ಒಳಗೊಂಡಂತೆ ಕಾರ್ಯಾರಂಭ ಮಾಡಿತು. ೧೯೭೧ರಲ್ಲಿ ಗುಲಬರ್ಗಾ ಮತ್ತು ಬೀದರ್ ಸೇರಿದಂತೆ ಪ್ರತ್ಯೇಕವಾದ ವಿಭಾಗವನ್ನು ರಚಿಸಲಾಯಿತು. ಗೃಹ ಮಂಡಳಿಯ ಗುಲಬರ್ಗಾ ವಿಭಾಗದಲ್ಲಿ (ಬೀದರ್ ಸೇರಿ) ೧೯೬೬ ರಿಂದ ಕಳೆದ ೩೦ ವರ್ಷಗಳಲ್ಲಿ ಸುಮಾರು ೨,೬೩೮ ವಿವಿಧ ಆದಾಯ ವರ್ಗದ ಮನೆಗಳನ್ನು ರೂ. ೬ ಕೋಟಿ ವೆಚ್ಚದಲ್ಲಿ ನಿರ್ಮಿಸಲಾಗಿದೆ. ಆ ಪೈಕಿ ಗುಲಬರ್ಗಾ ನಗರದಲ್ಲಿ ೧೪೯೯ ಮನೆಗಳನ್ನು ರೂ. ೩೮೨.೫೨ ಲಕ್ಷ ವೆಚ್ಚದಲ್ಲಿ ನಿರ್ಮಿಸಲಾಯಿತು. ಇತ್ತೀಚಿನ ವರ್ಷಗಳಲ್ಲಿ ಜಿಲ್ಲೆಯ ಇತರ ಸ್ಥಳಗಳಾದ ಚಿಂಚೋಳಿ, ಚಿತ್ತಾಪುರ, ಸೇಡಂ, ಶಹಬಾದ್, ಜೇವರ್ಗಿ, ಶಹಾಪುರ, ಸುರಪುರ, ಯಾದಗಿರಿಗಳಲ್ಲಿ ಒಟ್ಟು ೩೬೧ ಮನೆಗಳನ್ನು ರೂ. ೬೫.೧೩ ಲಕ್ಷ ರೂ. ವೆಚ್ಚದಿಂದ ಕಟ್ಟಲಾಯಿತು. ಇದೂ ಅಲ್ಲದೇ ಪ್ರತಿ ತಾಲೂಕು ಕೇಂದ್ರಗಳಲ್ಲಿ ೧೨ ರಂತೆ ೧೨೦ ಮನೆಗಳನ್ನು ರೂ. ೧೪.೪ ಲಕ್ಷ ವೆಚ್ಚದಲ್ಲಿ ಶಿಕ್ಷಕರಿಗಾಗಿ ಕಟ್ಟಲಾಗಿದೆ. ಹಾಲಿ ಜಾರಿಯಲ್ಲಿರುವ ಯೋಜನೆಗಳಲ್ಲಿ ಮಂಡಳಿಯು ಗುಲಬರ್ಗಾ ಜಿಲ್ಲೆಗೆ ಸೀಮಿತವಾದಂತೆ ೬೭೯ ವಿವಿಧ ಕಾಮಗಾರಿಗಳ ಕೆಲಸ ನಡೆಯುತ್ತಿದ್ದು ಡಿಸೆಂಬರ್ ೯೫ರ ತನಕ ಈ ಬಗ್ಗೆ ವೆಚ್ಚವಾದ ಹಣ ರೂ. ೪೪೪.೫೮೮ ಲಕ್ಷ ರೂ ಎಂದು ತಿಳಿದು ಬರುವುದು. ಈ ಪೈಕಿ ೨೪೯ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆ (೧೯೯೬). ಸಹಕಾರಿ ವಲಯದಲ್ಲಿಯೂ ಗೃಹ ನಿರ್ಮಾಣ ಸಂಘಗಳು ವಸತಿ ಸಮಸ್ಯೆಯನ್ನು ನಿವಾರಿಸಲು ತುಂಬಾ ಸಹಕಾರಿಯಾಗಿವೆ. ಈ ಜಿಲ್ಲೆಯಲ್ಲಿ ೯೨ ಗೃಹ ನಿರ್ಮಾಣ ಸಹಕಾರ ಸಂಘಗಳು ಇದ್ದು ಅವುಗಳ ಸದಸ್ಯರ ಸಂಖ್ಯೆ ಸುಮಾರು ೨೨,೦೦೦ ಇರುವುದು. ತಾಲೂಕು ಮಟ್ಟದಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದವರಿಗೆ ಮೀಸಲಾದ ಗೃಹ ನಿರ್ಮಾಣ ಸಂಘಗಳು ಇರುವುವು. ವಸತಿಗೆ ಸಂಬಂಧಪಟ್ಟಂತೆ ಇಂದಿರಾ ಆವಾಸ್, ಜನತಾ ಮನೆ ಯೊಜನೆ, ಅಂಬೇಡ್ಕರ್ ಯೋಜನೆ ಮುಂತಾದ ಕೇಂದ್ರ ಪುರಸ್ಕೃತ ಯೋಜನೆಗಳು ಇರುವವು.

ಇಂದಿರಾ ಆವಾಸ್ ಯೋಜನೆಯಲ್ಲಿ ೯೪-೯೫ನೇ ಸಾಲಿನಲ್ಲಿ ಜಿಲ್ಲೆಯಾದ್ಯಂತ ೧೩೧೫ ಮನೆಗಳನ್ನು ಕಟ್ಟಿ ಪೂರೈಸಲಾಯಿತು. ಈ ಬಗ್ಗೆ ಖರ್ಚಾದ ಹಣ ರೂ. ೧೯೯.೪೯ ಲಕ್ಷ. ಅದರ ಮುಂದಿನ ವರ್ಷ ಸದರಿ ಯೋಜನೆಯಲ್ಲಿ ನಿರ್ಮಾಣಗೊಂಡ ಮನೆಗಳ ಸಂಖ್ಯೆ ೪೦೭೧, ಖರ್ಚಾದ ಹಣ ರೂ. ೬೧೧.೦೪ ಲಕ್ಷ ಆಗಿತ್ತು. ೧೯೯೬-೯೭ನೇ ಸಾಲಿನಲ್ಲಿ ಜಿಲ್ಲೆಯಾದ್ಯಂತ ಇಂದಿರಾ ಆವಾಸ್ ಯೋಜನೆಯಲ್ಲಿ ೮೧೧ ಮನೆಗಳು ರೂ. ೧೪೨.೫೭ ಲಕ್ಷ ವೆಚ್ಚದಲ್ಲಿ ಕಟ್ಟಲ್ಪಟ್ಟಿವೆ. ಉಳಿದ ಯೋಜನೆಗಳಾದ ಆಶ್ರಯ ಯೋಜನೆಯಲ್ಲಿ ೧೦೬೭ ನಿವೇಶನಗಳನ್ನು (ವೆಚ್ಚ ರೂ. ೩.೧೯ ಲಕ್ಷ), ಡಾ. ಅಂಬೇಡ್ಕರ್ ವಸತಿ ಯೋಜನೆ ಅಡಿಯಲ್ಲಿ ೧೨೪೪ ಮನೆಗಳು ರೂ. ೨೫೭.೦೮ ಲಕ್ಷ ವೆಚ್ಚದಲ್ಲಿ ಕಟ್ಟಲ್ಪಟ್ಟಿವೆ.